# ಪ್ರಸಾದ

ಮಾಸಿಕ

ಸಂಪುಟ 38 ಸಂಚಿಕೆ 6 ಜೂನ್ 2023



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ತಾಳವಾಡಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಕರ್ನಾಟಕ ಗಡಿನಾಡು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ 'ಗಡಿನಾಡು ಸಾಂಸ್ಕೃತಿಕ ಉತ್ಸವ'ವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ದಾಕ್ಷಾಯಣಿ ಕುಮಾರ್, ಶ್ರೀ ಪ್ರಕಾಶ್ ಮತ್ತೀಹಳ್ಳಿ, ಶ್ರೀ ವಿಶ್ವನಾಥ್ ಪಿ. ಹಿರೇಮಠ, ಡಾ. ಸಿ. ಸೋಮಶೇಖರ್, ಶ್ರೀ ಬಿ.ಎಸ್. ಪುಟ್ಟರಾಜು, ಶ್ರೀ ಮಲ್ಲಿಕಾರ್ಜುನಸ್ವಾಮಿ, ಶ್ರೀಮತಿ ರತ್ನಮ್ಮ ಕಾಳನಾಯ್ಕ, ಶ್ರೀಮತಿ ಎಂ. ಭಾಗೀರಥಿ, ಶ್ರೀ ಕಾಳನಾಯ್ಕರವರುಗಳಿದ್ದಾರೆ (21 ಜೂನ್ 2023)



ಮೈಸೂರು ಜೆಎಸ್‌ಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ 'ಉನ್ನತಿ –2023' ನರರೋಗಗಳ ರಾಷ್ಟ್ರೀಯ ವಿಚಾರಸಂಕಿರಣವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಈಶ್ವರ್ ವಿ. ಬಸವರೆಡ್ಡಿಯವರು ಉದ್ಘಾಟಿಸಿದರು. ಡಾ. ವೀಣಾ ಜಿ. ರಾವ್, ಶ್ರೀ ಆರ್. ಮಹೇಶ್, ಡಾ. ಸಿ.ಜಿ. ಬೆಟಸೂರಮಠ ಹಾಗೂ ಡಾ. ಸರ್ಬೇಶ್ವರ್‌ಕರ್‌ರವರುಗಳಿದ್ದಾರೆ (8 ಜೂನ್ 2023)

# ಪ್ರಸಾದ

**ಸಂಪುಟ 38 : ಸಂಚಿಕೆ 6** **ಜೂನ್ 2023**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಶ್ರೀ ಸುತ್ತೂರು ಕ್ಷೇತ್ರಕ್ಕೆ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಭೇಟಿ ನೀಡಿ ಕರ್ತೃ ಗದ್ದುಗೆಯ ದರ್ಶನ ಪಡೆದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿದರು (10 ಜೂನ್ 2023)


**ದಶ ವಾರ್ಷಿಕ : 500/- * : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ನಿಷ್ಕಾಮ ಭಕ್ತಿ 9
**ಶ್ರೀ ಸಿದ್ಧೇಶ್ವರ ಸ್ವಾಮಿಗಳು**
(ಪ್ರವಚನಸಾರ)

ಹಂಬಲ 12
**ಡಾ. ಎಂ.ಎನ್. ನಂದೀಶ್ ಹಂಚೆ**

ಶಬರಶಂಕರ ವಿಲಾಸ–ಟೀಕು 15
**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**
(ವೀರಶೈವ ಟೀಕು ಸಾಹಿತ್ಯ ಸರಣಿ)

ಮಂಟಪ ಶೃಂಗಾರ ಶೋಬಾನೆ ಮತ್ತು ಇತರ ಹಾಡುಗಳು 21
**ಡಾ. ವೈ.ಸಿ. ಭಾನುಮತಿ**
(ವೀರಶೈವ ಅಪ್ರಕಟಿತ ಕೃತಿಮಾಲಿಕೆ)

ಗುರೂರಿನ ರಾಮಲಿಂಗೇಶ್ವರ ದೇವಾಲಯದ ಕ್ಷೇತ್ರ ಅಧ್ಯಯನ 27
**ಡಾ. ಎಸ್.ಜಿ. ರಾಮದಾಸ ರೆಡ್ಡಿ**
(ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ)

ಹುಲ್ಲಹಳ್ಳಿ ಶಾಂತವೀರ ದೇಶಿಕ ವಿರಚಿತ 31
“ಶಿವಲಿಂಗ ಚಾರಿತ್ರ” : ಒಂದು ಪರಿಚಯ
**ಡಾ. ಬಿ. ನಂಜುಂಡಸ್ವಾಮಿ**

ಸರ್ವಜ್ಞ ವಚನ ವ್ಯಾಖ್ಯಾನ 45
**ಪ್ರೊ. ಮೊರಬದ ಮಲ್ಲಿಕಾರ್ಜುನ**

ವಚನ ಪಿತಾಮಹ ಡಾ. ಹಳಕಟ್ಟಿಯವರ ಬದುಕು–ಬರಹ 48
**ನಗರ್ಲೆ ಶಿವಕುಮಾರ**

ಗ್ರಂಥ ಪರಾಮರ್ಶೆ 55

ವಾರ್ತಾವಿಹಾರ 56
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 63

.

.

!

–

.

–

.

**– ಘನಲಿಂಗಿದೇವರು**

# ಗುರುವಾಣಿ

ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ ನಿಮ್ಮ ಧರ್ಮ
ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದಡೆ
ನಿಮಗಾನು ದ್ರೋಹಿಯಯ್ಯಾ ಕೂಡಲಸಂಗಮದೇವಾ
ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ

ಮನುಷ್ಯನ ಬಹಳ ಮುಖ್ಯವಾದ ತೊಡಕೆಂದರೆ ಆತ್ಮರತಿಯಿಂದ ಬಳಲುವುದು. ತಾನು ಮಾತ್ರ ಶ್ರೇಷ್ಠ, ತನ್ನ ಕಾರ್ಯ ಮಾತ್ರ ಸಾಧು, ಇತರರದ್ದು ಕನಿಷ್ಠ, ತಾನೇ ಸರ್ವರಿಗೂ ಮಿಗಿಲಾದವನು ಎಂಬ ಭಾವದಿಂದ ಅರಿವಿನ ದಾರಿಯಾಗಿರುವ ಆತ್ಮದ ಕಣ್ಣನ್ನೇ ಕಳೆದುಕೊಂಡುಬಿಡುತ್ತಾನೆ. ಕಣ್ಣಿದ್ದೂ ಕುರುಡನಾಗಿಬಿಡುತ್ತಾನೆ. ಹೊರಗಿನ ಕತ್ತಲೆಯನ್ನು ಹೋಗಲಾಡಿಸಲು ಹಗಲಿನಲ್ಲಿ ಸೂರ್ಯನಿರುತ್ತಾನೆ. ರಾತ್ರಿಯಾದರೆ ದೀವಟಿಗೆಯಿರುತ್ತದೆ. ಆದರೆ ಬದುಕಿನ ದಾರಿಯನ್ನು ಬೆಳಗಲು ಸೂರ್ಯನಿಗೂ ಸಾಧ್ಯವಿಲ್ಲ, ದೀವಟಿಗೆಗಂತೂ ಆಗುವುದೇ ಇಲ್ಲ. ಬದುಕು ಸುಂದರವೂ ಸುಭಿಕ್ಷವೂ ಆಗಿರಬೇಕಾದರೆ ಒಳಗಿನ ಬೆಳಕು ಬೇಕು. ಆ ಬೆಳಕೇ ಆತ್ಮಜ್ಞಾನ. ಅದು ಹೊರಗಿನ ದೃಷ್ಟಿಗೆ ಕಾಣುವುದಲ್ಲ; ಆತ್ಮದ ಕಣ್ಣಿಗೆ ಮಾತ್ರ ಗೋಚರವಾಗುವಂಥದು.

ಆತ್ಮದ ಬೆಳಕು ಸ್ವಯಂಭುವೂ ಹೌದು, ಪರಾವಲಂಬಿಯೂ ಹೌದು. ಪ್ರತಿ ವ್ಯಕ್ತಿಯಲ್ಲೂ ಇರುವ ಆತ್ಮ ಸ್ವಯಂಪ್ರಕಾಶಮಾನವಾಗಿರುತ್ತದೆ. ಈ ಸ್ವಯಂಭುವಾದ ಬೆಳಕನ್ನು ಮನೋಕ್ಲೇಶಗಳು ಅರಿಷಡ್ವರ್ಗಗಳು ಆವರಿಸಿ ಈ ಬೆಳಕನ್ನು ಮಸುಕು ಮಾಡುತ್ತವೆ, ಸೂರ್ಯನನ್ನು ಆವರಿಸುವ ದಟ್ಟ ಮೋಡಗಳಂತೆ. ಮೋಡಗಳ ಹಿಂದೆ ಸೂರ್ಯ ಪ್ರಕಾಶಿಸುತ್ತಲೇ ಇರುತ್ತಾನೆ. ಆದರೆ ಮೋಡದ ಆವರಣ ತೆರೆಯದೆ ಅದರ ಪ್ರಕಾಶ ಗೋಚರಿಸಲಾರದು. ಮೋಡ ಸರಿಯಬೇಕಾದರೆ ಅದು ಕರಗಿ ಮಳೆಯಾಗಿ ಸುರಿಯಬೇಕು. ಹಾಗೆ ಸುರಿದಾಗ ಸೂರ್ಯನಿಗೆ ಬಿಡುಗಡೆ, ಮೋಡಕ್ಕೆ ಮುಕ್ತಿ. ಭೂಮಿಗೂ ತಂಪು. ಹಾಗೆಯೇ ವ್ಯಕ್ತಿಯ ಮನಸ್ಸಿನಲ್ಲಿರುವ ಅರಿಷಡ್ವರ್ಗಗಳಿಂದ ರೂಪುಗೊಳ್ಳುವ ಆತ್ಮರತಿ ಅಜ್ಞಾನಜನ್ಯ. ಅಂತರಂಗದ ಬೆಳಕು ಮನುಷ್ಯನ ಉತ್ತಮಿಕೆಗೆ ಮಾತ್ರವಲ್ಲ, ಲೋಕದ ಹಿತಕ್ಕೂ ಕಾರಣವಾಗುತ್ತದೆ. ಆದುದರಿಂದಲೇ ಪೂರ್ವಿಕರು ಆತ್ಮಸ್ತುತಿ ಆತ್ಮನಿಂದೆ, ಪರಸ್ತುತಿ ಪರನಿಂದೆಗಳನ್ನು ಕುರಿತು ಬಹಳ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ. ಆತ್ಮಸ್ತುತಿ ಹೇಗೆ ಕೆಡುಕೋ ಆತ್ಮನಿಂದೆ ಕೂಡ ಕೆಡುಕೇ.

ಆತ್ಮವು ಪರಮಾತ್ಮನ ಚಿದಂಶವೇ ಆಗಿರುವ ಅರಿವು ಆದಾಗ ಆತ್ಮಪ್ರತ್ಯಯ ಮಾತ್ರ ಒಡಮೂಡುತ್ತದೆ, ಆತ್ಮರತಿಯಲ್ಲ.

ಬಸವಣ್ಣನವರು ಆತ್ಮಸ್ತುತಿ ಕೆಡುಕಾಗಿರುವ ಹಾಗೆಯೇ ಪರನಿಂದೆಯೂ ಪರಮ ಪಾಪವೆಂದು ಹೇಳಿದ್ದಾರೆ. ಆತ್ಮಸ್ತುತಿ ಆ ವ್ಯಕ್ತಿಯನ್ನು ಮಾತ್ರ ಅಧಃಪತನಕ್ಕೆ ತಳ್ಳಿದರೆ ಪರನಿಂದೆ ಅವನ ಜೊತೆಗೆ ಎದುರಿನ ವ್ಯಕ್ತಿಯ ಚಾರಿತ್ರ್ಯವನ್ನೂ ಹಾಳುಮಾಡುತ್ತದೆ. ಬೇರೆಯವರನ್ನು ನಿಂದಿಸುವ ಯಾವ ಅಧಿಕಾರ ಯಾರಿಗೂ ಇರುವುದಿಲ್ಲ. ಚಾರ್ವಾಕನೊಬ್ಬ ಬುದ್ಧದೇವನನ್ನು ನಿಂದಿಸಿದಾಗ ಆತ ನಗುತ್ತಲೇ ಇದ್ದ. ಆತ ಬುದ್ಧನನ್ನು ಕುರಿತು, "ನಾನು ನಿನ್ನನ್ನು ಈ ಪರಿ ಬೈಯುತ್ತಿದ್ದರೂ ನೀನು ಕೋಪಗೊಳ್ಳದೆ ನಗುತ್ತಿದ್ದೀಯಲ್ಲ" ಎಂದರೆ, ಬುದ್ಧದೇವ ಹೇಳಿದನಂತೆ: "ನಾವು ನಿನ್ನ ಬೈಗುಳಗಳನ್ನು ಸ್ವೀಕರಿಸಿಯೇ ಇಲ್ಲವೆಂದ ಮೇಲೆ ಕೋಪಗೊಳ್ಳುವುದು ಎಲ್ಲಿಂದ?". ಬಸವಣ್ಣನವರು ಮೇಲಿನ ವಚನದಲ್ಲಿ ಆತ್ಮಸ್ತುತಿ ಮತ್ತು ಪರನಿಂದೆಗಳ ಬಗ್ಗೆ ತುಂಬ ಆರ್ತತೆಯಿಂದ ಭಗವಂತನಲ್ಲಿ ವಿನಂತಿಸಿಕೊಳ್ಳುತ್ತಿದ್ದಾರೆ. ಅವರ ಸಂಸರ್ಗಕ್ಕೆ ಬರುವವರು ಆತ್ಮಸ್ತುತಿಯನ್ನು ಪರನಿಂದೆಯನ್ನು ಮಾಡುತ್ತಿರುತ್ತಾರೆ. ಈ ಗುಣ ನನ್ನನ್ನೂ ಆವರಿಸಿಬಿಡಬಹುದು. ಆದುದರಿಂದ ಈ ಬಗೆಯ ಮಾತುಗಳನ್ನು ತನಗೆ ಕೇಳಿಸಲೇಬೇಡ. ಅದು ನಿನ್ನ ಕರ್ತವ್ಯವಷ್ಟೇ ಅಲ್ಲ, ಅದು ನಿನ್ನ ಧರ್ಮ ಕೂಡ. ಕರ್ತವ್ಯದಲ್ಲಿ ಲೋಪವಿರಬಹುದು; ಆದರೆ ಧರ್ಮದಲ್ಲಿ ಲೋಪಕ್ಕೆ ಅವಕಾಶವೇ ಇರುವುದಿಲ್ಲ. ತಾನು ಭಕ್ತ, ನೀನು ಭಗವಂತ, ಆ ಕಾರಣದಿಂದ ಇದು ನಿನ್ನ ಧರ್ಮ. ತನ್ನಲ್ಲಿ ಶ್ರೇಷ್ಠತೆ ಇದೆ, ಉದಾರತೆ ಇದೆ, ಒಳ್ಳೆಯತನವಿದೆ ಎಂದು ಅಂದುಕೊಂಡರೆ, ತಾನು ದ್ರೋಹಿಯಾಗುತ್ತೇನೆ ಅಷ್ಟೆ. ದೇವ, ನಿಮ್ಮ ಶರಣರ ಶ್ರೇಷ್ಠತೆ, ಒಳ್ಳೆಯತನವೇ ಎನ್ನದು ಕೂಡ. ಅಂದರೆ ತಾನು ಶರಣರ ಶರಣ ಎಂಬ ಕಿಂಕರಭಾವವನ್ನು ಇಲ್ಲಿ ಬಸವಣ್ಣನವರು ನಿವೇದಿಸಿಕೊಳ್ಳುತ್ತಾರೆ. ಮಹಾಭಾರತದಲ್ಲಿನ –

> ಪ್ರತ್ಯಕ್ಷಂ ಗುಣವಾದೀ ಯಃ ಪರೋಕ್ಷಂ ತು ವಿನಿಂದಕಃ ।
> ಸ ಮಾನವಃ ಶ್ವಾನಲ್ಲೋಕೇ ನಷ್ಟಲೋಕಪರಾಯಣಃ ॥

ಎಂಬ ಮಾತು ಸದಾ ಮನನೀಯವಾದದ್ದು. ಯಾವನು ಎದುರಿಗೆ ಗುಣಗಾನ ಮಾಡುವನೋ, ಹಿಂದುಗಡೆಯಲ್ಲಿ ನಿಂದಿಸುವನೋ ಅವನು ಈ ಲೋಕದಲ್ಲಿ ನಾಯಿಯಂತೆ ಇರತಕ್ಕವನು. ಅವನಿಗೆ ಇಹವೂ ಇಲ್ಲ, ಪರವೂ ಇಲ್ಲ. ಜ್ಞಾನವೂ ಇಲ್ಲ, ಧರ್ಮವೂ ಇಲ್ಲ. ಆತ್ಮಸ್ತುತಿ/ನಿಂದೆ ಪರರ ನಿಂದೆ/ಸ್ತುತಿ ಎರಡೂ ಆತ್ಮಜ್ಞಾನಕ್ಕೆ ಇರುವ ತೊಡಕುಗಳು. ಅವುಗಳನ್ನು ಪರಿಹರಿಸಿಕೊಂಡು ಎಲ್ಲರೂ ಪರಮಾತ್ಮನನ್ನು ಹೊಂದುವಂತಾಗಬೇಕು.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಗ್ರೀಕ್‌ನ ಅತಿ ದೊಡ್ಡ ತತ್ತ್ವಜ್ಞಾನಿ ಪ್ಲೇಟೋ ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ಪ್ರಧಾನವಾಗಿ ರಾಜ್ಯ, ರಾಜ್ಯಾಧಿಕಾರ, ರಾಜನ ಕರ್ತವ್ಯ ಮುಂತಾದವುಗಳನ್ನು ಕುರಿತು ಗಂಭೀರವಾಗಿ ಚರ್ಚಿಸುತ್ತಾನೆ. ಆನುಷಂಗಿಕವಾಗಿ ಕವಿ ಮತ್ತು ಕಾವ್ಯವನ್ನು ಕುರಿತು ಚರ್ಚಿಸುತ್ತಾನೆ. ಆತನ ಪ್ರಧಾನ ಆಶಯ "ಆದರ್ಶ ರಾಜ್ಯ"ದ ಪರಿಕಲ್ಪನೆ. ಆತ ಸತ್ಯ ಮತ್ತು ಒಳ್ಳೆಯ ಮೌಲ್ಯಗಳಿಂದ ಮಾತ್ರ ಸರಿಯಾದ ರಾಜ್ಯವನ್ನು ನಿರ್ಮಿಸಬಹುದು ಎನ್ನುತ್ತಾನೆ. ಆದರ್ಶ ರಾಜ್ಯದಲ್ಲಿ ಕುಶಲಕರ್ಮಿಗಳು, ರೈತರು, ಯೋಧರು, ಆಡಳಿತಗಾರರು, ತತ್ತ್ವಜ್ಞಾನಿಗಳು ಮತ್ತು ಯತಿಗಳು ರಾಜ್ಯದ ಆಧಾರಸ್ತಂಭವಾಗಿರುತ್ತಾರೆ. ಇದರಿಂದಲೇ ರಾಜ್ಯ ಸುಭಿಕ್ಷವಾಗಿರುತ್ತದೆ. ಇವರುಗಳ ನಡುವೆ ರಾಜನಾದವನು ಸದಾ ಸಹಬಾಳ್ವೆ ಹಾಗೂ ನ್ಯಾಯಯುತ ಜೀವನ ಏರ್ಪಡುವಂತೆ ಮಾಡಬೇಕು. ಪ್ರಜೆಗಳು ಸದಾ ಕ್ರಿಯಾಶೀಲರಾಗಿರುವಂತೆ, ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡಿರುವಂತೆ ನೋಡಿಕೊಳ್ಳಬೇಕು. ಸಾಮಾಜಿಕ ವ್ಯವಸ್ಥೆಯನ್ನು ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ಮಾಡಬೇಕು.

ಪ್ಲೇಟೋನ ಮೇಲ್ಕಂಡ ಮಾತುಗಳು ಮೇಲುನೋಟಕ್ಕೆ ವಾಸ್ತವಕ್ಕೆ ದೂರವೆನ್ನಿಸಬಹುದು. ಆ ಕಾಲದಲ್ಲಿಯೇ "ಆದರ್ಶ ರಾಜ್ಯ"ದ ಪರಿಕಲ್ಪನೆಗೆ ವಿರೋಧಗಳು ವ್ಯಕ್ತವಾಗಿದ್ದವು. ಎಲ್ಲ ಕಾಲಕ್ಕೂ ಆದರ್ಶ ಮತ್ತು ವಾಸ್ತವಗಳ ನಡುವೆ ತಿಕ್ಕಾಟ ಇದ್ದೇ ಇರುತ್ತದೆ. ವಾಸ್ತವ ಎಂದೂ ಮನುಷ್ಯನನ್ನು ಉನ್ನತ ಆಲೋಚನೆಗಳ ಕಡೆಗೆ ಕರೆದೊಯ್ಯುವುದಿಲ್ಲ.

ಆದರ್ಶವೆನ್ನುವುದು ನಾವು ಇರುವ ಸ್ಥಿತಿಯಿಂದ ಉತ್ತಮಿಕೆಯ ಕಡೆಗೆ ನಡೆಯಬೇಕು ಎಂಬುದನ್ನು ಕುರಿತಿರುತ್ತದೆ. ಮನುಷ್ಯನನ್ನು ಹೊರತುಪಡಿಸಿದರೆ ಇತರ ಯಾವ ಪ್ರಾಣಿಗಳಿಗೂ ಆಲೋಚಿಸುವ ಶಕ್ತಿ ಇರುವುದಿಲ್ಲ. ಆದರ್ಶದ ಹಾದಿ ಎಂದೂ ಕಠಿಣ; ವಾಸ್ತವದ ಹಾದಿ ಸರಾಗ, ಆದರೂ ಅಪಾಯ. ಆದುದರಿಂದ ರಾಜನಾದವನು ಎಂದೂ ಜ್ಞಾನಿಯಾಗಿರಬೇಕು. ತತ್ತ್ವಜ್ಞಾನಿಯಾಗಿದ್ದರಂತೂ ಇನ್ನೂ ಉತ್ತಮವೇ ಎನ್ನುತ್ತಾನೆ ಪ್ಲೇಟೋ.

ರಾಜನಾದವನು ತನ್ನ ಪ್ರಜೆಗಳನ್ನು ಆದರ್ಶದ ಕಡೆಗೆ ಮುನ್ನಡೆಸಬೇಕು ಎಂಬ ಕಾರಣದಿಂದಲೇ ಧರ್ಮರಾಯ ಭೀಷ್ಮನಿಗೆ –

> ಕಿಂ ಪಾರ್ಥಿವೇನ ಕರ್ತವ್ಯಂ ಕಿಂ ಚ ಕೃತ್ವಾ ಸುಖೀ ಭವೇತ್ ।
> ಏತದಾಚಕ್ಷ್ವ ತತ್ತ್ವೇವ ಸರ್ವಧರ್ಮಭೃತಾಂ ವರ ॥

ರಾಜನ ಕರ್ತವ್ಯವೇನು? ಏನು ಮಾಡುವುದರಿಂದ ರಾಜನು ಸುಖಿಯಾಗಿರುತ್ತಾನೆ? ಎಂದು ಭೀಷ್ಮನು ಧರ್ಮರಾಯನಿಗೆ ಒಂದು ಒಂಟೆಯ ಕಥೆಯನ್ನು ಹೇಳುತ್ತಾನೆ. ಕೃತಯುಗದಲ್ಲಿ ಒಂದು ದೊಡ್ಡ ಒಂಟೆಯಿತ್ತು. ಅದು ಕಠೋರ ತಪಸ್ಸು ಮಾಡಿ ಬ್ರಹ್ಮನನ್ನು ಒಲಿಸಿಕೊಂಡಿತು. ಬ್ರಹ್ಮ ನಿನಗೇನು ವರ ಬೇಕು ಎಂದು ಕೇಳಿದಾಗ ಒಂಟೆಯು–

ಭಗವಂಸ್ತ್ವತ್ಪ್ರಸಾದಾನ್ಮೇ ದೀರ್ಘಾ ಗ್ರೀವಾ ಭವೇದಿಯಮ್।
ಯೋಜನಾನಾಂ ಶತಂ ಸಾಗ್ರಂ ಗಚ್ಛಾಮಿ ಚರಿತುಂ ವಿಭೋ॥

ಭಗವಂತನೆ, ನಿನ್ನ ವರಪ್ರಸಾದದಿಂದ ನನ್ನ ಕುತ್ತಿಗೆಯು ಬಹಳ ಉದ್ದವಾಗಲಿ, ಎಷ್ಟೆಂದರೆ ನಾನು ಆಹಾರಕ್ಕಾಗಿ ಹೊರಟಾಗ ನೂರು ಯೋಜನಗಳಿಗಿಂತಲೂ ಹೆಚ್ಚು ದೂರದಲ್ಲಿರುವ ಆಹಾರಪದಾರ್ಥಗಳನ್ನು ಈ ನನ್ನ ಕುತ್ತಿಗೆಯ ಸಹಾಯದಿಂದಲೇ ಪಡೆಯಲು ಸಾಧ್ಯವಾಗಬೇಕು. ಬ್ರಹ್ಮನು ಒಂಟೆಯ ಕೋರಿಕೆಯನ್ನು ಮನ್ನಿಸಿ ವರ ನೀಡಿದನು. ವರದ ಪ್ರಭಾವದಿಂದ ಒಂಟೆ ನೂರು ಯೋಜನಗಳಿಗಿಂತಲೂ ಉದ್ದವಾದ ಕುತ್ತಿಗೆಯನ್ನೂ ಹೊಂದಿತು. ತನ್ನ ಉದ್ದವಾದ ಕುತ್ತಿಗೆಯನ್ನು ಚಾಚಿ ಬೇಕಾದ ಆಹಾರವನ್ನು ತಿಂದು ಅಲಸಿಯಾಯಿತು. ವಿವೇಕ ಕಳೆದುಕೊಂಡಿತು.

ಹೀಗಿರುವಾಗ ಒಮ್ಮೆ ಬಿರುಗಾಳಿ ಬೀಸತೊಡಗಿತು. ಒಡನೆಯೇ ಒಂಟೆ ತನ್ನ ಕುತ್ತಿಗೆ ಮುರಿದುಹೋಗಬಹುದೆಂಬ ಭಯದಿಂದ ಅದನ್ನು ಗುಹೆಯೊಂದರಲ್ಲಿ ಅಡಗಿಸಿತು. ಗಾಳಿಯ ಜೊತೆಗೆ ಮಳೆಯೂ ಸುರಿಯಲಾರಂಭಿಸಿತು. ಆ ಸಮಯಕ್ಕೆ ಸರಿಯಾಗಿ ಹಸಿವಿನಿಂದ ಬಳಲಿದ್ದ, ಮಳೆಯಲ್ಲಿ ತೊಯ್ದಿದ್ದ ಎರಡು ನರಿಗಳು ಅದೇ ಗುಹೆಯಲ್ಲಿ ಆಶ್ರಯ ಪಡೆದುವು. ಹಸಿವಿನಿಂದ ಬಳಲಿದ್ದ ಅವು ಗುಹೆಯಲ್ಲಿದ್ದ ಒಂಟೆಯ ಕುತ್ತಿಗೆಯನ್ನು ನೋಡಿ ಆನಂದಪಟ್ಟು ತಿನ್ನಲು ಆರಂಭಿಸಿದವು. ಒಂಟೆಗೆ ತನ್ನ ಕುತ್ತಿಗೆಯನ್ನು ಯಾರೋ ತಿನ್ನುತ್ತಿದ್ದಾರೆ ಎಂದು ಅರಿವಾಗಿ ಕುತ್ತಿಗೆಯನ್ನು ಸಂಕುಚಿತಗೊಳಿಸಿಕೊಳ್ಳಲು ಪ್ರಯತ್ನಿಸಿತು; ಆದರೆ ಅದು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ನರಿಗಳು ಒಂಟೆಯ ಕುತ್ತಿಗೆಯನ್ನು ಪೂರ್ಣವಾಗಿ ತಿಂದು ಮುಗಿಸಿದವು. ಒಂಟೆಯು ಹೀಗೆ ತನ್ನ ಆಲಸ್ಯದಿಂದ ಸತ್ತಿತು.

ರಾಜನಾದವನು ಒಂಟೆಯಂತೆ ವ್ಯವಹರಿಸಬಾರದು, ಪ್ರಜೆಗಳೂ ಹಾಗೆ ವ್ಯವಹರಿಸಲು ಬಿಡಬಾರದು. ಆಲಸ್ಯವು ಮಹಾದೋಷ.

ರಾಜ್ಯಂ ತಿಷ್ಠತಿ ದಕ್ಷಸ್ಯ ಸಂಗ್ರಹೀತೇಂದ್ರಿಯಸ್ಯ ಚ।
ಆರ್ತಸ್ಯ ಬುದ್ಧಿಮೂಲಂ ಹಿ ವಿಜಯಂ ಮನುರಬ್ರವೀತ್॥

ಜಿತೇಂದ್ರಿಯನಾಗಿ, ಕಾರ್ಯದಲ್ಲಿ ದಕ್ಷನಾಗಿ ಇರುವವನ ರಾಜ್ಯವೇ ಸ್ಥಿರವಾಗಿ ಉಳಿಯುತ್ತದೆ. ಸಂಕಟದಲ್ಲಿರುವ ರಾಜನ ವಿಜಯವು ಬುದ್ಧಿಮೂಲವಾಗಿರುವುದೆಂದು ಮನು ಹೇಳಿದ್ದಾನೆ. ಆದುದರಿಂದ ರಾಜನಾದವನು ತಾನು ಮತ್ತು ತನ್ನ ಪ್ರಜೆಗಳು ಸದಾ ಕ್ರಿಯಾಶೀಲರಾಗಿರುವಂತೆ ನೋಡಿಕೊಳ್ಳಬೇಕು. ಜನರು ಸೋಮಾರಿಗಳಾಗಲು ಅವಕಾಶ ಕೊಡಬಾರದು.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ನಿಷ್ಕಾಮ ಭಕ್ತಿ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

!

?

? !

? ?

?

!
' '

!
!

' '

"
"

:

!
!
!

! -
!
"
"
"

!"

"

?" " " "

?" "

" " ?"

" ?"

" ?" "

!

!!"

" ?"

: "

"

- !

!

□

ರಿ

ರಿ

?

- ಬಸವಣ್ಣ

# ಹಂಬಲ

**ಡಾ. ಎಂ.ಎನ್. ನಂದೀಶ್ ಹಂಚೆ**

ಗಾಢ ಕತ್ತಲು. ಆಗಸದಲ್ಲಿ ಯಾವೊಂದು ನಕ್ಷತ್ರಗಳೂ ಕಾಣುತ್ತಿಲ್ಲ. ದಾರಿ ಹುಡುಕುತ್ತ ಬಂದ ನನಗೆ ಎದುರು ವಿಶಾಲ ಕಡಲ ತೀರ, ದೃಷ್ಟಿ ಹಾಯಿಸಿದಷ್ಟೂ ನೀರೇ ನೀರು. ದಡದಲ್ಲಿ ನಿಂತು ತದೇಕಚಿತ್ತದಿಂದ ಕಡಲನ್ನೇ ನೋಡುತ್ತಿದ್ದೇನೆ. ಅಲೆಗಳು ಒಂದೇ ಸಮನೆ ದಡದ ಕಡೆಗೇ ಧಾವಿಸುತ್ತಿವೆ. ಆದರೆ ಅದರಲ್ಲಿ ನೊರೆಗಳಿಲ್ಲ ಭೋರ್ಗರತೆಗಳಿಲ್ಲ. ಅವುಗಳ ಮಂಜುಳ ನಿನಾದ ಮಾತ್ರ ಕಿವಿಗೆ ಕೇಳಿಸುತ್ತಿದೆ. ಕಡಲು ದಾಟುವ ಅನಿವಾರ್ಯತೆ ನನ್ನದು. ಆದರೆ ದಾಟುವುದೆಂತು? ನನ್ನ ಹಾಗೆ ಯಾರಾದರೂ ಕಡಲ ದಾಟುವವರಿದ್ದಾರೆಯೇ ಎಂದು ನೋಡಿದೆ. ಯಾರೊಬ್ಬರೂ ಕಾಣಲಿಲ್ಲ. ಕಡಲ ದಾಟಲು ನಾವೆಯೊಂದಾದರೂ ಇದ್ದಿದ್ದರೆ ಎನಿಸಿತು. ಅದರೆ ಅದೂ ಇಲ್ಲ. ಚಿಂತೆ ತುಂಬಿ ನಿಂತ ಯಾರೋ 'ಹೇ ಶಿವಯೋಗಿ ಕಡಲು ದಾಟಲೇಕೆ ಅಂಜಿಕೆ? ನಾನಿದ್ದೇನೆ. ನನ್ನ ಕೈಹಿಡಿದು ಹಿಂಬಾಲಿಸಿ ಬಾ ದಾಟಿಸುತ್ತೇನೆ' ಎಂಬ ಮಾತು ಕೇಳಿಸಿತು. ತಿರುಗಿ ನೋಡಿದೆ. ಅದೇ ಅದೇ ಮುಖ. ನನ್ನ ಹರಸಿ ಹಾರೈಸಿದ ಮುಖ. ಆದರೆ ತಟ್ಟನೆ ಗುರುತು ಹತ್ತುತ್ತಿಲ್ಲ. ಆದರೆ ಯಾವುದೋ ಬಂಧ ಮಾತ್ರ ಅವರೆಡೆಗೆ ನನ್ನನ್ನು ಸೆಳೆಯುತ್ತಿದೆ. ಪ್ರಶಾಂತವೂ ಗಂಭೀರವೂ ಆದ ಚಂದ್ರವದನ, ಹೊಳೆವ ಕಂಗಳು, ತಾಯ ಸ್ಪರ್ಶ, ಮಾತೆಲ್ಲ ಸಿಹಿಜೇನು, ಕೆಂಡದುಡುಗೆ, ಎಲ್ಲೋ ನೋಡಿದ ನೆನಪು; ಗುರುತು ಕಂಡ ಭಾವ, ಆದರೆ ಗುರುತು ಹತ್ತುತ್ತಿಲ್ಲ. ಕಣ್ಣು ಮಿಟುಕಿಸುತ್ತಾ ಅವರನ್ನೇ ನೋಡುತ್ತಿದ್ದ ನನಗೆ 'ಏ, ಶಿವಯೋಗಿ ನಾನಾರೆಂದು ಹುಡುಕುತ್ತಿರುವೆಯಾ' ಎಂದು ಕೈಹಿಡಿದಾಗ, ಅವರ ಸ್ಪರ್ಶದಿಂದ ಎಚ್ಚರವಾಯಿತು. ಕಣ್ಣನ್ನು ಆವರಿಸಿದ್ದ ಮಬ್ಬು ಹರಿಯಿತು. ನೋಡಿದರೆ ನನ್ನ ಅಸ್ಮಿತೆಗೆ ಕಾರಣರಾದ ಪರಮಪೂಜ್ಯ ರಾಜೇಂದ್ರ ಸ್ವಾಮಿಗಳವರು! ತಕ್ಷಣ ಕಾಲಿಗೆರಗಿದೆ. ಅಡಿಗೆರಗಿದ ನನ್ನ ಭುಜ ಹಿಡಿದು ಮೇಲೆತ್ತಿ, ಕೈಹಿಡಿದು ಕಡಲ ನಡುವೆ ಕರೆದೊಯ್ದರು. ಕಡಲ ಅನಂತತೆಯ ದರ್ಶನವನ್ನು ಮಾಡಿಸಿದರು. ಕಡಲ ದಾಟಿ ಬಂದು ನನ್ನನ್ನು ನೆಲೆ ನಿಲಿಸಿ, ಒಳಿತಾಗಲೆಂದು ಹರಸಿ ಅಂತರ್ಧಾನವಾದರು. 'ಮತ್ತೆ ಯಾವಾಗ ತಮ್ಮ ದರ್ಶನ' ಎಂದೆ. 'ನೀನು ಬಯಸಿದಾಗ' ಎಂದರು. ರೂಪ ಕಾಣದೆ ಮಾತು ಕೇಳಿದ ನಾನು ಅಲ್ಲಿಯೇ ಬೆಟ್ಟದಂತೆ ಬೆಳೆದೆ, ಬೆಟ್ಟದ ಮೇಲೆಲ್ಲ ಗಿಡ ಮರ ಬಳ್ಳಿ, ಅವುಗಳನ್ನು ಆಶ್ರಯಿಸಿದ ಖಗಮೃಗ ಹೀಗೆ. ನೋಡುತ್ತಿದ್ದಂತೆ ನನ್ನ ಮೇಲೆ ಬಿದ್ದ ಭಾರದಿಂದ ಕುಸಿದುಹೋಗುತ್ತಿದ್ದೇನೆ. ಎಷ್ಟೆಂದರೆ ಮತ್ತೇ ಅದೇ ಕಡಲ ಅಡಿ ಸಿಲುಕುತ್ತಿದ್ದೇನೆ. ನೀರಿನಲ್ಲಿ ಮುಳುಗುತ್ತಿದ್ದ ನಾನು ದಾರಿ ಕಾಣದೆ ಬಾಯ್ತೆರೆದು ಕೂಗಲು ನೋಡಿದೆ. ಯಾರೋ ಬಾಯಿ

ಕಟ್ಟಿದ್ದರು. ಕಣ್ಣು ಬಿಡಲು ನೋಡಿದೆ. ಅದನ್ನೂ ಮುಚ್ಚಿ ಹಿಡಿದಿದ್ದರು. ಏನೊಂದೂ ತೋರದೆ ಕನವರಿಸುತ್ತಿದ್ದೆ. ಆಗ ಮತ್ತೆ ಅದೇ ಶ್ರೀಗುರುವಿನ ರೂಪ ನನ್ನ ಮುಂದೆ ಬಂದು ನಿಂತಿತು. ಅವರು ಕೈ ಚಾಚಿದರೂ ನನಗೆ ಕೈನೀಡಲು ಆಗುತ್ತಿಲ್ಲ. ಇನ್ನೇನು ಕಡಲಲ್ಲಿ ಮುಳುಗಿದೆ ಎನ್ನುವಾಗ 'ಕಾಪಾಡಿ ಗುರುವೇ' ಎಂದು ಚೀರಿದೆ. ತಟ್ಟನೆ ಯಾರೋ ಬಡಿದು ಎಚ್ಚರಿಸಿದಂತೆ ಆಯಿತು. ನೋಡಿದರೆ ನನ್ನ ಹೆಂಡತಿ, ನನ್ನ ಪಕ್ಕದಲ್ಲಿ ಕುಳಿತು ಎಚ್ಚರಿಸುತ್ತಿದ್ದಳು. ಆಕೆ "ಎಂದೂ ನೀವು ಈ ರೀತಿ ಚೀರಿದ್ದಿಲ್ಲ. ಯಾಕೆ, ಏನಾಯಿತು" ಎಂದಳು. ಅಮೆರಿಕದ ಹವಾನಿಯಂತ್ರಿತ ಕೊಠಡಿಯಲ್ಲಿ ಮಲಗಿದ್ದರೂ ನಾನು ಬೆವರಿದ್ದೆ. ನನ್ನ ಮುಖವನ್ನೇ ನೋಡುತ್ತಿದ್ದ ಅವಳ ಕಣ್ಣಲ್ಲಿ ಭಯ, ಗಾಬರಿ. ನಾನು ಇಂದೇಕೋ ಕನಸಿನಲ್ಲಿ ನಮ್ಮ ಗುರುಗಳನ್ನು ಕಂಡೆ ಎಂದೆ. ಗುರುಗಳನ್ನು ಕಂಡರೆ ಏಕೆ ಹೀಗೆ ಬೆವರುತ್ತಿದ್ದೀರಿ ಎಂದಳು. ಏನೂ ಇಲ್ಲ ಎಂದು ಕನಸಿನ ವಿವರವನ್ನು ಹೇಳದೆ ಸ್ನಾನಗೃಹದತ್ತ ತೆರಳಿದೆ.

ಹಜಾರದ ಗಡಿಯಾರದಲ್ಲಿ ರಾತ್ರಿ 10.00 ಗಂಟೆ. ಅದರ ಪ್ರಕಾರ ಭಾರತದಲ್ಲಿ ಈಗ ಬೆಳಗಿನ ಹತ್ತು ಗಂಟೆ. ಸರಿ, ಈಗಲೇ ಮಠಕ್ಕೆ ಫೋನ್ ಮಾಡಿ ಶ್ರೀಗಳು ದೂರವಾಣಿಯಲ್ಲಿ ಲಭ್ಯವಾದರೆ ಮಾತನಾಡಿಸೋಣವೆಂದು ಶಿವಯೋಗಿ ಫೋನ್ ಮಾಡಿದ. ಆಶ್ಚರ್ಯವೆಂದರೆ ಸ್ವತಃ ಸ್ವಾಮಿಗಳೇ ಫೋನ್ ತೆಗೆದುಕೊಂಡು 'ಯಾರು' ಎಂದರು. ಸ್ವಾಮಿಗಳವರ ಸ್ವರ ಕೇಳುತ್ತಲೇ ಗಂಟಲು ಉಬ್ಬಿ ಬಂದು ಶಿವಯೋಗಿಗೆ ಮುಂದೆ ಮಾತೇ ಹೊರಡಲಿಲ್ಲ. ಮತ್ತೆ ಶ್ರೀಗಳು 'ಯಾರು, ಯಾರಪ್ಪ ಮಾತನಾಡು' ಎಂದರು. ನಿಧಾನವಾಗಿ ಸಾವರಿಸಿಕೊಂಡ ಶಿವಯೋಗಿ "ಬುದ್ಧಿ, ನಾನು ಶಿವು", ಹಾಗೆಂದೊಡನೇ "ಶಿವಯೋಗಿಯೇ, ಅಮೆರಿಕದಿಂದಲೇ?" ಎಂದು ಉತ್ಸಾಹದಿಂದ ಕೇಳಿದರು, ಶ್ರೀಗಳು. "ಹೌದು ಬುದ್ಧಿ, ನಾನೇ ಶಿವಯೋಗಿ" ಎಂದನು. "ನಿನಗೆ ನೂರು ವರ್ಷ ಆಯಸ್ಸು ಕಣೋ. "ಇನ್ನು ಸ್ವಲ್ಪ ಹೊತ್ತು ಕಳೆದ ಮೇಲೆ ನಾವೇ ನಿನಗೆ ಫೋನ್ ಮಾಡಬೇಕು ಅಂದುಕೊಂಡಿದ್ದೆವು". "ಯಾಕೆ ಬುದ್ಧಿ". ಅಯ್ಯೋ, ನಾವು ಎರಡು ವರ್ಷಗಳ ಹಿಂದೆ ಶಿಕಾರಿಪುರದಲ್ಲಿ ಗುರುಶಾಂತಪ್ಪನವರ ಮನೆಗೆ ಪೂಜೆಗೆ ಬಂದಿದ್ದಾಗ ನೀನು ಕೂಡ ಅಮೆರಿಕದಿಂದ ಬಂದಿದ್ದೆ. ಪೂಜೆಗೆ ಬಂದಿದ್ದ ನಮ್ಮನ್ನು ಕಂಡು "ತಾವು ಅಮೆರಿಕಕ್ಕೆ ಬಂದು ಆತಿಥ್ಯವನ್ನು ಸ್ವೀಕರಿಸಬೇಕು. ತಮ್ಮ ಆಚರಣೆಗೆ ಯಾವುದೇ ಅಡ್ಡಿಯಾಗದಂತೆ ನೋಡಿಕೊಳ್ಳುತ್ತೇನೆ" ಎಂದು ಹೇಳಿದ್ದೆ. ಅದು ನೆನಪಿಗೆ ಬಂತು. ಮುಂಜಾನೆ ನಾವು ಅಲ್ಲಿಗೆ ಬರಲು ನಿಶ್ಚಯ ಮಾಡಿದ್ದೆವು. ಆ ವಿಷಯವನ್ನು ನಿನಗೆ ತಿಳಿಸಲು ಫೋನ್ ಮಾಡುವವರಿದ್ದೆವು" ಎಂದರು. ಈ ಮಾತು ಕೇಳುತ್ತಲೇ ಶಿವಯೋಗಿಗೆ ಕಣ್ಣೀರು ಧಾರಾಕಾರವಾಗಿ ಹರಿಯಲಾರಂಭಿಸಿತು. ಅವನು ಗದ್ಗದಿತನಾಗಿದ್ದಾನೆಂದು ಅರಿತ ಶ್ರೀಗಳು "ಯಾಕೋ, ಏನಾಯಿತು" ಎಂದರು. "ಏನೂ ಇಲ್ಲ ಬುದ್ಧಿ. ತಾವು ದಯಮಾಡಿ ಬರಲೇಬೇಕು" ಎಂದು ವಿನಂತಿಸಿದನು. 'ನಿಮಗಾಗಿ ಕಾಯುತ್ತಿರುತ್ತೇನೆ' ಎಂದು ಫೋನ್ ಇಟ್ಟವನೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು.

ಏನೊಂದೂ ತೋಚದ ಅವನ ಹೆಂಡತಿ 'ಏನೆಂದು ಹೇಳಿ' ಎಂದು ಅವನಿಗೆ ಸಂತೈಸಿದಳು. ಸಾವರಿಸಿಕೊಂಡು ಕನಸಿನ ಎಲ್ಲ ವಿವರವನ್ನೂ ಹೇಳಿದ ಶಿವಯೋಗಿ "ಕಾಕತಾಳೀಯ

ವೆಂದರೆ ನಾನು ಗುರುಗಳ ಕನಸು ಕಂಡ ಕ್ಷಣವೇ ಅವರು ನನ್ನ ಬಗ್ಗೆ ನೆನಸಿಕೊಂಡರಂತೆ" ಎಂದು ಭಾವುಕನಾದನು. ಗಂಡನ ಮಾತು ಕೇಳಿ ಆಕೆಗೂ ಆಶ್ಚರ್ಯವಾಯಿತು. ಈ ಕನಸಿನ ಸಂಗತಿಯನ್ನು ಕೇಳಿ ಕುತೂಹಲವಾಯಿತು. "ಅಂತಹ ಸಂಬಂಧ ಏನಿದೆ ನಿಮ್ಮಿಬ್ಬರ ನಡುವೆ" ಎಂದಳು. ಆಗ ಶಿವಯೋಗಿ ತನ್ನ ಹಳೆಯ ನೆನಪನ್ನು ವಿವರಿಸಲು ಉದ್ಯುಕ್ತನಾದನು:

ಮಠದ ಹೊರಗೆ ಕಾಯುತ್ತಾ ನಿಂತಿದ್ದ ಕಚ್ಚೆ ಧೋತ್ರ ಉಟ್ಟಿದ್ದ ವ್ಯಕ್ತಿಯನ್ನು ದಿಟ್ಟಿಸಿದ ಶ್ರೀಗಳು "ಏನಪ್ಪ, ಏನು ಬಂದೆ" ಎಂದರು. ನಾವು "ಶಿವಮೊಗ್ಗದ ಶಿಕಾರಿಪುರದಿಂದ ಬಂದಿದ್ದೇವೆ ಬುದ್ಧಿ. ಈತ ನನ್ನ ಮಗ. ತಮ್ಮ ಕಾಲೇಜಿನಲ್ಲಿ ಓದಬೇಕು ಎಂದು ಕರೆದುಕೊಂಡು ಬಂದಿದ್ದೇನೆ" ಎಂದನು. ಅಪ್ಪನ ಪಕ್ಕದಲ್ಲಿ ನಿಂತ ಆ ಹುಡುಗನನ್ನು ನೋಡಿದ ಶ್ರೀಗಳು "ಅಲ್ಲಿಯೇ ಓದಬಹುದಲ್ಲಪ್ಪ, ಇಲ್ಲಿಗೇಕೆ ಬಂದೆ" ಎಂದರು. ಆ ಹುಡುಗ ಶ್ರೀಗಳನ್ನೇ ದೃಷ್ಟಿಸುತ್ತಾ "ನಾನು ತಮ್ಮ ಬಳಿಯೇ ಓದಬೇಕು ಎಂದು ಬಂದಿದ್ದೇನೆ" ಎಂದನು. ಆ ಮಾತು ಕೇಳಿ ನಕ್ಕ ಶ್ರೀಗಳು "ನಮ್ಮ ಬಳಿ ಇರಲು ಆಗುವುದಿಲ್ಲವಲ್ಲಪ್ಪ" ಎಂದರು. "ಆಯಿತು, ಊಟಕ್ಕೆ ಏನು ಮಾಡ್ತೀಯಾ" ಎಂದರು. ಆ ಹುಡುಗನ ತಂದೆ "ತಮ್ಮ ಹಾಸ್ಟೆಲ್‌ನಲ್ಲಿ ಒಂದು ಸೀಟು ಕೊಡಿ ಬುದ್ಧಿ" ಎಂದು ಬೇಡಿದನು. "ಸೀಟು ಖಾಲಿ ಇಲ್ಲಪ್ಪ. ನೀವು ಬಂದಿರುವುದೇ ತಡವಾಗಿದೆ" ಎಂದರು. ಹುಡುಗ "ಹಾಗಿದ್ದರೆ ಇಲ್ಲೇ ಮಠದಲ್ಲಿಯೇ ಇರುತ್ತೇನೆ ಬುದ್ಧಿ" ಎಂದನು. ಆ ಮಾತು ಕೇಳಿ ವಿಸ್ಮಯಗೊಂಡ ಶ್ರೀಗಳು 'ಆಯಿತು' ಎಂದು ಎರಡು ಸಣ್ಣ ಚೀಟಿಗಳಲ್ಲಿ ಏನನ್ನೋ ಬರೆದು ಅವರ ಕೈಗಿತ್ತು "ಒಂದನ್ನು ಕಾಲೇಜಿನಲ್ಲಿ ಕೊಡಿ ಮತ್ತೊಂದನ್ನು ಹಾಸ್ಟೆಲ್‌ನಲ್ಲಿ ಕೊಡಿ" ಎಂದು ಹುಡುಗನ ತಲೆಯನ್ನು ನೇವರಿಸಿದರು. ಚೀಟಿ ತೆಗೆದುಕೊಂಡು ಹೋದ ತಂದೆ ಮಗನಿಗೆ ಆಶ್ಚರ್ಯ ಕಾದಿತ್ತು. ಕಾಲೇಜಿನಲ್ಲಿ ಅಡ್ಮಿಷನ್ ಆಯಿತು; ಹಾಸ್ಟೆಲ್‌ನಲ್ಲಿ ಫುಲ್ ಫ್ರೀ ಎಂದು ಶ್ರೀಗಳು ಬರೆದಿದ್ದಾರೆಂದು ವಾರ್ಡನ್ ತಿಳಿಸಿದಾಗ ಆ ತಂದೆ ಮತ್ತು ಮಗನಿಗೆ ದುಃಖ ಉಮ್ಮಳಿಸಿ ಬಂದಿತು. "ಆ ಹುಡುಗನೇ ನಾನು, ಕಣೆ. ನನ್ನನ್ನು ನೋಡಿದ ಮೊದಲ ನೋಟದಲ್ಲಿಯೇ ಅವರು ತೋರಿದ ಪ್ರೀತಿಯನ್ನು ಹೇಗೆ ತಾನೆ ಮರೆಯಲಿ! ಬಡತನದಲ್ಲಿ ಇದ್ದ ನಮಗೆ ಏನೋ ಒಂದು ಪದವಿ ಪಡೆದು ಉದ್ಯೋಗ ಸಿಕ್ಕಿ ಸಂಸಾರವನ್ನು ಸಾಗಿಸುವಂತೆ ಆದರೆ ಸಾಕು ಎಂದುಕೊಂಡಿದ್ದೆವು. ಆದರೆ ಶ್ರೀಗಳ ಕೃಪಾಕಟಾಕ್ಷದಿಂದ ಆದದ್ದೇ ಬೇರೆ. ನಾನು ಮುಂದೆ ಅವರೇ ನೀಡಿದ ಫ್ರೀ ಮೆಡಿಕಲ್ ಸೀಟಿನಿಂದ ಇಂದು ವೈದ್ಯನಾಗಿದ್ದೇನೆ. ನನ್ನನ್ನು ಎಲ್ಲರೂ 'ಶ್ರೀಗಳ ಮಾನಸಪುತ್ರ' ಎಂದು ಕರೆಯುತ್ತಿದ್ದರು. ನನ್ನ ತಂದೆಯ ಜವಾಬ್ದಾರಿ ಹಾಗೂ ತಾಯಿಯ ಅಕ್ಕರೆ ಎರಡನ್ನೂ ನೀಡಿದವರು ಅವರು. ನಾನು ದೇವರನ್ನು ಕಂಡಿಲ್ಲ. ಆದರೆ ನನ್ನ ಪಾಲಿಗೆ ಅವರೇ ದೇವರು. ಯಾಕೋ ಅವರನ್ನು ಬೇಗ ನೋಡಬೇಕೆಂಬ ಹಂಬಲ ಕಾಡುತ್ತಿತ್ತು" ಎಂದು ಗದ್ಗದಿತನಾದ ಶಿವಯೋಗಿ. ಮುಂದೆ ಆತನ ಹಂಬಲದಂತೆ ಶ್ರೀಗಳು ವಿದೇಶಕ್ಕೆ ತೆರಳಿ ಅವನ ಆತಿಥ್ಯವನ್ನು ಸ್ವೀಕರಿಸಿದುದು ಹೃದ್ಯವಾದ ಸಂಗತಿ.

□

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ–ಟೀಕು

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು

**ಕಂ॥** ಅಜನಜಡನೆಂದು ನುಡಿವುದು ।
ಕುಜನತೆ ಜಡಜಾತಜಾತನೆಂತಜಡನವಂ ।
ಸುಜನವಿರೋಧಿಯನಜಡಂ ।
ಸೃಜಿಯಿಪನೆವರೋಪತಾಪಫಲನಂ ಖಲನಂ ॥ ೧೭ ॥

**ಟೀಕ॥** ಅಜನು – ಬ್ರಹ್ಮನು: ಅಜಡನೆಂದು – ಮೂಢನಲ್ಲವೆಂದು : ನುಡಿವುದು – ಹೇಳುವುದು : ಕುಜನತೆ – ದೌರ್ಜನ್ಯವಾಗಿದೆ. ಜಡ – ಮೂಢನ : ಜಾತ – ಮಗನ : ಜಾತನು – ಮಗನೆ. (ಲಳಯೋರಭೇದಃ : ಜಲ– ನೀರಿನಲ್ಲಿ: ಜಾತ – ಹುಟ್ಟಿದ: ತಾವರೆಯ ದೆಶೆಯಿಂದ, ಜಾತಂ – ಹುಟ್ಟಿದವನು: ನಾರಾಯಣನ ಕಮಲಸಂಭನನು, ಆದ ಅವಂ – ಬ್ರಹ್ಮನು: ಅಜಡಂ – ಮೂಢನಲ್ಲದವನು: ಸುಜನವಿರೋಧಿಯಂ – ಸತ್ಪುರುಷರಿಗೆ ವೈರಿಯಾಗಿಯು : ಪರ ಉಪತಾಪಫಲನಂ – ಹೆರವರ ದುಃಖವೆ ಪ್ರಯೋಜನವಾಗಿ ಉಳ್ಳ: ಖಲನಂ – ದುಷ್ಟನನ್ನು : ಸೃಜಿಯಿಪನೆ – ಹುಟ್ಟಿಸುವನೊ ॥

**ತಾ॥** ಸೃಷ್ಟಿಕರ್ತನಾದ ಬ್ರಹ್ಮನು ಮೂಢವಾದ ತಾವರೆಯಲ್ಲಿ ಹುಟ್ಟಿದವನು. ತಾವರೆಯು ಜಡವಾದ ನೀರಿನಲ್ಲಿ ಹುಟ್ಟಿದ್ದು. ಹೀಗೆ ತಂದೆತಾತಂದಿರು ಜಡವಾಗಿರುವಲ್ಲಿ ತತ್ಸಂಭವನಾದ ಸೃಷ್ಟಿಕರ್ತನು ಜಡನೇ ಸರಿ. ಅವನು ಜಡನಲ್ಲವೆಂದು ಹೇಳುವಿಕೆ ದೋಷವಾಗಿರುವದು. ಸೃಷ್ಟಿಕರ್ತನೆ ಜಡನಲ್ಲದಿದ್ದರೆ ತಾನು ಮಾಡಿದ ಸೃಷ್ಟಿಯಲ್ಲಿ ಉತ್ತಮರಾದ ಸುಜನರಿಗೆ ವಿರೋಧಿಯಾಗಿ, ಸುಜನರಿಗೆ ನೆರವಾಗುವವರನ್ನೇ ಪೀಡಿಸುವಂತ ದುಷ್ಟನನ್ನು ಹುಟ್ಟಿಸುತ್ತಲೇಯಿರಲಿಲ್ಲ. ತನ್ನ ಕೆಲಸಕ್ಕೆ ತಾನೇ ಕೆಡುಕನ್ನುಂಟು ಮಾಡಿಕೊಂಡರಿಂದ ಅವನನ್ನು ಮೂಢನೆನ್ನಬೇಕಾಗಿದೆ. ಹೀಗೆ ಹೇಳಿದ್ದರಿಂದ ಪರಪೀಡಕನಾದ ದುಷ್ಟನು ಲೋಕದಲ್ಲಿ ಹುಟ್ಟದೆ ಇದ್ದರೆ ಚೆನ್ನಾಗಿತ್ತೆಂದು ಹೇಳಿದಂತಾಯಿತು ॥ ೧೭ ॥

**ಕಂ॥** ಇನಿವಣ್ಗಳಿರೆ ಬಿಸುಟ್ಟೊ ।
ಯ್ಯನೆ ವನಮಂ ಪೊಕ್ಕ ಕಾಕನೊಲ್ದುದು ಗಡ ಬೇ ॥
ವಿನ ಪಣ್ಣಂ ಲೇಸಂಬಿ ।
ಟ್ಟಿನಿಸುಂ ಕೃತಿಯಲ್ಲಿ ದೋಷಮಂ ಖಲನೊಲ್ವಂ ॥ ೧೮ ॥

**ಟೀಕ॥** ವನಮಂ – ತೋಟವನ್ನು: ಪೊಕ್ಕ – ಪ್ರವೇಶಿದ : ಕಾಕಂ – ಕಾಗೆಯು: ಇನಿವಣ್ಗಳ್ – ರುಚಿಯಾದ ಹಣ್ಣುಗಳು : ಇರೆ – ಇರಲು : ಬಿಸ್ಟು – ಬಿಟ್ಟು : ವೈಯ್ಯನೆ –

ಮೆಲ್ಲಗೆ : ಬೇವಿನ ಪಂಣಂ – ಬೇವಿನ ಹಣ್ಣನ್ನು : ಒಲ್ವುದುಗಡ – ಒಪ್ಪಿತಂತೆ : ಖಲಂ – ದುಷ್ಟನು : ಕೃತಿಯಲ್ಲಿ – ಕಾವ್ಯದಲ್ಲಿ: ಇನಿಸು – ಕೊಂಚವಾದರು: ಲೇಸಂ –ಗುಣವನ್ನು : ಬಿಟ್ಟು – ಗ್ರಹಿಸದೆ ಹೋಗಿ ದೋಷಮಂ – ಕೊರತೆಯನ್ನು: ಒಲ್ವಂ – ಒಪ್ಪಿಕೊಳ್ಳುವನು॥

**ತಾ॥** ಕಾಗೆಯು ವನದಲ್ಲಿರುವ ಸಿಹಿಯಾದ ಹಣ್ಣುಗಳನ್ನು ಬಿಟ್ಟು. ಬೇವಿನ ಹಣ್ಣನ್ನೇ ಅಂಗೀಕರಿಸುವದು. ದುರ್ಜನನು ಕಾವ್ಯದಲ್ಲಿ ಸರಿಯಾದ ಗುಣಗಳನ್ನು ಬಿಟ್ಟು ದೋಷವನ್ನು ಹುಡುಕಿ ಗ್ರಹಿಸುವನು. ಅದರಿಂದ ದುಷ್ಟನು ಕಾಗೆಯನ್ನು ಹೋಲುತ್ತಾನೆ. (ದೃಷ್ಟಾಂತಾಲಂಕಾರ) ॥ ೧೮ ॥

ಕು ॥ ಪಳಿಕೈವಂ ಖಲನೆಂದಾಂ ।
ಮುಳಿಯಂ ಗುಣಗಣಮನಮಳ ಮಣಿದರ್ಪಣಮೇಂ ॥
ತೊಳಗದೆಬೆಳಗೆ ತದೀಯೋ ।
ಜ್ವಲತೆಗೆ ಕಾರಣಮಿದೆಂದು ತಿಳಿದುದರಿಂದಂ ॥ ೧೯ ॥

**ಟೀಕ** ॥ ಅಮಲಮಣಿದರ್ಪಣಂ – ಕೊಳೆಯಿಲ್ಲದ ರನ್ನಗನ್ನಡಿ : ಏಂ – ಏನೂ : ಬೆಳಗೆ – ಉಜ್ಜಿದರೆ : ತೊಳಗದೆ – ಪ್ರಕಾಶಿಸಿಸದೆ : ಆ ಉಜ್ವವಿಕೆಯು : ತದೀಯ – ಆ ಕನ್ನಡಿಯ – ಉಜ್ವಲತೆಗೆ – ಪ್ರಕಾಶಕ್ಕೆ : ಕಾರಣಂ – ನಿಮಿತ್ತವಾಗಿರುತ್ತದೆ. ಎಂದು ಎಂಬುದಾಗಿ : ತಿಳಿದುದರಿಂದಂ – ಅರಿತದ್ದರಿಂದ : ಖಲಂ – ದುಷ್ಟನು: ಗುಣಗಣಮನ್ – (ಈ ಗ್ರಂಥದಲ್ಲಿರುವ) ಶ್ಲೇಷಾದಿ ಗುಣಗಳ ಸಮೂಹವನ್ನು : ಪಳಿಕೈವಂ – ದೂಷಿಸುತ್ತಾನೆ : ಎಂದ್ – ಎಂಬುದಾಗಿ : ಆಂ – ನಾನು : ಮುಳಿಯಂ – ಸಿಟ್ಟುಗೊಳ್ಳೆನು ॥

**ತಾ** ॥ ಕನ್ನಡಿಯನ್ನು ಬೂದಿ ಹಾಕಿ ಕೆಡಿಸದೆ ಹೋದರೆ ಅದು ಮತ್ತು ನಿರ್ಮಲವಾಗಿ ಬೆಳಗುವತೆ, ದುಷ್ಟನು ನನ್ನ ಕಾವ್ಯವನ್ನು ದೂಷಿಸಿ, ಕಾವ್ಯದ ಗುಣವು ಮತ್ತೂ ಪ್ರಕಾಶಮಾನವಾಗಿ ಶೋಭಿಸುತ್ತದೆ. ಆದುದರಿಂದ ದುಷ್ಟನ ದೂಷಣೆಗೆ ನಾನು ಕೋಪಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದರಿಂದ ನನ್ನ ಗ್ರಂಥವನ್ನು ದುಷ್ಟರು ಅಪೇಕ್ಷಿಸಿದಷ್ಟು ವಿಚಾರಮಾಡಿದರೆ ಇನ್ನು ಗುಣವೇ ಹೆಚ್ಚಾಗಿ ತಿಳಿಯಬರಬಹುದಾಗಿರುವದರಿಂದ ಅವರು ಮಾಡುವ ಆಕ್ಷೇಪಣೆಯು ನನ್ನ ಗ್ರಂಥದ ಶ್ಲಾಘ್ಯತೆಗೇ ಕಾರಣವಾಗುವದಾಗಿ, ಅವರಾಕ್ಷೇಪಿಸುವರೆಂದು ನಾನು ಸಿಟ್ಟುಗೊಳ್ಳುವುದಿಲ್ಲ. ಏಕೆಂದರೆ ನನ್ನ ಗ್ರಂಥವು ಅಷ್ಟು ಉತ್ತಮವಾಗಿದೆಯೆಂದು ಕವಿಯು ತನ್ನ ಧೈರ್ಯವನ್ನು ಪ್ರಕಾಶಗೊಳಿಸಿದನೆಂದು ಭಾವವು ॥ ೧೯ ॥

ಕಂ॥ ಖಲಬುದ್ಧಿಗೆ ಸತ್ಕಾವ್ಯದೊ ।
ಳಲರ್ದ ಗುಣಂ ದೋಷಮಾಗಿ ತೋರ್ಕುಂ ರವಿಯು ॥
ಜ್ವಲರುಚಿ ಕೌಶಿಕದೃಷ್ಟಿಗೆ ।
ಸಲೆ ಮರ್ಬನಿಪಂತೆಯಾತ್ಮದೋಷೋನ್ನತಿಯಿಂ ॥ ೨೦ ॥

**ಟೀಕ** ॥ ರವಿಯ – ಸೂರ್ಯನ : ಉಜ್ವಳ ರುಚಿ – ಬೆಳಗುವ ಕಾಂತಿ: ಕೌಶಿಕದೃಷ್ಟಿಗೆ – ಗೂಬೆಯ ಕಣ್ಣಿಗೆ : ಆತ್ಮದೋಷೋನ್ನತಿಯಿಂ – ತನ್ನಲ್ಲಿರುವ ಹಗಲಿನ ಕುರುಡುತನದ ಹೆಚ್ಚಿಗೆಯಿಂದ : ಸಲೆ – ಪೂರ್ಣವಾಗಿ : ಮರ್ಬಿನಿಪಂತೆ – ಕತ್ತಲೆಯೆನಿಸುವ ಹಾಗೆ : ಸತ್ಕಾವ್ಯದೋಳ್ – ಉತ್ತಮ ಕಾವ್ಯದಲ್ಲಿ : ಅಲರ್ದ – ವ್ಯಾಪಕವಾಗಿರುವ : ಗುಣಂ – ಶ್ಲೇಷಾದಿಗುಣವು: ಖಲಬುದ್ಧಿಗೆ – ದುಷ್ಟ ಬುದ್ದಿಗೆ (ಇಲ್ಲಿ ಬುದ್ದಿ ಎನ್ನುವುದನ್ನು ಹೃದಯ ಎಂದು ಅರ್ಥೈಸಬೇಕು) ಆತ್ಮದೋಷೋನ್ನತಿಯಿಂ – ತನ್ನ ಮಾತ್ಸರ್ಯ ದೋಷಾಧಿಕ್ಯದಿಂದ : ದೋಷಮಾಗಿ – ವೈಯಾರ್ಥ್ಯಾದಿ ದೋಷರೂಪವಾಗಿ : ತೋರ್ಕುಂ – ತೋರುವದು ॥

**ತಾ** ॥ ದುಷ್ಟನ ಬುದ್ಧಿಗೆ ಉತ್ತಮ ಕಾವ್ಯದಲ್ಲಿ ಗುಣವೇ ದೋಷವಾಗಿ ತೋರುತ್ತೆ. ಗೂಬೆಯು ಕಣ್ಣಿಗೆ ಸೂರ್ಯನ ಬೆಳಕು ಕತ್ತಲೆಯಾಗಿ ತೋರುತ್ತೆ. ಅದು ಗೂಬೆಯು ದೋಷವಾದಂತೆ, ಕಾವ್ಯದಲ್ಲಿ ದೋಷಾರೋಪಣವು ದುಷ್ಟನ ದೋಷವಾಗಿದೆ. (ಉಪಮಾಲಂಕಾರ) ॥ ೨೦ ॥

ಕಂ ॥ ತಣಿವಣಮಿಲ್ಲನ್ಯರಗುಣ ।
ಗಣಮಂ ಸಲೆ ಪೊಗಳ್ವತೆಗಳ್ವ ಸುಜನನೆಯಲನು ।
ಣ್ಬಣುರಸನೆಗೆಮಿಂತಿದುಲ ।
ಕ್ಷಣಮೀರ್ವರ್ಗಂವಿಧಾತೃವಿಹಿತಂ ಜಗದೋಳ್ ॥ ೨೧ ॥

**ಟೀಕ** ॥ ಅನ್ಯರ –ಇತರರ : ಗುಣಗಣಮಂ – ಔದಾರ್ಯ ಗಾಂಭೀರ್ಯ ವೈದುಷ್ಯಾದಿ ಗುಣಗಳ ಗುಂಪನ್ನು : ಸಲೆ – ಚನ್ನಾಗಿ : ಪೊಗಳ್ವ – ಹೊಗಳುವ : ಸುಜನನ – ಸತ್ಪುರುಷನ : ಉಣ್ಬ – ಊಟ ಮಾಡುವ : ಅಣುರಸನಿಗೆ – ಸಣ್ಣನಾಲಿಗೆಗೆ : ಅಣಂ – ಅತಿಶಯವಾಗಿ : ತಣಿವ್ – ತೃಪ್ತಿಯು ಇಲ್ಲ : ತೆಗಳ್ವ – ನಿಂದಿಸುವ : ದುರ್ಜನನು ಉಣ್ಬ ಅಣುರಸನಿಗೆ ಅಣಂ ತಣಿವುಯಿಲ್ಲ ಜಗದೋಳ್ – ಪ್ರಪಂಚದಲ್ಲಿ : ಇಂತು – ಹೀಗೆ : ಇದು ಭೂಷಣ ದೋಷವು : ಈವರ್ಗಂ – ಸಜ್ಜನ ಹಾಗೂ ದುರ್ಜರಿಬ್ಬರಿಗೂ : ವಿಧಾತೃ ವಿಹಿತಂ – ಬ್ರಹ್ಮನಿಂದ ಮಾಡಲ್ಪಟ್ಟ : ಲಕ್ಷಣ – ಗುರುತಾಗಿದೆ ॥

**ತಾ** ॥ ಸುಜನರ ನಾಲಿಗೆ ಅನ್ಯರ ಗುಣಗಳನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲದೆ ಇನ್ನು ಹೊಗಳಲೆಳಸುತ್ತಿರುವದು. ದುರ್ಜನರ ನಾಲಿಗೆ ಅನ್ಯರ ಗುಣಗಳನ್ನು ಎಷ್ಟು ಹಳಿದರೆ ತೃಪ್ತಿಯಲ್ಲದೆ ಇನ್ನು ಹಳಿಯಬೇಕೆಂದೆಳಸುತ್ತಿರುವದು. ಹೀಗೆ ಸ್ತುತಿನಿಂದೆಗಳು ಅವುಗಳಿಗೆ ಲಕ್ಷಣಂಗಳಾಗಿ ವಿಧಿ ಕಲ್ಪಿತಂಗಳು. ಆದ್ದರಿಂದ ಕೊಂಡಾಡುವದು ಸುಜನನಿಗೂ ಕೊಂಡಾಡದಿರುವುದು ದುರ್ಜನನಿಗೂ ಸ್ವಭಾವವು. ಆದ್ದರಿಂದ ಅವುಗಳ ಹರ್ಷವಿಷಾದಂಗಳು ತನಗಿಲ್ಲವೆಂದು ಕವಿಯು ತನ್ನ ನೈಸ್ಪೃಹ್ಯವನ್ನು ಪ್ರಕಟಿಸಿದನೆಂದು ಭಾವವು. (ಸ್ವಭಾವೋಕ್ತ್ಯಲಂಕಾರ)

**ಕಂ** ॥ ಘನರಸಮಂ ಪಡೆದೀಂಟುವ ।
ವಿನುತಂ ಚಾದಗೆ ಕುವಾರಿಯಂ ಕುಡಿವುದೇನೂ ॥
ತನರಸವತ್ಕೃತಿಗೆಳಸುವ ।
ಮನುಜಂ ಮರೆದಾದೊಡಲ್ಪಕೃತಿಗೆಳಸುವನೇ ॥ ೨೨ ॥

**ಟೀಕ** ॥ ಘನರಸಮಂ– ಶ್ರೇಷ್ಠ ಪೇಯವಾದ (ಕುಡಿಯಬಹುದಾದ): (ಮತ್ತೊಂದು ಅನ್ವಯಾರ್ಥ)ಘನರಸಮಂ – ಮೇಘದನೀರನ್ನು :ಪಡೆದು – ಒಪ್ಪಿ ಈಂಟುವ – ಕುಡಿಯುವ : ವಿನುತಂ – ಶ್ಲಾಘ್ಯವಾದ : ಚಾದಗೆ– ಚಾತಕಪಕ್ಷಿ : ಕುವಾರಿಯಂ _ ಕೆಟ್ಟ ನೀರನ್ನು : ಕುಡಿವುದೆ – ಕುಡಿದೀತೋ : (ಇಲ್ಲ) ನೂತನ – ಹೊಸದಾದ : ರಸವತ್– ಶೃಂಗಾರಾದಿಗಳುಳ್ಳ ಕೃತಿಗೆ : ಎಳಸುವ – ಆಪೇಕ್ಷಿತನಾದ : ಮನುಜಂ ಮನುಷ್ಯನು : ಮರದಾದೊಡೆ – ಮರೆತಾದರೂ : ಅಲ್ಪಕೃತಿಗೆ – ನೀಚಕಾವ್ಯಕ್ಕೆ : ಎಳಸುವನೇ – ಆಪೇಕ್ಷೆಗೊಳ್ಳುವನೇ? (ಇಲ್ಲ) ॥

ತಾ ॥ ನಿರ್ಮಲವಾದ ಮಳೆಯ ಹನಿಗಳನ್ನು ಕುಡಿಯುವ ತಿಂಗಳವಕ್ಕಿಯು, ಮಂಣು ಸೋಂಕಿದ ನೀರನ್ನು ಕುಡಿಯುವುದಿಲ್ಲ. ಹಾಗೆಯೆ ಉತ್ತಮಕಾವ್ಯಾರ್ಥಿಯು ಎಂದಿಗೂ ಅಧಮಕಾವ್ಯವನ್ನು ಬಯಸುವದಿಲ್ಲ (ದೃಷ್ಟಾಂತಾಲಂಕಾರ) ॥

ಕಂ ॥ ಅಳಿಯಲರಂಗಿಳಿಪಂಣಂ ।
ತಳಿರಂಪಿಕನೊಲ್ವ ತೆರದಿ ಕುಜದೊಳ್ ಕೃತಿಯೊಳ್ ।
ವಿಲಸಿತಪದಮಮರ್ಥಮ ।
ನಲಂಕೃತಿಪ್ರಹಿತಭಾವಮಂ ಕೆಲರೊಲ್ವರ್ ॥ ೨೩ ॥

**ಟೀಕ** ॥ ಕುಜದೊಳ್ – ವೃಕ್ಷದಲ್ಲಿ : ಅಳಿ – ದುಂಬಿಯು : ಅಲರಂ –ಹೂವನ್ನು : ಗಿಳಿ – ಗಿಣಿಯು ಪಂಣಂ – ಫಲ(ಹಣ್ಣ)ವನ್ನು : ಪಿಕಂ – ಕೋಗಿಲೆಯು: ತಳಿಲ್ಬುಚಿ – ಚಿಗುರನ್ನು : ಒಲ್ವತೆರದಿ – ಒಪ್ಪುವಂತೆ : ಕೃತಿಯೊಳ್ – ಗ್ರಂಥದಲ್ಲಿ : ಕೆಲರು – ಕೆಲವರು : ವಿಲಸಿತಪದಮೆನುಂ – ಶೋಭಿಸುವ ಶಬ್ದವನ್ನು : ಕೆಲರು ಅರ್ಥವಂ – ವಾಚ್ಯವ್ಯಂಗ್ಯಲಕ್ಷ್ಯಗಳನ್ನು : ಕೆಲರು ಅಲಂಕೃತಿ ಪ್ರಹಿತಭಾವಮಂ – ಅಲಂಕಾರದಿಂದ ಕೂಡಿದ ತಾತ್ಪರ್ಯವನ್ನು : ಒಲ್ವರ್ – ಒಪ್ಪುವರು.

**ತಾ** ॥ ಒಂದು ವಸ್ತುವಿನಲ್ಲಿ ಹಲವರಿಗೆ ಹಲವು ಪ್ರಯೋಜನಗಳಿರುವವು. ಒಂದು ಗಿಡದಲ್ಲಿ ಭೃಂಗಕ್ಕೆ ಪುಷ್ಪವು, ಗಿಳಿಗೆ ಹಣ್ಣು, ಕೋಗಿಲೆಗೆ ಚಿಗುರು ಇಷ್ಟವಾಗಿರುವಂತೆ, ಸತ್ಕಾವ್ಯದಲ್ಲಿ ಸಶಬ್ದ ಕೆಲವರಿಗು, ಸದರ್ಥ ಕೆಲವರಿಗು, ಅಲಂಕಾರ ಕೆಲವರಿಗೂ, ಭಾವಪುಷ್ಟಿ ಕೆಲವರಿಗು, ಇಷ್ಟವಾಗಿರುತ್ತೆಯಾಗಿ, ಕಾವ್ಯವು ಫಲವೃಕ್ಷದಂತೆ ಹಲವು ಬಗೆಯವರಿಗೆ ಹಲವು ಪ್ರಯೋಜನಗಳನ್ನು ಕೊಡುವುದೆಂಬುದರಿಂದ, ನನ್ನ ಗ್ರಂಥದಿಂದ ಕಬ್ಬಿಗರಿಗೆ ಕವಿತಾಚಮತ್ಕೃತಿಯು ವೈಯ್ಯಾಕರಣರಿಗೆ ಶಬ್ದಶುದ್ಧಿಯೂ, ಅಲಂಕಾರಿಕರಿಗೆ ಅಲಂಕಾರವು, ರಸಿಕರಿಗೆ ರಸವು, ಶಿವಭಕ್ತರಿಗೆ ಶಿವಲೀಲೆಯು ಇಷ್ಟವಾಗುವದೆಂದು

ಕವಿಯು ತನ್ನ ಗ್ರಂಥಕ್ಕೆ ಬಹುಫಲಗಳನ್ನು ತೋರಿಸಿ ಸಾರ್ಥಕ್ಯವಂ ಸೂಚಿಸಿದಂತಾಯಿತು. (ಉಪಮಾಲಂಕಾರ) ॥ ೨೩ ॥

ಕಂ ॥ ರಸವತ್ಕಾವ್ಯದ ರಸಮಂ ।
ರಸಿಕರ್ಕಳ್ಬಲ್ಲ ತೆರದಿನರಿವರೆ ಗಾಂಪರ್ ॥
ಸಸಿಜೊನ್ನದಿನಿದನರಿವವೆ ।
ಮಿಸುಪ ಚಕೋರಂಗಳಂತೆಯುಳಿದ ಖಗಂಗಳ್ ॥ ೨೪ ॥

**ಟೀಕ** ॥ ಗಾಂಪರ್ – ಮೂಢರು : ರಸವತ್ಕಾವ್ಯದ – ಉತ್ತಮ ಕಾವ್ಯದ : ರಸಮಂ – ಶೃಂಗಾರಾದಿಪುಷ್ಟಿಯು : ರಸಿಕರ್ಕಳ್ ರಸಜ್ಞರಾದ ವಿದ್ವಾಂಸರು: ಬಲ್ಲತೆರದಿ – ತಿಳಿದಂತೆ : ಅರಿವರೆ – ತಿಳಿಯುತ್ತಾರೆಯೆ.(ಇಲ್ಲ) ಸಸಿ – ಶಶಿಯ : ಜೊನ್ನದ – ಬೆಳದಿಂಗಳ : ಇನಿದಂ – ರುಚಿಯನ್ನು : ಮಿಸುಪ ಚಕೋರಂಗಳಂತೆ – ಶೋಭಿಸುವ ಚಕೋರಪಕ್ಷಿಗಳ ಹಾಗೆ : ಉಳಿದ ಖಗಂಗಳ್ ಮಿಕ್ಕ ಹಕ್ಕಿಗಳು : ಅರಿವವೆ – ತಿಳಿಯುವೆವೋ. ಇಲ್ಲ ಎನ್ನುವುದು ವ್ಯತಿರಿಕ್ತವು ॥

**ತಾ** ॥ ಬೆಳದಿಂಗಳ ಸವಿಯು ಜೊನ್ನವಕ್ಕಿಗಳಿಗೆ ತಿಳಿಯುವದೇ ಹೊರತು – ಇತರ ಪಕ್ಷಿಗಳಿಗೆ ತಿಳಿಯದು. ಹಾಗೆಯೇ ಕಾವ್ಯದ ರಸವು ರಸಜ್ಞರಿಗೆ ತಿಳಿದೀತಲ್ಲದೆ ಮೂಢರಿಗೆ ತಿಳಿಯಲಾರದು. (ದೃಷ್ಟಾಂತಾಲಂಕಾರ) ॥ ೨೪ ॥

ಕಂ ॥ ಪ್ರಣುತಗುಣನಿಧಿಗಳತಿಲಾ ।
ಕ್ಷಣಿಕರ್ಮೃಡಭಕ್ತಿಭಾವಿತರ್ಸದ್ವಿಬುಧರ್ ॥
ಪ್ರಣಯದಿನೇಂನೀಕಬ್ಬಮ ।
ನಣಿಯರಮಾಲಿಸುಗೆತಿರ್ದುಗೋದುಗೆಸತತಂ ॥ ೨೫ ॥

**ಟೀಕ** ॥ ಪ್ರಣುತ – ಕೊಂಡಾಡಲ್ಪಟ್ಟ : ಗುಣ – ಸಾರಗ್ರಾಹ್ಯಾದಿ ಗುಣಗಳಿಗೆ : ನಿಧಿಗಳ್– ಕಣಿವೆಗಳಾಗಿರುವ : ಅತಿಲಾಕ್ಷಣಿಕರ್ – ಶ್ರೇಷ್ಠ ಲಕ್ಷಣಜ್ಞರಾದ : ಮೃಡಭಕ್ತಿ ಭಾವಿತರ್ – ಶಿವಭಕ್ತಿಯಿಂದ ಮಾನಿತರಾದ : ಸದ್ವಿಬುಧರ್ – ಉತ್ತಮರಾದ ಜ್ಞಾನಿಗಳು : ಪ್ರಣಯದಿಂ – ವಿಶ್ವಾಸದಿಂದ, ಸ್ನೇಹದಿಂದ : ಎನ್ನ – ನನ್ನ : ಈ ಕಬ್ಬಮಂ – ಕಾವ್ಯವನ್ನು : ಅಣಿಯರಂ – ಅತಿಶಯವಾಗಿ : ಆಲಿಪುಗೆ – ಕೇಳಲಿ : ತಿರ್ದುಗೆ – ತಿದ್ದಲಿ : ಸತತಂ – ಯಾವಾಗಲೂ : ಓದುಗೆ – ಪಠಿಸಲಿ ॥

**ತಾ** ॥ ನನ್ನ ಗ್ರಂಥವನ್ನು ಗುಣಜ್ಞರು ಕೇಳಲಿ, ಲಕ್ಷಣಜ್ಞರು ತಿದ್ದಲಿ, ಶಿವಭಕ್ತರು ಪಠಿಸಲಿ – ಕ್ರಮಾಲಂಕಾರವು, ಗೆ, ಎಂಬುವುದು ಪ್ರಾರ್ಥನಾರ್ಥಕವಾಗಿ ವಿಧಿಪ್ರತ್ಯಯವು ॥ ೨೫ ॥

**ಚಂ** ॥ ಇದು ಪೊಸ ರೀತಿ ನೋಡಿದು ನವೀನಮಲಂಕೃತಿ ನವ್ಯ ಭಾವಮಿಂ ।
ತಿದು ನವವೃತ್ತಿ ಲೇಸಿದು ರಸಸ್ಥಿತಿ ನೂತ್ನಮಿದಲ್ತೆ ನೂತನಂ ।
ಪದರಚನಾವಿಲಾಸಮಿದು ಕಬ್ಬಮ ಪೂರ್ವಮಿದೆಂದು ಕಬ್ಬಿಗ ।
ರ್ಪದೆದೊಲವಿಂದೆ ಕೀರ್ತಿಸೆ ನಿಮಿರ್ಚುವೆನೀ ಸುಭಗಪ್ರಬಂಧಮಂ ॥ ೨೬ ॥

**ಟೀಕ** ॥ ಇದು : ಪೊಸ ರೀತಿ – ನೂತನವಾದ ಬಗೆ ನೋಡು : ಇದು, ನವೀನಂ – ಹೊಸತಾದ : ಅಲಂಕೃತಿ – ಅಲಂಕಾರವು ಇದು – ನವ್ಯ ಭಾವವು – ಹೊಸ ತಾತ್ಪರ್ಯವು : ಇದು ಇಂತು ಹೀಗೆ – ನವವೃತ್ತಿ – ಹೊಸದಾದ ದೇಶ್ಯವು : ಇದು ಲೇಸು – ಚನ್ನಾಗಿರುವದು : ಇದು, ನೂತ್ನಂ – ಹೊಸದಾದ : ರಸಸ್ಥಿತಿ – ಶೃಂಗಾರಾದಿ ಸ್ಥಾಯಿಭಾವವು : ಇದಲ್ತೆ – ಇದಲ್ಲವೆ : ನೂತನಂ – ಹೊಸದಾದ :ಪದರಚನಾ ವಿಲಾಸಂ – ಶಬ್ದಗಳನ್ನು ಸೇರಿಸುವ ವಿನೋದವು : ಇದು, ಅಪೂರ್ವಂ ಕಬ್ಬಂ – ಹೊಸ ಕಾವ್ಯವು: ಎಂದು, ಕಬ್ಬಿಗರ್ – ಕವಿಗಳು: ಪಡೆದು – ತಿಳಿದು : ಒಲವಿಂದೆ – ಒಪ್ಪಿಗೆಯಿಂದೆ : ಕೀರ್ತಿಸೆ – ಕೊಂಡಾಡುವ ಹಾಗೆ ಈ: ಸುಭಗ ಪ್ರಬಂಧಮಂ – ಈ ಸೊಗಸಾದ ಗ್ರಂಥವನ್ನು : ನಿಮಿರ್ಚುವೆಂ – ರಚಿಸುವೆನು ॥

**ತಾ** ॥ ನನ್ನ ಕವಿತ್ವದ ಪ್ರತಿ ವಿಷಯವನ್ನು ಚನ್ನಾಗಿದೆಯೆಂದು ಕವಿಗಳು ಕೊಂಡಾಡಲು ಈ ಚಲುವಾದ ಕಾವ್ಯವನ್ನು ಮಾಡುವೆನು ॥ ಚಂಪಕಮಾಲೆ

ಉ ॥ ಜೇಂಗೊಡದಂತೆ ಝುಂಕರಿಪ ತುಂಬಿಗಳಿಂಚರದಂತ ಪೆಂಪನಾ ।
ಳಿಂಗಡಲಂತೆ ಪಣ್ತೆಸೆವ ಮಾಮರದಂತೆ ಪಯೋಜದಂತೆ ಬೆ ।
ಳ್ದಿಂಗಳ ಸೋಂಪಿನಂತೆ ಸುಸಿಲಾಶೆಯ ನಲ್ಲಳ ನೋಟದಂತೆ ಚಿ ।
ತ್ತಂಗೊಳಲಾರ್ಪುದೀ ಕೃತಿ ಷಡಕ್ಷರದೇವ ಕೃತಂ ರಸಜ್ಞರಾ ॥ ೨೭ ॥

**ಟೀಕ** ॥ ಜೇಂಗೊಡದಂತೆ – ಜೇನುತುಪ್ಪದ ಗಡಿಗೆಯ ಹಾಗೆ : ಝುಂಕರಿಪ ತುಂಬಿಗಳ – ಮೊರೆಯುವ ಭೃಂಗಗಳ: ಇಂಚರದಂತೆ – ಇನಿದಾದ ಸ್ವರದ ಹಾಗೂ: ಪೆಂಪನು ಆಳ್ದ ಯಿಂಗಡಲಂತೆ – ವೃದ್ಧಿಯನ್ನು ಪಾಲಿಸಿದ ಕ್ಷೀರಸಮುದ್ರದ ಹಾಗೂ: ಪಣ್ತೆಸೆವ ಮಾಮರದಂತೆ – ಫಲಿಸಿ ಶೋಭಿಸುವ ಮಾವಿನ ಮರದ ಹಾಗೂ: ಪಯೋಜಂತೆ – ತಾವರೆಯ ಹಾಗೂ : ಬೆಳ್ದಿಂಗಳ ಸೊಂಪಿನಂತೆ – ಚಂದ್ರಿಕಾ ಕುಸುಮದ ಹಾಗೂ: ಸುಸಿಲಾಸೆಯ ನಲ್ಲಳ ನೋಟದಂತೆ – ಸುರತವಂ ಬಯಸಿದ ಪ್ರಿಯಳ ಕಟಾಕ್ಷದ ಹಾಗೂ: ಷಡಕ್ಷರದೇವ ಕೃತಂ – ಷಡಕ್ಷರದೇವನೆಂಬ ಕವಿಯಿಂದ ರಚಿಸಲ್ಪಟ್ಟ, ಈ ಕೃತಿ – ಈ ಗ್ರಂಥವು : ರಸಜ್ಞರ – ರಸಿಕರ: ಚಿತ್ತಂ– ಮನವನ್ನು: ಕೊಳಲಾರ್ಪುದು – ಗ್ರಹಿಸಲಾಪುವುದು ॥

**ತಾ** ॥ ಷಡಕ್ಷರದೇವನ ಈ ಕಾವ್ಯವು ಜೇನುಳ್ಳ ಕೊಡದಂತೆ ರಸಮಾಧುರ್ಯ ಪೂರ್ಣವೆನಿಸಿ – ತುಂಬಿಗಳ ಇಂಚರದಂತೆ ಕರ್ಣಶ್ರಾವ್ಯವಾಗಿ, ಉಕ್ಕುವ ಪಾಲ್ಗಡಲಿನಂತೆ ಕೀರ್ತ್ಯುಲ್ಲಾಸ ವಿಪುಲಮಾಗಿ ಹಂಣುಗಳಿಂ ಮೆರವ ಸೀಮಾವಿನಂತೆ ಸಫಲವಾಗಿ ಕಮಲದಂತೆ ಪರಿಮಳಿಸುವದಾಗಿ, ಬೆಳದಿಂಗಳ ಸುಖದಂತೆ ಆಪ್ಯಾಯಕವಾಗಿ ಸುಸಿಲಾಸೆಯ ನಲ್ಲಳ ನೋಟದಂತೆ ಕಾಮ್ಯಪ್ರಿಯವಾಗಿರುವದರಿಂದ ರಸಜ್ಞರಿಗೆ ಮನೋಹರ ವಾಗುವದೆಂದು ಸ್ವಗ್ರಂಥದ ಗುಣೋತ್ಕರ್ಷವು ಸೂಚಿಸಲ್ಪಟ್ಟಿದೆ. ಉಪಮಾಲಂಕಾರ ॥ ಭ, ರ, ನ, ಭ, ಭ, ರ, ಎಂಬ ೬ ಗಣಗಳು ಲಘುಗುರುಗಳು – ಆದಪಾದಕ್ಕೆ – ಅಕ್ಷರದ ಕೃತಿಛಂದಸ್ಸಿನ – ಉತ್ಪಲಮಾಲಾವೃತ್ತವು ॥ ೮ ॥

(ಮುಂದುವರಿಯುತ್ತದೆ)

ವೀರಶೈವ ಅಪ್ರಕಟಿತ ಕೃತಿಮಾಲಿಕೆ

# ಮಂಟಪ ಶೃಂಗಾರ ಶೋಬಾನೆ ಮತ್ತು ಇತರ ಹಾಡುಗಳು

**ಡಾ. ವೈ.ಸಿ. ಭಾನುಮತಿ**

ಪ್ರತಿಯೊಂದು ಸಮುದಾಯದಲ್ಲೂ ತಮ್ಮದೇ ಆದ ಕೆಲವೊಂದು ಆಚರಣೆಗಳು, ಸಂಪ್ರದಾಯಗಳಿರುತ್ತವೆ. ಅವು ಹಿಂದಿನಿಂದಲೂ ನಡೆದುಬಂದಿದ್ದು ಇಂದಿಗೂ ಚಾಲ್ತಿಯಲ್ಲಿವೆ. ವಿವಿಧ ಆಚರಣೆಗಳ ಸಂದರ್ಭದಲ್ಲಿ ಹೇಳುತ್ತಿದ್ದ ಹಾಡುಗಳು ಇಂದು ಜನರ ನೆನಪಿನಿಂದ ದೂರ ಸರಿದಿದ್ದರೂ ಅಂಥ ಹಾಡುಗಳನ್ನು ಹೋಲುವ ಮಾದರಿಗಳು ಹಸ್ತಪ್ರತಿಗಳಲ್ಲಿ ಲಭ್ಯವಿದೆ. ಇಲ್ಲಿನ ಮೊದಲ ಹಾಡನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕೆ.ಬಿ. ೫೦೬ ಕ್ರಮಸಂಖ್ಯೆಯುಳ್ಳ ಕಾಗದದ ಹಸ್ತಪ್ರತಿಯಿಂದ (ಪುಟ ೨೩೧) ಪ್ರತಿ ಮಾಡಿ ಸಂಪಾದಿಸಿಕೊಡಲಾಗಿದೆ. 'ಮಂಟಪ ಶೃಂಗಾರ ಶೋಬಾನೆ' ಎಂದು ಕರೆಯುವ ಈ ಹಾಡನ್ನು ಶಿವಪೂಜೆಗಾಗಿ ಮಂಟಪ ಕಟ್ಟುವ ಸಂದರ್ಭದಲ್ಲಿ ಹಾಡುತ್ತಿದ್ದರೆಂದು ಭಾವಿಸಬಹುದು. ಮಂಟಪದ ಕಂಬಕ್ಕೆ "ವೇದಗಳೆ ಸ್ತಂಭವು ಆಗಮವೆ ತೊಲೆ" ಎಂದು ಇದರ ಕರ್ತೃ ಬಣ್ಣಿಸಿದ್ದಾನೆ. ಮಂಟಪಕ್ಕೆ ಬಳಸಿರುವ ಬಾಳೆಗಿಡಗಳನ್ನು, ಮೊಲ್ಲೆ ಮಲ್ಲಿಗೆ ಜಾಜಿ ಮುಂತಾದ ಹೂಬಳ್ಳಿಗಳನ್ನು, ಅರಳೆಲೆ ಮಾಗಾಯಿ ಗೆಜ್ಜೆ ಗಗ್ಗರ ಇತ್ಯಾದಿ ಆಭರಣಗಳನ್ನು ಹೆಸರಿಸಿರುವುದ ಗಮನಿಸಿದರೆ ಪ್ರಾಚೀನ ಕಾವ್ಯಗಳ ಓದು ಈ ಕವಿಗೆ ಇದ್ದಂತೆ ತೋರುತ್ತದೆ. ಶಿವಪೂಜೆ ಮಂಟಪಕ್ಕೆ ಚಪ್ಪರ ಹಾಕುವುದು, ಬಟ್ಟೆಗಳನ್ನು ಕಟ್ಟುವುದು, ಬೆಳಕಿನ ವ್ಯವಸ್ಥೆ ಮಾಡುವುದು, ನಡೆ ಮಡಿ ಹಾಸುವುದು – ಇವೆಲ್ಲವನ್ನೂ ಇಲ್ಲಿ ದಾಖಲಿಸಲಾಗಿದೆ. ಇಲ್ಲಿ ಪಂಚಾಕ್ಷರಿ ಮಂತ್ರದ ಶ್ರೇಷ್ಠತೆ, ಶರಣರ ಸಂಗದ ಅಗತ್ಯತೆಯನ್ನು ಉಲ್ಲೇಖಿಸುತ್ತ ಚೀಲಾಳೇಶನನ್ನು ಸ್ಮರಿಸಿರುವುದರಿಂದ ಕವಿ ಚೀಲಾಳ ಸಂಪ್ರದಾಯಕ್ಕೆ ಸೇರಿರಬಹುದು. ಶೋಬಾನೆ ಮಟ್ಟಿನಲ್ಲಿರುವ ಈ ಹಾಡು ಮಂಟಪಪೂಜೆಯ ಸಂದರ್ಭದಲ್ಲಿ ಹಾಡಲು ಯೋಗ್ಯವಾಗಿದೆ. ಆದಿಪ್ರಾಸ, ಅಂತ್ಯಪ್ರಾಸ, ಅನುಪ್ರಾಸಗಳಿಂದ ಕೂಡಿದ್ದು ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಆದರೆ ಕೆಲವು ಹುಸಿ ಶಬ್ದಗಳನ್ನೂ ಬಳಸಲಾಗಿದೆ. ಹಸ್ತಪ್ರತಿಯ ಸ್ಥಿತಿಯನ್ನು ಗಮನಿಸಿದರೆ ಇದರ ರಚನೆ ೭೦–೮೦ ವರ್ಷಗಳಿಗಿಂತ ಹಿಂದೆ ಆಗಿರಬಹುದು.

ವಿಭೂತಿಧಾರಣೆಗೆ ವೀರಶೈವ ಧರ್ಮದಲ್ಲಿ ವಿಶಿಷ್ಟ ಸ್ಥಾನವಿದೆ. ಹಾಗಾಗಿ ಶಿವತತ್ತ್ವ ಚಿಂತಾಮಣಿ, ಷಟ್ಸ್ಥಲತಿಲಕ ಇತ್ಯಾದಿ ವೀರಶೈವ ಕೃತಿಗಳಲ್ಲಿ ಪ್ರಾಸಂಗಿಕವಾಗಿ ವಿಭೂತಿ ಸಿದ್ಧಪಡಿಸುವಿಕೆ ಮತ್ತು ಧರಿಸುವಿಕೆಯ ವಿವರಗಳಿವೆ. ಇಲ್ಲಿಯ ಎರಡನೆಯ ರಚನೆ ವಿಭೂತಿಮಹಿಮೆಯನ್ನು ಸಂಕ್ಷಿಪ್ತವಾಗಿ ಹಾಡಿನ ರೂಪದಲ್ಲಿ ಹೇಳುತ್ತದೆ. ವಿಭೂತಿಯನ್ನು

ಭಕ್ತಿಯಿಂದ ಧರಿಸಿದರೆ ಕೈಲಾಸ ಪ್ರಾಪ್ತಿಯಾಗುತ್ತದೆ. ಜಾತಿಸೂತಕಗಳು, ಗ್ರಹದೋಷಗಳು ರೋಗರುಜಿನಗಳು ಇರುವುದಿಲ್ಲ ಎಂದು ಹೇಳುತ್ತದೆ. ಆದುದರಿಂದ ಆಬಾಲವೃದ್ಧರಾದಿಯಾಗಿ ಎಲ್ಲರೂ ವಿಭೂತಿಧಾರಣೆ ಮಾಡಬೇಕೆಂಬುದು ಇಲ್ಲಿನ ಆಶಯ. ಈ ಹಾಡಿನಲ್ಲಿ ಅರಸಿಗೆರೆ (ಅರಸೀಕೆರೆ) ಬಸವನ ಮುದುಕರು ಎಂಬ ಒಂದು ಉಲ್ಲೇಖವಿದ್ದು ಇವರು ಕವಿಯ ಸಮಕಾಲೀನ ಶರಣರಾಗಿರಬಹುದು. ವಿಭೂತಿಮಹಿಮೆಯ ಹಾಡಿನ ಬಳಿಕ ಬಸವಣ್ಣನವರ ಮೇಲೆ ಒಂದು ಮಂಗಳಾರತಿ ಪದವಿದೆ. ಇದನ್ನು ಮಂಗಳಾರತಿ ಸಮಯದಲ್ಲಿ ಹಾಡುತ್ತಿದ್ದಿರಬೇಕು. ಈ ಹಾಡುಗಳನ್ನು ಕೂಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿ ಭಂಡಾರದ ಕೆ.ಬಿ. ೫೦೬ ಸಂಖ್ಯೆ (ಪುಟ ೨೦೯) ಹಸ್ತಪ್ರತಿಯ ಪಠ್ಯವನ್ನಾಧರಿಸಿ ಸಂಪಾದಿಸಲಾಗಿದೆ. ಇದರ ಕರ್ತೃ, ಕಾಲಗಳು ತಿಳಿದುಬರುತ್ತಿಲ್ಲ; ಕಳೆದ ಶತಮಾನದ ಮಧ್ಯಭಾಗದಲ್ಲಿ ರಚಿತವಾಗಿರಬಹುದು. ಈ ಕಟ್ಟಿನಲ್ಲಿ ಪ್ರೌಢದೇವರ ಕಾವ್ಯ, ಬಸವೇಶ್ವರ ಚರಿತೆಯಂಥ ಕೃತಿಗಳೊಂದಿಗೆ ಬಿಡಿ ಹಾಡುಗಳಿವೆ. ಎಲ್ಲ ಕಾಲದಲ್ಲಿಯೂ ಪಂಡಿತ ಕವಿಗಳಿದ್ದಂತೆ ಲಘುಕೃತಿಗಳನ್ನು ರಚಿಸುವ ಕವಿಗಳೂ ಇರುತ್ತಿದ್ದರು. ಅಧ್ಯಯನಶೀಲನಾದ ಲಿಪಿಕಾರನೊಬ್ಬ ಇಲ್ಲಿ ಎರಡೂ ಬಗೆಯ ಕೃತಿಗಳನ್ನು ಪ್ರತಿ ಮಾಡಿಕೊಂಡಿದ್ದಾನೆ.

### ಮಂಟಪ ಶೃಂಗಾರದ ಶೋಬಾನೆ

ಶ್ರೀ ಶಿವನೇ ಸಲಹೆಂದು । ಶೀಘ್ರದಲ್ಲಿ ಬಂದು ।
ಶ್ರೀ ಶಾರದಾಂಬೆ ಗಣಪ । ವೃಷಭ ಶರಣೆಂದು ।
ಈ ಸದನಕಿನ್ನು ಉಭಯ ಚಪ್ಪರವೆಂದು
ಈಶ ಭಸ್ಮಂಗಳಲಿ ಮಂಟಪವೆಂದು
ಈಶ ನಂದೀಶ ಭೃಂಗೀಶ ಲೇಸ ನೀ[1][ಡೆ][1]ಂದು
ತಾ ಶರಣೆಂದು ಮಯನಿಂದ ರಚಿಸಿದರು ॥ ಶೋಬಾನೆ ॥ ೧ ॥

ಶಿಲ್ಪಶಾಸ್ತ್ರಂಗಳ ಬಲ್ಲ ಶಿವಭಕ್ತನಲ್ಲ
ಸೊಲ್ಪರ ಮಾತ್ರದಿ ಸೋಲುವವನಲ್ಲ
ಬಲು ಪರಾಕ್ರಮಶಾಲಿ ವೃಷಭೇಂದ್ರನಲ್ಲ
ಜಲ್ಪಕ ಜಾಹ್ನವಿಯ ರಮಣ ತಾನಲ್ಲ
ಉಲ್ಪ ಗೆಲ್ಪ ಕಲ್ಪ ಮಂಟಪವ ಕಲ್ಪಿಸಿದ ಕಥೆಯ ಶ್ರುತಿಯಾಗಿ ॥ ೨ ॥

---

1 ನೆಂ (ಮೂಲ)

ಜಲಪರ್ಯಂತರದಿ ಸೋಸಿ ಜಾತಿವಿಧವೆನಿಸಿ
ಸ್ಥಳವ ಪರೀಕ್ಷಿಸಿ ತಾಣವಿರಲೆನಿಸಿ
ಕುಲಗುರುಸ್ವಾಮಿಗೆ ಕೂಡೆ ನಮಸ್ಕರಿಸಿ
ಗೆಲುವು ಒಲವ ಚೆಲುವ
ಸಲುವ ಮಂಟಪವ ಸುಲಲಿತವಾಗಿ ಸಾವರಿಸಿದ ॥ ೩ ॥

ಧರ್ಮಾರ್ಥ ಕಾಮ ಮೋಕ್ಷವೆ ನಾಲ್ಕು ದ್ವಾರ
ಪೆರ್ಮೆಯಿಂ ಸಾಲೋಕ್ಯವೆ ಸಾರ ವೈರಾಗ್ಯಮೂರ
ನಿರ್ಮಳಾಲಂಕಾರ ಬ್ರಹ್ಮಕಲಶ ಪ್ರಕಾಶ
ಕರ್ಮಾಕರ್ಮ ಹರ್ಮ್ಯಮಂಟಪವ
ನಿರ್ಮಿಸಿದ ಕಥೆಯ ಜಯವೆನುತ ॥ ೪ ॥

ವೇದಗಳೆ ಸ್ತಂಭವು ಆಗಮವೆ ತೊಲೆಯು
ಬೋದಿಗೆ ತೋರಣ ಶಾಸ್ತ್ರ ಲೋವೆ[1]ಗಳು
ವೇದಾಂತವೆ ಹಲಗೆ ಕಥೆಯೆ ತೆನೆಗಳು
ಆದಿಶಕ್ತಿಯೆ ಪೀಠ ಅರುಹೆ ವದನಗಳು
ಆದ ಬೋಧ ನಾದ ಶ್ರೀದ ಮಂಟಪವ ಚಿತ್ರಗೈದು ಮಡಗಿದರು ॥ ೫ ॥

ಚೌದಿಕ್ಕುಗಳು ಹತ್ತು ಹನ್ನೆರಡರ ನೆಲೆಯ
ನವಕೇಸರಿ ನಲವರತು ಸಾವಿರದ ಬೆಲೆಯ
ತ್ರಿವಿಧೈಕಗೂಡಿದ ತ್ರಿವಿಧ ಕಲೆಯ
ನವರತ್ನದಿಂದ ಗೈದು ನುಡಿವ ಲಲ್ಲವಿಯ
ಅವರ ಇವರ ಕುವರ ಗೌರಮಂಟಪವ ಸಾವರಿಸಿ ಕೆತ್ತಿ ಮಡಗಿದರು ॥ ೬ ॥

ಹೊಳೆವಾಕಾರದಿಯಾಕಾರದಂತರದ
ನಿಳೆಯ ಶಬ್ದಬ್ರಹ್ಮ ನೀತಿಯಕ್ಷರದ
ಕೊಳನ ತೀರದ ಕೌಶಿಕದ ದಿವ್ಯಮಯದ
ಎಳೆಬ್ರಹ್ಮ ನಂದನವರ್ಣ ಷಡ್ವಿಧದ
ತಳದ ಕೊಳದ ಬೆಳದ ಪವಳದ ಮಂಟಪವ ತಿಳಿದಂದು ತಿದ್ದಿ ಶರಣೆಂದು ॥ ೭ ॥

---

1 ಲೋವೆ=ಚಾವಣಿಯ ಚೌಕಟ್ಟು

ಎಂಟು ದಿಕ್ಕಿಗೆ ಎಂಟು ವೃಷಭ ವಿಗ್ರಹವ
ನೀಂಟಿಸಿ ನಾಲ್ಕು ಬಾಗಿಲಿಗಲಂಕರವ
ಗಂಟಿಕ್ಕಿ ಸಿಂಹವ ಭೈರವರೆಲ್ಲ ಕಾವ
ಜಂಟಿಸಿ ನುಡಿವಾ ಪುತ್ತಳಿಗಳ ಕಲೆವ
ಗಂಟ ಮಿಂಬ ಭಂಟ ಮಂಟಪವ ಕಂಡು
ಉಂಟು ಮಾಡಿದರು ಉಘೆಯೆಂದು ॥ ೮ ॥

ಕಮಲ ಕೈರವದಾಮೋದ ಕೊಳದ ನಂದನದ
ಭ್ರಮರ ನಾರಂಗ ರಂಭ ಪೂಗ ಚಂಪಕದ
ವಿಮಲೆ ಮೊಲ್ಲೆ ಮಲ್ಲಿಗೆ ಜಾಜಿ ಸಂಪಿಗೆ ಕುಸುಮ[1]ದ[1]
ದ್ಯುಮಣಿಮಂಟಪವ ಕ್ರಮವರಿತು ರಚಿಸಿ ಪೊಗಳಿದರು ॥ ೯ ॥

ಅರಳೆಲೆಯು ಮಾಗಾಯಿ ಗೆಜ್ಜೆ ಗಗ್ಗರವು
ಅರಳು ಜಾಗಟೆ ಜಂಗು ಘಂಟೆ ಮಣಿಸರವು
ಅರಗಿಳಿಯು ಕೋಗಿಲೆ ಅಂಚೆ ಪಾರಿವಾಳವು
ಕರಿಗೋಲು ಮಲ್ಲಿಕೆ ಪುಟ್ಟ ಕಾಯ ಪೊ[ರಿ]ಮೃಗ[ವು]
ನೆರೆವ ಜರೆವ ಮೊರೆವ
ಗರುವ ಮಂಟಪವ ಸಾವರಿಸಿ ಕೆತ್ತಿ ಮಡಗಿದರು ॥ ೧೦ ॥

ಜಂಬೂದ್ವೀಪದೊಳಿದಕೆ ಜೊತೆಯಿಲ್ಲವೆನುತ
ಅಂಬರಪುರಕಿನ್ನು ನೂತ್ನವೆನುತ
ಕುಂಭಿನಿ ಹದಿನಾಲ್ಕರೊಳು ಕುಶಲವೆನುತ
ತುಂಬಿದ ಬಣ್ಣಂಗಳಿಂ ಸೂರ್ಯನೆಂದೆನುತ
ರಂಭ ಬಿಂಬ ಜಾಂಬ ಸಾಂಬ ಮಂಟಪವ
ಇಂಬಾಗಿದೆ ಎಂದು ನಮಿಸಿದರು ॥ ೧೧ ॥

ಅಂದಲವ ಹಾಕಿದರು ಹಾರವ ನೋಡಿ
ಒಂದು ಕಟ್ಟಿನ ಕಂಟು ಭರಣೆಯ ಗೂಡಿ
ಒಂದೊಂದು ಪರಿಪರಿಯ ನೂತ್ನಗಳ ಹೂಡಿ
ನಿಂದವರು ನೆರೆದವರು ನೋಡಿ ಕೊಂಡಾಡಿ
ನಂದ ಕಂದ ಬಂದು ಮಂಟಪವ
ತಂದೆ ಬಸವನಿಗೆ ಸಲಲೆಂದು ॥ ೧೨ ॥

---

1 ಹಸ್ತಪ್ರತಿಯಲ್ಲಿ 'ದ ನಾಗವಿದೇಶದ' ಎಂಬ ಪಾಠ ಇದೆ

ಚಪ್ಪರದ ಭಾವವೂ ಚೌಕಕಿಟ್ಟಾದೊ
ಉಪ್ಪರಿಗೆ [1][ಗುಡಿ][1] ಕಲಶ ಉಚಿತ ಕೈಲಾಸವ
ಸುಪ್ಪಾಣಿ ಮೌಕ್ತಿಕ ಸರಪಳಿ ಚೆನ್ನಾದೊ
ಕುಪ್ಪಿಗೆಯ ಬಟುವಿನ ಕುಶಲ ಹಸನಾದೊ
ಕಪ್ಪ ನಪ್ಪ ವಪ್ಪವ ಹಾಕಿ
ಅಪ್ಪ ಬಸವನಿಗೆ ಸಲಲೆಂದು ॥ ೧೩ ॥

ಉಭಯ ಚಪ್ಪರವನ್ನು ಮಾಯ ಕಲ್ಯಾಣದಂತೆ
ಪ್ರಭುವಿನ ವಿಭುವಾಗಿಯೂ ಎಂಬಂತೆ
ಪ್ರವುಢ ವಿಶ್ವಕರ್ಮ ನಿರ್ಮಿಸಿದಂತೆ
ಎಳೆಯ ಬ್ರಹ್ಮಾನಂದ ವರ್ಣ ಷಡ್ವಿಧ
ತಳದ ಕೊಳದ ಬೆಳದ ಫಳದ ಮಂಟಪವ
ತಿಳುಪಿಂದ ತಿದ್ದಿ ಶರಣೆಂದು ॥ ೧೪ ॥

ಪಟ್ಟು ಪಟ್ಟಾವಳಿಯ ಜೀ[2][ಕಿ][2] ನಾಣ್ಯಗಳ
ಗಟ್ಟಿ ನೀರಾಜಿಯ ಘನ ಜವಳಿಯ
ಪಟ್ಟಣದಗಲಕೆ ಪ್ರತಿಸೂರ್ಯರುಗಳ
ಹಟ್ಟಿ ಹಾದಿಗಳಲಿ ಹಾಸಿ ಬಣ್ಣಗಳ
ಕಟ್ಟಿ ಮುಟ್ಟಿ ತಟ್ಟಿ ನೆಟ್ಟನೆ ಬಂದು
ಕಟ್ಟಾಳು ಸ್ವಾಮಿಗೆ ಎರಗಿದರು ॥ ೧೫ ॥

ತ್ರಾಹಿ ತಾರಕಬ್ರಹ್ಮ ತ್ರಾಹಿ ಗೌರಮ್ಮ
ತ್ರಾಹಿ ವಿಶ್ವಬ್ರಹ್ಮ ತ್ರಾಹಿ ನಿನಗಮ್ಮ
ತ್ರಾಹಿ ವಿರಹಿತ ಕರ್ಮ ತ್ರಾಹಿ ಮಾಯಮ್ಮ
ತ್ರಾಹಿ ಸರ್ವಜ್ಞ ಮಹಿಮ ತ್ರಾಹಿ ನಿನಗಮ್ಮ
ಸೋಹ ಮೋಹ ನೇಹ ಮಹಾ ಪರಬ್ರಹ್ಮ
ದೇಹಿ ನಮಸ್ತೇ ನಮೋ ಎಂದು ಶರಣಾರ್ಥಿ ॥ ೧೬ ॥

ಗುರುತತ್ವದಿಂದಧಿಕ ಘನವಿಧವೆನುತ
ಪರಮಪಂಚಾಕ್ಷರಿಗೆ ಪ್ರತಿಯಿಲ್ಲವೆನುತ
ಶರಣರ ಸಂಗವೆ ಸಾಯುಜ್ಯವೆನುತ
ಪರಿಪೂರ್ಣ ಷಡ್ವಿಧ ಪ್ರಭುವೆನುತ

---

1. ಕು (ಮೂಲ), 2. ಖ (ಮೂಲ)

ಕರದ ಶಿರದ ಹರನಂದನವ
ಗುರು ಚೇಲಾಳೇಶನ ಕರುಣದಲಿ ಶೋಬಾನೆ ॥ ೧೭ ॥

## ವಿಭೂತಿ ಮಹಿಮೆ

ಶಿವಶಿವ ಎನುತಲಿ ವಿಭೂತಿ ಧರಿಸಲು । ಭವಗಳ ಹರಿವದು ವಿಭೂತಿ ॥
ಭುವನದ ಜನರಿದು ಭಕ್ತಿಲಿ ಧರಿಸಲು । ಶಿವಪುರಕೊಯ್ವುದು ವಿಭೂತಿ ॥ ೧ ॥

ಜಾತಿಸೂತಕ ಜನಜಾಡ್ಯ ಜ್ವರಂಗಳ । ಪಾತಕ ಹರಿವದು ವಿಭೂತಿ
ಶೀತವು ಭಳಿರೆ ಖಾತಿಯ ಬಿಟ್ಟು ಅ।ತೀತರೊಲಿವದು ವಿಭೂತಿ ॥ ೨ ॥

ನಿಷ್ಠೆಯಿಂ ಬಂದು ನಿತ್ಯವು ಪೂಜಿಸೆ । ದೃಷ್ಟವ ತೋರುವ ವಿಭೂತಿ
ದುಷ್ಟ ದೋಷ ಗ್ರಹ ಮುಟ್ಟುವು ಅವುಗಳ । ನಿಷ್ಟವ ಹರಿವುದು ವಿಭೂತಿ ॥ ೩ ॥

ಪುಟ್ಟ ಬಾಲರಿಗೆ ಪಣೆಯೊಳು ಧರಿಸಲು । ದೃಷ್ಟಿಗೆ ಒಳ್ಳೇದು ವಿಭೂತಿ*
ಶಶಿ ರವಿ ಮುನಿಗಳು ಹರಿ ಅಜ ಇಂದ್ರರು । ಕುಶಲ ಧರಿಸಲು ವಿಭೂತಿ ॥ ೪ ॥

ವಸುಧೆಗರಸಿಗೆರೆ ಬಸವನ ಮುದುಕರು । ಶಶಿಧರ ಧರಿಸುವ ವಿಭೂತಿ
ಶಿವಶಿವ ಎನುತಲಿ ವಿಭೂತಿ ಧರಿಸಲು । ಭವಗಳ ಹರಿವುದು ವಿಭೂತಿ ॥ ೫ ॥

## ಮಂಗಳಾರತಿ

ಮಂಗಳೆನ್ನಿರಿ ಭಕ್ತರೆಲ್ಲ ಜಯಮಂಗಳೆನ್ನಿರಿ ಬಸವಗೆ ॥
ಕಂಗಳು ಮೂರುಳ್ಳ ಶಿವನಿಗೆ ಗಂಗೆ ಜಡೆಯೊಳು ತಾಳ್ದಗೆ ॥ ಪ ॥

ತನುವನುಳಿದು ಗುಣವ ತುಳಿದು ಮನವ ಹಿಡಿದು ನಿಂದಗೆ
ತನುವು ಗುಣವು ಮನವು ಕೂಡಿ ನಿರ್ವಯಲೊಳಿಂತು ಸುಳಿವಗೆ ॥ ೧ ॥

ಆರು ಗುಣಗಳ ಹರಿತ ಮಾಡಿ ಮೂರು ತನುವು ತಾನಾದಗೆ
ಸ್ಥೂಲಸೂಕ್ಷ್ಮ ಕಾರಣಂಗಳ ತೋರಿ ಬೆಳಗುವ ಬಸವಗೆ ॥ ೨ ॥

ಆದಿ ಇಲ್ಲದನಾದಿ ಇಲ್ಲದ ಶೂನ್ಯದಾಚೆ ಇರುವಗೆ
ತೋರಿ ಅಡಗಿ ಅಡಗಿ ತೋರಿ ನಿಬ್ಬೆರಗ ಮಾಡುವ ಬಸವಗೆ ॥ ೩ ॥

ಸ್ಥೂಲಭಕ್ತಿ ಸೂಕ್ಷ್ಮಶಕ್ತಿ ಕಾರಣವೆ ಮುನ್ನ ಜ್ಯೋತಿಯು
ಭೂತರೂಪ ತೋರಿದಂತೆ ಭಾಳಾಕ್ಷಮೂರ್ತಿಗೆ ಬೆಳಗಿರೋ ॥ ೪ ॥

□

---

* ಈ ಪದ್ಯಭಾಗ ಹಸ್ತಪ್ರತಿಯಲ್ಲಿ ಅಪೂರ್ಣವಾಗಿದೆ

ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ

# ಗುರೂರಿನ ರಾಮಲಿಂಗೇಶ್ವರ ದೇವಾಲಯದ ಕ್ಷೇತ್ರ ಅಧ್ಯಯನ

ಡಾ. ಎಸ್.ಜಿ. ರಾಮದಾಸ ರೆಡ್ಡಿ

ಗುರೂರು ಎಂಬುದು ಮೈಸೂರು ಜಿಲ್ಲೆ ಮತ್ತು ತಾಲ್ಲೂಕು ಕಸಬಾ ಹೋಬಳಿಯ ಒಂದು ಗ್ರಾಮ. ಇದು ಮೈಸೂರು ನಗರ ವ್ಯಾಪ್ತಿಯಲ್ಲಿದೆ. ಮೈಸೂರು ನಗರದಿಂದ 8 ಕಿ.ಮೀ. ದೂರದಲ್ಲಿದ್ದು, ಬಸ್ ಸೌಲಭ್ಯವಿದೆ. ಗ್ರಾಮದಲ್ಲಿ ರಾಮಲಿಂಗೇಶ್ವರ ದೇವಾಲಯ, ವೀರಗಲ್ಲು, ಕಾಡುಬಸವೇಶ್ವರ ದೇವಾಲಯ, ಲಿಂಗಮುದ್ರೆ ಕಲ್ಲು ಇತರೆ ಪ್ರಾಚೀನ ಕುರುಹುಗಳು ಗ್ರಾಮದ ಇತಿಹಾಸವನ್ನು ಎತ್ತಿ ಹಿಡಿದಿವೆ.

ಗ್ರಾಮವು ಐತಿಹಾಸಿಕ ಮಹತ್ವ ಪಡೆದ ಗ್ರಾಮವಾಗಿದೆ. ಊರಿನ ಹೊರಭಾಗದಲ್ಲಿ ತೆಂಗಿನತೋಟಗಳ ಮಧ್ಯೆ ಕಿರುದಾರಿಯಲ್ಲಿ ಪ್ರಯಾಣಿಸಿದರೆ ಪ್ರಮುಖವಾದ ರಾಮಲಿಂಗೇಶ್ವರ ಪ್ರಾಚೀನ ದೇವಾಲಯವಿದೆ. ದೇವಾಲಯವು ಪೂರ್ವಕ್ಕೆ ಮುಖ ಮಾಡಿದೆ. ಉತ್ತರ–ದಕ್ಷಿಣ 24.5 ಅಡಿ, ಪೂರ್ವ–ಪಶ್ಚಿಮ 8.5 ಅಡಿ ವಿಸ್ತೀರ್ಣವಾಗಿದೆ. ದೇವಾಲಯದ ಒಟ್ಟು ಸುತ್ತಳತೆ 66.6 ಅಡಿ. ದೇವಾಲಯವು ಗರ್ಭಗುಡಿ, ಸುಕನಾಸಿ, ಸರಳವಾದ ಮುಖಮಂಟಪವನ್ನು ಹೊಂದಿದೆ.

ದೇವಾಲಯದ ಗರ್ಭಗುಡಿ ಪೂರ್ವ–ಪಶ್ಚಿಮ 6.2 ಅಡಿ, ಉತ್ತರ–ದಕ್ಷಿಣ 6.3 ಅಡಿ ವಿಸ್ತೀರ್ಣ ಇದೆ. ದೇವಾಲಯದ ಎತ್ತರ 7.9 ಅಡಿ ಇದೆ. ಗರ್ಭಗುಡಿಯಲ್ಲಿ ಒಟ್ಟು ನಾಲ್ಕು ಲಿಂಗಗಳು ಇವೆ. ಇದರಲ್ಲಿ ಒಂದು ಉದ್ಭವಮೂರ್ತಿ ಎಂದು ಜನ ಹೇಳುತ್ತಾರೆ. ಇನ್ನೊಂದು ಪಾಣಿಪೀಠದ ಮೇಲೆ ಸುಂದರವಾದ ದೊಡ್ಡ ಲಿಂಗವಿದೆ. ಇದು 1.8 ಅಡಿ ಎತ್ತರವಾಗಿದ್ದು, ವಿಶೇಷವಾದ ಶಿವಲಿಂಗವಾಗಿದೆ. ಈ ಲಿಂಗವನ್ನು ಕಾಶಿಯಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂಬುದು ಸ್ಥಳೀಯರ ನಂಬಿಕೆ. ಲಿಂಗಗಳ ಮುಂಭಾಗದಲ್ಲಿ ಆಲಂಕಾರಿಕವಾದ ನಾಲ್ಕು ನಂದಿಶಿಲ್ಪಗಳು ಇವೆ. ಈ ಶಿಲ್ಪಗಳು ಸುಕನಾಸಿಯು ಗರ್ಭಗುಡಿಯಷ್ಟೇ ವಿಶಾಲವಾಗಿದೆ ಹಾಗೂ ಸರಳವಾಗಿದೆ.

ದೇವಾಲಯದಲ್ಲಿ ವಿಶೇಷವಾಗಿ ಹುಣ್ಣಿಮೆ, ಅಮವಾಸ್ಯೆ ದಿನಗಳಲ್ಲಿ ಹಾಗೂ ಶಿವರಾತ್ರಿ, ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಹಾಗೆಯೇ ಪ್ರತಿ ಸೋಮವಾರ, ಶುಕ್ರವಾರದಂದು ಪೂಜೆ ನಡೆಯುತ್ತದೆ. ಸ್ಥಳೀಯರು ಮತ್ತು ಸುತ್ತಮುತ್ತಲ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ದೇವರ ಕೃಪೆಗೆ ಪಾತ್ರರಾಗುತ್ತಿದ್ದಾರೆ.

ಈ ದೇವಾಲಯದ ಪಕ್ಕದಲ್ಲೇ ಇರುವ ಶಾಸನದಲ್ಲಿ ಕ್ರಿ.ಶ. 1516 ಸೆಪ್ಟೆಂಬರ್ 1 ರಂದು ದೇವಾಲಯಕ್ಕೆ ವಿಜಯನಗರ ಸಾಮ್ರಾಜ್ಯದ ದೊರೆ ಕೃಷ್ಣದೇವರಾಯನ ಕಾಲದಲ್ಲಿ ದಾನ ನೀಡಿದ ಬಗ್ಗೆ ಉಲ್ಲೇಖವಿದೆ. ಇದರಿಂದ ಅಂದು ಈ ಗ್ರಾಮ ಮತ್ತು ದೇವಾಲಯ ಪ್ರಮುಖವಾದ ಪಾತ್ರ ವಹಿಸಿತ್ತೆಂದು ತಿಳಿಯಬಹುದು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿಯೇ ಈ ದೇವಾಲಯ ನಿರ್ಮಾಣಗೊಂಡಿದ್ದು, ಶಿಲ್ಪಶೈಲಿಯ ಆಧಾರದ ಮೇಲೆ ಇದು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು; ಹೆಚ್ಚಿನ ಅಧ್ಯಯನದ ಅಗತ್ಯತೆ ಇದೆ.

ಇಂತಹ ದೇವಾಲಯದ ಸುತ್ತಲೂ ಮುಳ್ಳಿನ ಗಿಡಗಳು, ಬೇಲಿಗಿಡಗಳು ತುಂಬಿದ್ದು ಇದನ್ನು ಗಮನಿಸಿದ ಮೈಸೂರು ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಸ್ವಯಂಸೇವಕರು ಸ್ವಚ್ಛಗೊಳಿಸಿ ಸಂರಕ್ಷಿಸುವ ಕಾರ್ಯ ಮಾಡುತ್ತಿದ್ದಾರೆ. ವಿಶೇಷವಾಗಿ ದೇವಾಲಯದ ಪಕ್ಕದಲ್ಲಿಯೇ ಇರುವ ವೀರಗಲ್ಲು, ಲಿಂಗಮುದ್ರೆ ಕಲ್ಲು, ಶಿಲಾಶಾಸನಗಳು ಉಲ್ಲೇಖಕ್ಕೆ ಅರ್ಹವಾಗಿವೆ. ಸ್ಥಳೀಯರು ಇವುಗಳಿಗೆ ಎಣ್ಣೆ ಹಾಕಿ ಕಪ್ಪಾಗಿಸಿ ಮುಚ್ಚಿಬಿಟ್ಟಿದ್ದರು. ಇವನ್ನು ಎನ್.ಎಸ್.ಎಸ್. ಸ್ವಯಂಸೇವಕರು ಸ್ವಚ್ಛಗೊಳಿಸಿ ಸಂರಕ್ಷಿಸಿದ್ದಾರೆ.

**ಶಿಲಾಶಾಸನ:** ಶಿಲಾಶಾಸನವು ವಿಜಯನಗರ ಸಾಮ್ರಾಜ್ಯದ ಪ್ರಮುಖ ದೊರೆಯಾದ ಕೃಷ್ಣದೇವರಾಯನ ಕಾಲದ ಶಾಸನ. ಇದು ನಗರದ ಹಾಗೂ ಮೈಸೂರು ತಾಲ್ಲೂಕಿನ ಭೂಭಾಗದಲ್ಲಿ ದೊರಕಿರುವ ಏಕೈಕ ಶಾಸನ. ಕೃಷ್ಣದೇವರಾಯನ ಕಾಲದಲ್ಲಿ ನಗರ ವ್ಯಾಪ್ತಿಯಲ್ಲಿ ಶೈವಧರ್ಮದ ಮೇಲೆ ಬೆಳಕು ಚೆಲ್ಲುವ ಅಪರೂಪದ ಶಾಸನ.

ಈ ಶಾಸನವು ಶ್ರೀರಂಗಪಟ್ಟಣದ ಶ್ರೀಮನ್ಮಹಾಸೇನಾಸಮುದ್ರ ಸಾಳುವ ಗಜಸಿಂಹ ಚಿಕ್ಕೊಡೆಯರ ಕುಮಾರರು ವೀರಪ್ಪೊಡೆಯರು ಬೊಮ್ಮನಹಳ್ಳಿಯ ಸಿದ್ದಯ್ಯದೇವ ಒಡೆಯರ ಮಕ್ಕಳು ಸಿದ್ದಲಿಂಗಣ್ಣ ಒಡೆಯರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿ ಯಾಗಲೆಂದು ಕಾರೆಗನಹಳ್ಳಿ ಸ್ಥಳದ ಗುರೂರನ್ನು ಆ ಊರಿಗೆ ಸೇರುವ ಗದ್ದೆ, ಬೆದ್ದಲು, ಸುಂಕ, ಸುವರ್ಣಾದಾಯ ಮುಂತಾದ ಸರ್ವಸ್ವಾಮ್ಯಸಹವಾಗಿ, ಸರ್ವಮಾನ್ಯ ವಾಗಿ ಚತುಸ್ಸೀಮೆಯೊಳಗಣ ಎಂಟು ದಿಕ್ಕಿನ ಲಿಂಗಮುದ್ರೆಯ ಕಲ್ಲು ನೆಟ್ಟಿಸಿಕೊಟ್ಟು ಗುರೂರು ಶಿವಾಲಯಕ್ಕೆ ಕೊಟ್ಟ ಬಗ್ಗೆ ಉಲ್ಲೇಖವಿದೆ.

ಈ ಶಾಸನವು 4.0 ಅಡಿ ಎತ್ತರ, 2.8 ಅಡಿ ಅಗಲ, 5 ಇಂಚು ದಪ್ಪವಿರುವ ಬಿಳಿ ಗ್ರಾನೈಟ್ ಕಲ್ಲಿನಲ್ಲಿ ರಚಿತವಾಗಿದೆ. ಕನ್ನಡ ಭಾಷೆಯ 18 ಸಾಲುಗಳ ಶಾಸನವಾಗಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ತ್ರಿಶೂಲ, ಮಧ್ಯೆ ಶಿವಲಿಂಗವಿದೆ. ಬಲಭಾಗದಲ್ಲಿ ಹಸು ಮತ್ತು ಕರುವಿನ ಶಿಲ್ಪಗಳನ್ನು ಕೆತ್ತಲಾಗಿದೆ. ಎಡಭಾಗದಲ್ಲಿ ತ್ರಿಶೂಲವಿದೆ. ಇಂತಹ ಅಪರೂಪದ ಶಾಸನವನ್ನು ಸಂರಕ್ಷಿಸುವಲ್ಲಿ ಸ್ವಯಂಸೇವಕರು ಯಶಸ್ವಿಯಾಗಿದ್ದಾರೆ.

16 ನೇ ಶತಮಾನದ ಆರಂಭದಲ್ಲೇ ಈ ಗ್ರಾಮಕ್ಕೆ ಗುರೂರು ಎಂಬ ಹೆಸರಿತ್ತೆಂದು ತಿಳಿಸುವ ಅತ್ಯಂತ ಮಹತ್ವಪೂರ್ಣ ಅಂಶವನ್ನು ಈ ಶಾಸನ ತಿಳಿಸುತ್ತದೆ. ಇಂದು ಸುಸ್ಥಿತಿಯಲ್ಲಿರುವ ಈ ಶಿವಾಲಯಕ್ಕೆ ಕೃಷ್ಣದೇವರಾಯನ ಕಾಲದ ಸಾಮಂತರು ಗುರೂರು ಗ್ರಾಮದ ಭೂಮಿಯಿಂದ ಬರುವ ಆದಾಯವನ್ನು ಕೊಟ್ಟ ಬಗ್ಗೆ ಹಾಗೂ ಲಿಂಗಮುದ್ರೆ ಕಲ್ಲುಗಳನ್ನು ನೆಡಿಸಿದ ಬಗ್ಗೆ ಮಾಹಿತಿ ಇದೆ. ಪ್ರಸ್ತುತ ಒಂದು ಲಿಂಗಮುದ್ರೆ ಕಲ್ಲು ಮಾತ್ರ ಇದೆ. ಈ ಶಾಸನ ಸ್ಥಳೀಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಮಹತ್ವಪೂರ್ಣವಾದ ದಾಖಲೆಯಾಗಿದೆ. ಇದನ್ನು ಸ್ಥಳೀಯರು ಹಾಗೂ ಮುಜರಾಯಿ ಇಲಾಖೆ ಸಂರಕ್ಷಿಸುವ ಅಗತ್ಯತೆ ಇದೆ.

**ವೀರಗಲ್ಲು:** ರಾಮಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿ ವೀರಗಲ್ಲು ಇದೆ. ಇದು 3.9 ಅಡಿ ಎತ್ತರ, 1.8 ಅಡಿ ಅಗಲ, 10 ಇಂಚು ದಪ್ಪ ಇದ್ದು ಕರಿಕಲ್ಲಿನಲ್ಲಿ ಕೆತ್ತಿರುವ ಈ ಶಿಲ್ಪದಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಬಿಲ್ಲು ಬಾಣ ಹಿಡಿದು ಹೋರಾಡುತ್ತಿರುವ ವೀರರ ದೃಶ್ಯವಿದೆ, ಶಿಲ್ಪಗಳು ತ್ರುಟಿತವಾಗಿವೆ. ಎರಡನೆಯ ಹಂತದಲ್ಲಿ ವೀರನನ್ನು ದೇವಕನ್ಯೆಯರು ಪುಷ್ಪಕವಿಮಾನದಲ್ಲಿ ಕೊಂಡೊಯ್ಯುವ ದೃಶ್ಯವಿದೆ. ಮೂರನೆಯ ಹಂತದಲ್ಲಿ ವೀರ ಧ್ಯಾನಮಗ್ನನಾಗಿ ಕುಳಿತಿರುವ, ಯತಿ ಲಿಂಗದ ಮುಂದೆ ನಿಂತಿರುವ, ನಂದಿ ಮಲಗಿರುವ ದೃಶ್ಯವಿದೆ. ಲಿಂಗದ ಮೇಲೆ ಪ್ರಭಾವಳಿಯ ದೃಶ್ಯವಿದೆ. ಈ ವೀರಗಲ್ಲು ವಿಶೇಷವಾದ ಶಿಲ್ಪವಾಗಿದ್ದು ತ್ರುಟಿತವಾಗಿದೆ. ಈ ಶಿಲ್ಪಶೈಲಿಯ ಆಧಾರದ ಮೇಲೆ 12–13ನೆಯ ಶತಮಾನದ ಕಾಲಾವಧಿಯ ಶಿಲ್ಪವೆಂದು ಹೇಳಬಹುದು.

**ಬಾವಿ:** ರಾಮಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿ ಚಚ್ಚೌಕ ಆಕಾರದಲ್ಲಿದೆ. ಇಟ್ಟಿಗೆ, ಗಾರೆ ಬಳಸಿ ಸುಮಾರು 50 ರಿಂದ 60 ಅಡಿ ಆಳದ ಬಾವಿ ನಿರ್ಮಿಸಿದ್ದಾರೆ. ಇಟ್ಟಿಗೆಯ ಶೈಲಿಯ ಆಧಾರದ ಮೇಲೆ 12–13 ನೆಯ ಶತಮಾನದಲ್ಲಿ ಈ ಬಾವಿಯನ್ನು ನಿರ್ಮಿಸಿರಬಹುದು. ದೇವಾಲಯದ ಪೂಜಾ ಕಾರ್ಯಗಳಿಗೆ ಇದರಿಂದಲೇ ನೀರನ್ನು ಬಳಸಿರುವ ಸಾಧ್ಯತೆ ಇದೆ. ಈ ತರಹದ ಬಾವಿ ಇದೇ ತಾಲ್ಲೂಕಿನ ಗಡಿಭಾಗದ ಗ್ರಾಮವಾದ ಮದ್ದೂರು ಗ್ರಾಮದ ಸೋಮೇಶ್ವರ ದೇವಾಲಯದ ಮುಂದೆಯೂ ಇದ್ದು ಅದನ್ನೂ ಎನ್.ಎಸ್.ಎಸ್. ಸ್ವಯಂಸೇವಕರು ಸಂರಕ್ಷಿಸಿದ್ದಾರೆ.

**ದೇವಿಕೆರೆ:** ದೇವಾಲಯದ ಮುಂಭಾಗದಲ್ಲಿ ಸುಮಾರು 100 ಮೀ. ಅಂತರದಲ್ಲಿರುವ ವಿಶಾಲವಾದ ಕೆರೆಯು ಪ್ರಾಚೀನ ಕೆರೆಯಾಗಿದೆ. ದೇವಿಕೆರೆ ಎಂದು ಕರೆಯಲಾಗುವ ಈ ಕೆರೆ ಹಾಗೂ ಕೆರೆಯ ಮುಂಭಾಗದಲ್ಲೇ ರಾಮಲಿಂಗೇಶ್ವರ ದೇವಾಲಯ ಇರುವುದರಿಂದ ದೇವಿಯ ದೇವಾಲಯವು ಅಂದು ಈ ಭಾಗದಲ್ಲಿ ಇದ್ದಿರಬೇಕು; ಹೆಚ್ಚಿನ ಅಧ್ಯಯನದ ಅಗತ್ಯತೆ ಇದೆ. ಈ ಕೆರೆ ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು. ಇದೇ ಹೆಸರಿನ ಕೆರೆ ಚಾಮುಂಡಿ ಬೆಟ್ಟದ ಮೇಲೆ ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದೆ.

**ಕಾಡುಬಸವೇಶ್ವರ ದೇವಾಲಯ:** ಈ ದೇವಾಲಯವು ಗ್ರಾಮದ ಪಶ್ಚಿಮ ದಿಕ್ಕಿಗೆ ಇದೆ. ಇದು ಮುಜರಾಯಿ ಇಲಾಖೆಗೆ ಸೇರಿದ ದೇವಾಲಯ. ದೇವಾಲಯವು ಉತ್ತರ–ದಕ್ಷಿಣ 26.2 ಅಡಿ, ಪೂರ್ವ–ಪಶ್ಚಿಮ 9.8 ಅಡಿ, ಎತ್ತರ 8.2 ಅಡಿ ಇದೆ. ದೇವಾಲಯವು ಗರ್ಭಗುಡಿ, ಸುಕನಾಸಿ, ವರಾಂಡಗಳಿಂದ ಕೂಡಿದೆ. ಗರ್ಭಗುಡಿಯ ಒಳಭಾಗ ಉತ್ತರ–ದಕ್ಷಿಣ 6 ಅಡಿ, ಪೂರ್ವ–ಪಶ್ಚಿಮ 6.4 ಅಡಿ, 7.2 ಅಡಿ ಎತ್ತರ ಇದೆ. ಗರ್ಭಗುಡಿ ಮತ್ತು ಸುಕನಾಸಿಯ ಉದ್ದ, ಅಗಲ, ಎತ್ತರ ಸಮಸಮವಾಗಿವೆ. ಗರ್ಭಗುಡಿಯಲ್ಲಿ ಚಿಕ್ಕ ಮತ್ತು ದೊಡ್ಡ ಬಸವನ ಶಿಲ್ಪಗಳಿವೆ.

**ಲಿಂಗಮುದ್ರೆ ಕಲ್ಲು:** ಕಾಡುಬಸವೇಶ್ವರ ದೇವಾಲಯದ ಮುಂಭಾಗದಲ್ಲಿ 2.6 ಅಡಿ ಎತ್ತರ, 1.1 ಅಡಿ ಅಗಲ, 6 ಇಂಚು ದಪ್ಪವಿರುವ ಈ ಶಿಲ್ಪದ ಮೇಲೆ ಶಿವಲಿಂಗ, ಸೂರ್ಯ, ಚಂದ್ರ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಾಗಿವೆ. ಇವುಗಳನ್ನು ಮತ್ತು ಶಾಸನಗಳನ್ನು ಸಂರಕ್ಷಿಸಿ, ಸ್ಥಳೀಯ ಇತಿಹಾಸದ ಮಹತ್ವವನ್ನು ತಿಳಿಸುವ ಅಗತ್ಯತೆ ಇದೆ.

ರಿ !

ರಿ

?

- ಅಕ್ಕಮಹಾದೇವಿ

# ಹುಲ್ಲಹಳ್ಳಿ ಶಾಂತವೀರ ದೇಶಿಕ ವಿರಚಿತ "ಶಿವಲಿಂಗ ಚಾರಿತ್ರ" : ಒಂದು ಪರಿಚಯ

**ಡಾ. ಬಿ. ನಂಜುಂಡಸ್ವಾಮಿ**

(ಹಿಂದಿನ ಸಂಚಿಕೆಯಿಂದ)

ಶಿವಲಿಂಗಾರ್ಯನು ಶಿವಸಾಯುಜ್ಯ ಹೊಂದಿದ ಮೇಲೆ ವೀರಣಾರ್ಯನು ಸುಖದಿಂದಿದ್ದನು. ತನ್ನ ನಿಜಶಿಷ್ಯರಿಂದ ಪೂಜೆಯನ್ನು ಕೈಕೊಂಬೆನೆಂದು ಪುರವಂ ಬಿಟ್ಟು ಬಿಜ್ಜಾವರಕ್ಕೆ ಆಗಮಿಸಿದನು. ತುಮಕೂರು ಜಿಲ್ಲೆ ಮದ್ದಗಿರಿ ಪಕ್ಕ ಬಿಜ್ಜಾವರ ಗ್ರಾಮವಿದೆ. ಇಲ್ಲಿ ರಾಜ್ಯಭಾರ ಮಾಡುತ್ತಾ ಇದ್ದ ದೊರೆಗಳಿಗೆ 'ಬಿಜ್ಜಾವರ ದೊರೆಗಳು' ಎಂದು ಹೆಸರು. ಇದು ವೀರಶೈವ ಸಾಹಿತ್ಯ, ಸಂಸ್ಕೃತಿ ಬಹಳ ಹುಲುಸಾಗಿ ಬೆಳೆದ ಪ್ರದೇಶ. ಅಲ್ಲಿ ಶಿಷ್ಯರ ಮನೆಯಲ್ಲಿ ಶಿವಾರ್ಚನೆಯೆಸಗಿ ಗುರುವರ್ಯರು ಪ್ರಸಾದ ಸ್ವೀಕರಿಸಿದರು. ಆ ಮನೆಯಲ್ಲಿ ಕಿರುಕುಳದೈವಗಳು ಪೂಜೆಗೊಳ್ಳುತ್ತಾ ಇದ್ದವು. ಈ ದುರ್ದೈವಗಳನ್ನು ಆರಾಧಿಸುತ್ತಾ ಅವುಗಳ ಎಂಜಲನ್ನು ತಿಂದು ನರಕಕ್ಕೆ ಹೋಗುವ ದುರ್ಬೋಧಕರಿಗೆ, ದುರಾಚಾರಿಗಳಿಗೆ ಪುಣ್ಯದ ಮಾರ್ಗವುಂಟೆ?

ಮ॥ ಮಧುಮಾಂಸಂಗಳ ಭಕ್ಷಿಪಂಗೆ ಭವಿಯಂ ತದ್ಬಂಧುವೆಂದನ್ನಮಂ
ಪದುಳಂ ಕೈಮಿಗಲುಂಬ ಪಾಪಿಗೆ ಪರದ್ರವ್ಯಂಗಳಂ ಕೊಂಬ ದು ।
ರ್ಮದ ದುಷ್ಕಾಮಿಗಮನ್ಯದೈವವ ಮಹಾ ನಂಬಿರ್ಪ ನೀಚರ್ಗೆ ಸಂ
ಮುದದೊಳ್ ಲಿಂಗಮನಿತ್ತವರ್ಗೆ ದೊರೆಕೊಳ್ಗುಂ ತಾಂ ವಿನಾಶಾದಿಗಳ್ ॥ (2–6)

ಮಧುಮಾಂಸಗಳನ್ನು ಸೇವಿಸುವವನಿಗೆ, ಭವಿಗಳನ್ನು ಬಂಧುಗಳನ್ನಾಗಿಸಿಕೊಂಡು ಅವರಲ್ಲಿ ಉಂಬುವವರಿಗೆ, ಪರದ್ರವ್ಯ ಕೊಂಬ ದುಷ್ಕಾಮಿಗೆ, ಅನ್ಯದೈವವನ್ನು ನಂಬಿದವರಿಗೆ ಲಿಂಗವನ್ನು ಕೊಟ್ಟವರಿಗೆ ದುರ್ಗತಿ ತಪ್ಪುವುದಿಲ್ಲ.

ಕಂ॥ ಗುರುವಂ ನರನೆಂಬಾತಗೆ
ಗುರುಪಂತಿಯನುಳಿದು ಪೆರರ ಮನೆಯೊಳ್ತಿಂಬಗೆ
ಗುರುವಾಕ್ಯ ಮೀರಿ ನಡೆಗೆ
ಹರಲಿಂಗವನಿತ್ತ ಗುರುವಿಗಕ್ಕುಂ ದೋಷಂ ॥ (2–7)

ವೀರಶೈವ ಸಿದ್ಧಾಂತವನ್ನು ಕವಿ ಚರ್ಚೆ ಮಾಡಿದ್ದಾನೆ. "ಗುರುವನ್ನು ನರನೆಂದು" ಕರೆದರೆ, ಗುರುವಿನ ಮಹಾಶಿವಪೂಜೆಯಲ್ಲಿ ಪಾದೋದಕ ಪ್ರಸಾದ, ಆನಂತರ ಕರುಣ ಪ್ರಸಾದವನ್ನು ಸೇವಿಸದವನು, ಗುರುಭಕ್ತಿ ಇಲ್ಲದ ಭವಿಗಳ ಮನೆಯಲ್ಲಿ ಊಟ

ಮಾಡುವವನು, ಗುರುವಾಕ್ಯ ಮೀರಿ ನಡೆಯುವವನು ದೋಷಿ, ಅವನಿಗಿಂತಲೂ ಅವನಿಗೆ ಹರಲಿಂಗ ನೀಡಿದ ಅರ್ಥಾತ್ ಇಷ್ಟಲಿಂಗ ದೀಕ್ಷೆ ನೀಡಿದ ಗುರುವಿಗೆ ದೋಷ ಬರುತ್ತದೆ. ದೇಶದ ಪ್ರಜೆಗಳು ಮಾಡಿದ ತಪ್ಪು ರಾಜನಿಗೆ, ರಾಜ ಮಾಡಿದ ಪಾಪ ಮಂತ್ರಿಗೆ, ಅಂಗನೆಯ ಪಾಪ ಪತಿಗೆ, ಶಿಷ್ಯನ ಪಾಪ ಗುರುವಿಗೆ ಲಭಿಸುತ್ತದೆ. ಆದ್ದರಿಂದ ಎಚ್ಚರವಾಗಿ ಇರಬೇಕು ಎಂದು ವೀರಣಾರ್‍ಯನು ಬೋಧಿಸಿದನು. ಇಷ್ಟ, ಪ್ರಾಣ, ಭಾವವೆಂಬ ಮೂರು ಲಿಂಗಗಳನ್ನು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಧರಿಸಿ ಆರಾಧಿಸಿ ಮುಕ್ತಿ ಪಡೆಯಬೇಕಲ್ಲದೆ, ಗಾವಿಲ ದೈವಗಳನ್ನು ಅರ್ಚಿಸಿ ಘೋರ ನರಕಕ್ಕೆ ಇಳಿಯಬಹುದೇ ಎಂದು ಪ್ರಶ್ನಿಸಿದನು. ಅದಕ್ಕೆ ಆ ಶಿಷ್ಯರು ಹೀಗೆಂದರು: ಈ ದೇವತೆಗಳ ಪೂಜೆ ಬಿಡಲು ಸಾಧ್ಯವಿಲ್ಲ. ಒಮ್ಮೆ ಬಿಟ್ಟರೆ ಇವು ನಮ್ಮ ಮೇಲೆ ದ್ವೇಷವಿಟ್ಟು ನಮ್ಮನ್ನು ಹಿಡಿದು ಕಣ್ಣು, ಕಾಲು, ಕೈ ಮುಂತಾದುವನ್ನು ಹೋಗಿಸುತ್ತವೆ ಮತ್ತು ಕಾಡುತ್ತವೆ ಎಂದರು. ಆಚಾರ್‍ಯನಿಗೆ ಕೋಪ ಬಂದು, 'ಗುರುವಾಕ್ಯವನ್ನು ಮೀರುವ ಶಿಷ್ಯರು ದುಃಖಕ್ಕೀಡಾಗುವರು' ಎಂದು ವೀರಣಾರ್‍ಯರು ಶಿಷ್ಯರನ್ನು ನಿರಾಕರಿಸಿದರು. ಅವರಲ್ಲಿದ್ದ ಮೂಢಭಾವನೆಗೆ ಜುಗುಪ್ಸೆಯಾಯಿತು. ಮನಸ್ಸಿನಲ್ಲಿ ವೈರಾಗ್ಯ ಮೂಡಿತು. ಆ ಶಿಷ್ಯರನ್ನು ಬಿಟ್ಟು ಮುಂದೆ ಅನೇಕ ಪಟ್ಟಣಗಳಲ್ಲಿ ಸಂಚರಿಸುತ್ತ ವೀರಣಾರ್‍ಯನು ಪದಿನಾಡನ್ನು ಸೇರಿದನು. ಬಹು ಸಂಪದ್ಭರಿತವಾದದ್ದು ಪದಿನಾಡು. ಅಲ್ಲಿ ಸೊಬಗುವೆತ್ತಿರುವ ಉಯ್ಯಂಬಳ್ಳಿಗೆ ಬಂದು ವೀರಣಾರ್‍ಯನು ತತ್ಪುರದ ದೊರೆ ಶಿವಪೂಜೆಯರಸನಿಗೆ ಕಾಣಿಸಿಕೊಂಡು ಹೀಗೆ ಆಶೀರ್ವದಿಸಿದನು: "ಎಲೈ ಭೂವರನೆ, ನೀನು ಪ್ರಜೆಗಳಿಗೆ ದೇವನಾಗು. ಬುಧ ಸಂತತಿಗೆ ಪಾಲಕನಾಗು. ಪಾಪದೂರನಾಗು, ಪರಶಿವಪೂಜೆಯನ್ನು ಭಕ್ತಿಯಿಂದ ಮಾಡು". ರಾಜನಿಗೆ ಆನಂದವಾಯಿತು. ಆತ ಗುರುವಿಗೆ ವಂದಿಸಿ ತನ್ನ ಅರಮನೆಗೆ ಬರಮಾಡಿಕೊಂಡು ಗದ್ದುಗೆಯನ್ನು ಮಾಡಿ ಅಲ್ಲಿ ಗುರುವನ್ನು ಮೂರ್ತಗೊಳಿಸಿ ಉಪಚರಿಸಿದನು. ಅರಸನು ವೀರಣಾರ್‍ಯನನ್ನು ಕುರಿತು "ಯಾವ ದೇಶದಿಂದ ಆಗಮಿಸಿದಿರಿ? ಯಾವ ಯಾವ ಪಟ್ಟಣಗಳನ್ನು ಸುತ್ತಿ ಬಂದಿರಿ? ಇಲ್ಲಿಗೆ ಆಗಮಿಸಲು ಕಾರಣವೇನು?" ಎಂದು ಭಯಭಕ್ತಿಯಿಂದ ಬಿನ್ನಹಂಗೈಯಲು ಗುರುವು ಎಲ್ಲ ವಿಚಾರವನ್ನೂ ಶೃತಪಡಿಸಿದನು. ದೇಶಾಂತರದ ಶಿಷ್ಯರನ್ನೆಲ್ಲಾ ಬಿಟ್ಟು ನಿಮ್ಮ ಕೀರ್ತಿಯನ್ನು ಕೇಳಿ ಇಲ್ಲಿಗೆ ಬಂದೆವು, ಎಂದೆನಲು ಮಹೀಪತಿಗೆ ಆನಂದವಾಯಿತು.

ವ॥ ಇಂತೆಂದು ವಿಸ್ತರಿಸಿ ವಿದ್ಯಾಪ್ರವೀಣಂ ಗಾನದ ಗುರುವಂ ಗಮಕಿಗ
ಳರಸಂ ಸರಸ ಸಂಗೀತರಸಾಂಬೋಧಿಪೂರ್ಣಚಂದ್ರಮಂ
ವೀರಣಾರಾಧ್ಯದೇವಂ ವಿವಿಧ ವಿನೋದರಾಗಂಗಳಾನಾಳವೆನೆದನದೆಂತೆನೆ ॥

ಉ॥ ಸಾಳಗ ನಾಟಿ ನಾಟ ಸಲೆ ಭೈರವಿ ಪಾಹಡಿ ತೋಡಿ ಭೂ
ಪಾಳಿ ವರಾಳಿಯಾ ಹರಿಮುಖದಿ ಬಿಲಾಹರಿ ಮೇಘರಂಜಿಪ ।
ದ್ಭೌಳಿ ಸಮಸ್ತರಾಗವ ಬಜಾವಣೆ ಕೈಮಿಗೆ ಪಾಡಲಿ
ದ್ದಾಲಿಸಿ ಭೂತಮುಖ್ಯ ಬುಧಸಂತತಿಯಚ್ಚರಿಯಾಂತು ಕೀರ್ತಿಸಲ್ ॥ (2–18)

ವಿದ್ಯಾಪ್ರವೀಣನೂ, ಗಾನದ ಗುರುವೂ, ಗಮಕಿಗಳರಸನೂ, ಸರಸರಸಾಂಭೋನಿಧಿ ಪೂರ್ಣಚಂದ್ರನೂ ಆದ ವೀರಣಾರಾಧ್ಯ ದೇವನು ರಾಜಸಭೆಯಲ್ಲಿ ವಿವಿಧ ರಾಗಗಳನ್ನು ವಿನೋದವಾಗಿ ಹಾಡತೊಡಗಿದನು. ಸಾಳಗ, ನಾಟಿ, ನಾಟ, ಭೈರವಿ, ಪಾಹಡಿ, ತೋಡಿ, ಭೂಪಾಳಿ, ವರಾಳಿ, ಮುಖಾರಿ, ಬಿಲಹರಿ, ಮೇಘರಂಜಿನಿ ಸದ್ಬಾಳಿ ಮುಂತಾದ ರಾಗಗಳಲ್ಲಿ ಬಜಾವಣೆ ಕೈಮಿಗೆ ಪಾಡಲು ಪದಿನಾಡರಾಜ ಶಿವಪೂಜೆಯರಸ ಮತ್ತು ಆಸ್ಥಾನದ ವಿದ್ವಜ್ಜನರು ಕೇಳಿ ಸಂತೋಷದಿಂದ ಅದ್ಭುತವಾದ ಗಾಯನವೆಂದು ಕೀರ್ತಿಸಿದರು:

ಕಂ॥ ಗಮಕಿ ತಲೆರನ್ನ ವಿದ್ವ
ತ್ಸಮುದಯ ಪಂಕೇಜಮಿತ್ರ ಸದ್ಗುಣಗಾತ್ರಾ ।
ನಿಮಗಾರು ಸಾಟಿಯೆನುತಂ
ಕ್ಷಮೆಯಂ ಶಿವಪೂಜೆಯರಸನುತ್ಸಹವಾಂತಂ ॥ (2–19)

ವ॥ ಇಂತು ಸಂತಸಂಪಟ್ಟು ಸಮಸ್ತ ವಸ್ತ್ರಾಭರಣಂಗಳ ಕೊಟ್ಟು
ಸತ್ಕರಿಸಿ ಮತ್ತವಿಂತೆಂದಂ

ಗಮಕಿ ಶಿರೋಮಣಿ "ವಿದ್ವತ್ಸಮುದಯ ಪಂಕೇಜಮಿತ್ರ" ಎಂದು ಮುಂತಾಗಿ ಶಿವಪೂಜೆಯರಸನು ಗುರುವನ್ನು ಸ್ತುತಿಸಿ ಉತ್ಸಹವಾಂತು ಸಮಸ್ತವಸ್ತ್ರಾಭರಣಂಗಳಂ ಕೊಟ್ಟು ಸತ್ಕರಿಸಿದನು.

"ನಿಮ್ಮಂತಹ ವಿದ್ಯಾವಂತರನ್ನು ನಾವು ಕಂಡಿಲ್ಲ. ನೀವು ಕೇಳಿದುದೆಲ್ಲವನ್ನು ಸಮರ್ಪಿಸಿದೆವು. ನೀವು ಇಲ್ಲಿಯೇ ನೆಲೆಸಬೇಕು" ಎಂದು ಅರಸನು ಕೈಮುಗಿದು ಬೇಡಿದನು. ವೀರಣಾರ್ಯನು ಒಳಿತೆಂದು ಅರಸನ ನಿರ್ಮಲ ಭಕ್ತಿಗೆ ಒಪ್ಪಿ ಆ ಪೊಳಲೊಳಗೆ ಹಲ ಕೆಲವು ದಿನ ಸಂತಸವಿರ್ದನು. ಹೀಗಿರಲು ವೀರಣಾರ್ಯನಿಗೆ ಓರ್ವ ಕನ್ಯೆಯನ್ನು ಹುಡುಕಿ ವಿವಾಹ ಮಾಡಬೇಕು ಎಂದು ಒಂದು ದಿನ ಅರಸನಿಗೆ ಅನ್ನಿಸಿತು. ಸಚಿವನೂ ಒಪ್ಪಿದನು. ಅಲ್ಲಿಯ ಗುರುಮಠದಲ್ಲಿರುವ ಓರ್ವ ಕನ್ಯೆಯನ್ನು ವೀರಣಾರ್ಯನಿಗೆ ಕೊಡಬೇಕೆಂದು ಕೇಳಿಸಲು ಆ ಮಠದವರು ಹೀಗೆಂದರು; "ಅವರ ಗುರುವಂಶ ನಮಗೆ ತಿಳಿಯದು. ಅಜ್ಞಾತ ಕುಲಗೋತ್ರದವರಿಗೆ ನಮ್ಮ ಪುತ್ರಿಯನ್ನು ಹೇಗೆ ಕೊಡೋಣ?" ಎಂದರು! ಅದನ್ನು ಕೇಳಿ ವೀರಣಾರಾಧ್ಯನಿಗೆ ಕೋಪ ಉಕ್ಕಿ ಬಂತು. ನೃಪನ ಓಲಗ ನಡೆದಿತ್ತು. ವೀರಣಾರಾಧ್ಯನು ಅಲ್ಲಿ ಸಂತಾಪದಿಂದ ಮೂರ್ತಗೊಂಡಿದ್ದನು. ರಾಜನನ್ನು ಕುರಿತು "ನೀವು ಹೆಣ್ಣು ಬೇಡಿದಿರಿ. ಆದರೆ ಅವರು ನಾವು ಮಠಸ್ಥರಲ್ಲವೆಂದು ಅಪಮಾನ ಮಾಡಿದ್ದಾರೆ. ನಾವು ಆರಾಧ್ಯರಲ್ಲವೆಂದು ಹಾಸ್ಯ ಮಾಡಿದರಂತೆ. ಇಂತಹ ಕುತ್ಸಿತವನ್ನು ನಾವು ಕೇಳಲಾರೆವು. ನಾವು ಆರಾಧ್ಯರಲ್ಲಿದ್ದ ಪಕ್ಷದಲ್ಲಿ ನನ್ನ ಶಪಥವನ್ನು ಕೇಳಿರಿ" ಎಂದು ಸಭಾಮಧ್ಯದಲ್ಲಿ ಘರ್ಜಿಸಿದನು. ರಾಜ ದಿಗ್ಭ್ರಾಂತನಾದನು. "ಇದೆಲ್ಲಿಯ ಪಾತಕ? ಇದನ್ನು ಕುರುಹು ಮಾಡಿಕೊಡುವವರಾರು?" ಎಂದು ಅರಸನು ಸಭೆಯಲ್ಲಿ ವಿನಂತಿಸಿದನು. ಅಲ್ಲಿಂದ ಮಠದ ಒಡೆಯರು "ಈ

ಮಾತನ್ನು ಕೇಳಿ ನಾವು ಆನಂದದಿಂದ ಕನ್ಯೆ ಕೊಡುವೆವು" ಎಂದು ಒಡೆಯರು ಹೇಳಿದರು. "ನನ್ನ ಜೊತೆಗೆ ನಿಮ್ಮ ಪ್ರತಿನಿಧಿಗಳನ್ನು ಕಳುಹಿಸಿರಿ. ನಮ್ಮ ಪುರವರ್ಗ ಶಿಷ್ಯರನ್ನು ತೋರುತ್ತೇವೆ" ಎಂದು ವೀರಣಾರ್ಯನು ಸಭೆ ಬೆರಗಾಗಲ್ ನುಡಿದನು. ರಾಜನ ಆಜ್ಞೆಯಂತೆ ನೃಪನ ಪ್ರತಿನಿಧಿಗಳು ಅಪ್ಪೆಯಕೆರೆಗೆ ಹೋಗಿ ಬಂದರು. ಅವರು ಅಲ್ಲಿಯ ಲಿಂಗಾಂಕಿತವಾದ ಭೂಮಿ, ಮಠ, ಶಿಷ್ಯಸ್ತೋಮ ಮತ್ತು ಅಲ್ಲಿ ಅವರಿಗಿರುವ ಗೌರವಾದಿಗಳನ್ನು ಕಂಡು ಚೋದ್ಯಗೊಂಡು ಹಿಂದಿರುಗಿ ಅರಸನಿಗೆ ಅರಿಕೆ ಮಾಡಿದರು. ಎಲ್ಲರೂ ಆನಂದಪಟ್ಟರು. ಮಠದೊಡೆಯರು ಭಯಭಕ್ತಿಯಿಂದ ಅಪರಾಧವಾಯಿತು ಎಂದು ಗುರುವಿನಂಘ್ರಿಗೆರಗಿದರು. ರಾಜನು ಮಠಸ್ಥರ ಕನ್ಯೆ ನಂಜಾಂಬಿಕೆ ಎಂಬ ವಧುವನ್ನು ವೀರಣಾರ್ಯನಿಗೆ ವಿವಾಹ ಮಾಡಿಸಿದನು. ಗುರು ಆನಂದದಿಂದಿದ್ದನು. ಮುಂದೆ ಅವರಿಗೆ ಪುತ್ರೋತ್ಸವವಾಯಿತು. ಪುತ್ರನಿಗೆ ಚನ್ನವೀರದೇವ ಎಂದು ಹೆಸರಿಟ್ಟನು. ಅಲ್ಲಿ ಕೆಲವು ದಿನ ಆಚಾರ್ಯನು ಸಂತೋಷದಿಂದಿದ್ದನು. ರಾಜನ ಭಕ್ತಿಯನ್ನು ಕೈಗೊಂಡು ಗುರುವು ಭಕ್ತರಿಂದ ವಂದಿಸಿಕೊಳ್ಳುತ್ತಾ ಬೆಂಗಳೂರಿಗೆ ಬಂದರು.

ಕಂ॥ ಗಾಡಿಯಿಂದ ಪುರವ ನೆರೆ
ನೋಡಿ ವಿಲಾಸದೊಳು ನಿತ್ಯ ಪಾಲಿಪ ಕೆಂಪೆಯ ।
ಗೌಡಂ ಕಂಡಾ ಗುರುವಿಗೆ
ಮಾಡಿದ ವಂದನೆಯನೊಲಿದು ಮಮತೆಗಳಿಂದಂ ॥ (2–37)

ಅಂದಿನ ದಿನಮಾನದಲ್ಲಿ ಬೆಂಗಳೂರನ್ನು ಪಾಲಿಸುತ್ತಾ ಇದ್ದ ಕೆಂಪೇಗೌಡನು ಗುರುವಿಗೆ ವಂದಿಸಿ ಸ್ವಾಗತಿಸಿದನು.

ವ॥ ಆ ಕೆಂಪೆಯಗೌಡನತಿ ಭಕ್ತಿಯಿಂದಂ ತಾನೇನುತಿರ್ದಂ ಬೋಧಕ ।
ನಿಮ್ಮ ಪಾದಾಂಬುಜ ದರ್ಶನದಿಂದಂ ನಿರ್ಮಳನಾದೆನು ನಲ್ಮೆಗಳಿಂದಂ ।
ನಿಮ್ಮ ಸಮೀಪದಿ ನೀವಿಹುದೆಂದುಂ
ಗಮ್ಮನೆ ಭೂಪತಿಯಾಡಿದನೊಲ್ದುಂ ॥ 38 ॥

"ನಿಮ್ಮ ಪಾದದರ್ಶನದಿಂದ ಪಾವನನಾದೆನು. ನಮ್ಮ ಸಮೀಪದಲ್ಲಿ ನೀವಿರಬೇಕು" ಎಂದು ಬಿನ್ನೈಸಿದನು.

ಮ॥ ಒಲಿದಾ ಕೆಂಪೆಯಗೌಡಭೂಪತಿ ಮಹಾಸದ್ಭಕ್ತಿಯಿಂದೊಳುಬ್ಬುತಾ
ನಿಳಯಂ ಹಿತ್ತಲು ಭಿತ್ತಿಯಂಗಳ ಮಹಾಕೂಪಂಗಳಂ ನಿರ್ಮಿಸು ।
ತ್ತೊಲವಿಂದೊಪ್ಪಿಸಿಕೊಟ್ಟು ನೀವಿಹುದೆನುತ್ತಾಚಾರ್ಯಗಂ ನೇಮಿಸಲ್
ವಳಿತೆಂದ ಗೃಹದಲ್ಲಿಯೊಪ್ಪಿದ ಸದಾ ಶ್ರೀವೀರಣಾರಾಧ್ಯಕಂ ॥ (2–39)

ಕೆಂಪೇಗೌಡನು ಗುರುವಿಗೆ ಭಕ್ತಿಯಿಂದ ನಿಲಯ, ಮಠ, ಹಿತ್ತಲು, ಬಿತ್ತಲು (ಜಮೀನು), ಬಾವಿ ಮುಂತಾದುವನ್ನು ನಿರ್ಮಿಸಿಕೊಟ್ಟು ನೀವು ಇಲ್ಲಿಯೇ ಇರಬೇಕೆಂದು ಬೇಡಿದನು. ವೀರಣಾರ್ಯನು ಅದಕ್ಕೆ ಒಪ್ಪಿದನು.

ವೀರಣಾರ್ಯನು ಅಲ್ಲಿ ಕೆಲವು ದಿನವಿರುತ್ತಿರಲು ಮಗ ಚನ್ನವೀರಣಾರ್ಯನು ಯುಕ್ತ ವಯಸ್ಕನಾದನು. ಕೆಂಪೇಗೌಡನ ರಾಣಿಗೆ ಗುರುವಿನಲ್ಲಿ ಅತ್ಯಂತ ಭಕ್ತಿ. ವೀರಣಾರ್ಯನು ಮಗನ ಮದುವೆಯ ವಿಷಯವನ್ನು ರಾಣಿಗೆ ಶೃತಪಡಿಸಿದನು. ಗೌಡ ದಂಪತಿಗಳು ಆನಂದಿಸಿದರು. ಅವರ ನೆರವಿನಿಂದ ವೀರಣಾರ್ಯನು ಅನುರೂಪಳಾದ ಪ್ರೌಢ ಬಸವಾರ್ಯರ ಪುತ್ರಿ ‘ಗಿರಿಜಾಂಬಿಕಾ’ ಎಂಬ ಕನ್ಯೆಯನ್ನು ಗೊತ್ತುಮಾಡಿ ಚನ್ನವೀರದೇವನಿಗೆ ವೈಭವದಿಂದ ಮದುವೆ ಮಾಡಿದನು.

ವ॥ ಇಂತು ಮಾಂಗಲ್ಯವಾಗಿ ಮನೋನುರಾಗದಿಂದ ಚನವೀರಾಚಾರ್ಯಕಂ
ಸುಖಸಂಕಥಾವಿನೋದದಿಂದಿರುತ್ತಿರ್ದೊಂದಾನೊಂದು ದಿವಸದಲ್ಲಿ
ಬೆಂಗಳೂರ ಮಾಂಗಲ್ಯವೀಥಿಯೊಳು ಬೆಡಗಿನಿಂದೈತರುತ್ತಮಿರೆ
ಪಾರ್ವತೀಕಾಂತಂ ಪಿಂಗಡೆಯೊಳು ಬಂದು ನುಡಿದವದೆಂತನೆ–

ಮ॥ ಶಿಖಿನೇತ್ರಂ ಸಲೆ ಜಂಗಮಾಕೃತಿಯ ತಾಳ್ದೈತಂದೆಲೇ ಚೆನ್ನವೀ
ರಕ ನೀಂ ಕೇಳು ಸದಾಂಬುಶೇಷನ ಸದಾಕಾಲಂಗಳೊಳಿನ್ನು ಸಾ ।
ಧಕವಂ ಮಾಡು ಸಮಸ್ತಭಕ್ತಸದನಕ್ಕಂ ಪೋಗಿ ಸದ್ಭಕ್ತಿಕಾ
ಯಕಮಂ ಮಾಳ್ಪುದೆನುತ್ತ ಪೇಳ್ದು ನಡೆದಂ ಕಾರುಣ್ಯಮಿನ್ನೆಂತುಟೋ॥ (2–43)

ಚೆನ್ನವೀರಣಾರ್ಯನು ಬೆಂಗಳೂರಿನಲ್ಲಿ ಸುಖಸಂಕಥಾವಿನೋದದಿಂದ ಇರುವಾಗ ಒಂದು ದಿನ ಆತ ಮಾಂಗಲ್ಯಬೀದಿಯಲ್ಲಿ ಬೆಡಗಿನಿಂದ ಬರುತ್ತಿರುವಾಗ ಹಿಂದುಗಡೆಯಿಂದ ಪಾರ್ವತೀಕಾಂತನು ಜಂಗಮಾಕೃತಿಯಿಂದ ಕಾಣಿಸಿಕೊಂಡನು. “ಎಲೆ ಚನ್ನವೀರ, ಕೇಳು. ನೀನು ಸದಾಚಾರದಿಂದಿದ್ದು ಎಲ್ಲಾ ಭಕ್ತರ ಮನೆಗೈದಿ ಭಕ್ತಿ ಕಾಯಕವಂ ಮಾಡು” ಎಂದು ಹೇಳಿ ಅಂತರ್ಧಾನನಾದನು.

ಬೆಂಗಳೂರಿನಲ್ಲಿ ಈಗ “ಮಾಂಗಲ್ಯಬೀದಿ” ಯಾವುದು? ಖಂಡಿತ ಗುರುತಿಸಲು ಸಾಧ್ಯವಿಲ್ಲ. ಮಾಂಗಲ್ಯಬೀದಿ ಎಂದರೆ ದೇವದಾಸಿಯರು ವಾಸ ಮಾಡುತ್ತಾ ಇದ್ದ ಬೀದಿ ಆಗಿರಬಹುದು. ಹಿಂದಿನ ಕಾಲದಲ್ಲಿ ಮದುವೆ ಗೊತ್ತಾದಾಗ ಮಂಗಲವಾದ್ಯದ ಜೊತೆ ಹೋಗಿ ಸುಮಂಗಲಿಯರು, ನಿತ್ಯಮುತ್ತೈದೆ ಎಂದು ಕರೆಯುತ್ತಿದ್ದ ಗೆಜ್ಜೆಪೂಜೆಯಾದ ದೇವದಾಸಿಗೆ, ಮಂಗಲದ್ರವ್ಯಗಳು, ಅಚ್ಚಂದಿಕೊಟ್ಟು ಆಕೆಯ ಹಸ್ತದಿಂದ ಕರಿಮಣಿ, ಮಾಂಗಲ್ಯ ಪೋಣಿಸಿಕೊಂಡು ಆಕೆಯಿಂದ ಆ ಮಾಂಗಲ್ಯಕ್ಕೆ ಪೂಜೆ ಮಾಡಿಸಿ ತರುತ್ತಾ ಇದ್ದ ಸಂಪ್ರದಾಯವಿತ್ತು. ಇಂತಹ ಮಹಿಳೆ ಯರು ವಾಸ ಮಾಡುತ್ತಾ ಇದ್ದ ಬೀದಿಗೆ ಮಾಂಗಲ್ಯಬೀದಿ ಎಂದು ಕರೆದಿರಬಹುದು. ಕಾಲಗರ್ಭದಲ್ಲಿ ಅಡಗಿರುವ ಈ ಬೀದಿಯನ್ನು ಸಂಶೋಧನೆ ಮಾಡಬೇಕಾಗಿದೆ.

ಸಾಕ್ಷಾತ್ ಶಿವನೇ ಎಂದು ಚನ್ನವೀರದೇವನಿಗೆ ಅರಿವಾಯಿತು. ಕೌತುಕಂಬಟ್ಟನು, ಈ ವೃತ್ತಾಂತವನ್ನು ಚನ್ನವೀರದೇವನು ತಂದೆ ವೀರಣಾರಾಧ್ಯನಿಗೆ ಅರಿಕೆ ಮಾಡಿದನು. ಈ ವಿಷಯ ತಿಳಿದು ವೀರಣಾರ್ಯನು ಆನಂದಪಟ್ಟನು. ಅಂದಿನಿಂದ ತಂದೆಮಕ್ಕಳೀರ್ವರು ಶಿವನ ರೂಪದಂತೆ ಶಿವಭಕ್ತರ ಮನೆಗಳಲ್ಲಿ ಕಾಯಕವ ಮಾಡಲುದ್ದೇಶಿಸಿದರು.

ಚೆನ್ನವೀರಾಚಾರ್ಯನು ಭಸಿತೋದ್ಧೂಳನ ಮಾಡಿಕೊಂಡು ರುದ್ರಾಕ್ಷಿ ಧರಿಸಿ ಸದ್ವಸ್ತ್ರಗಳನ್ನು ಧರಿಸಿ ದಂಡಿಗೆಯನಾಂತು ಮೀಟಿ ಪಾಡುತ್ತಿರ್ದನು.

ಉ॥ ದೇವ ಹರೀಶ ದೇವ ಗುರುಶಂಕರದೇವಗುಹೇಶ್ವರವರಾರ್ಯಕಾ
ದೇವಪದಾರ್ಚನಾ ನಿಜಗುಣಾಹ್ವಯ ವೀರಣ ನಾಗಿದೇವ ಮ
ದ್ದೇವ ಪುರಾತನೋಕ್ತಿ ವಚನಂಗಳನೋದುತ ವೀರಣಾರ್ಯ ಕಂ
ದೇವನು ಹೇಳ ಭಕ್ತಜನರಂ ಮಿಗೆ ಕೇಳಿಪನುತ್ಸವಂಗಳೊಳ್ ॥ (2–48)

ಹರಿಹರ, ಶಂಕರದೇವ, ಗುಹೇಶ್ವರ, ನಿಜಗುಣ, ವೀರಣ್ಣ, ನಾಗಿದೇವ, ಮಹಾದೇವ ಮೊದಲಾದ ಪುರಾತನರ ಉಕ್ತಿಗಳನ್ನು ಭಕ್ತಿಯಿಂದ ಹಾಡಿ ಭಕ್ತರನ್ನು ಸಂತೋಷಪಡಿಸುತ್ತಾ ಇದ್ದನು. ಹರಿಹರ ನಮಗೆ ಚೆನ್ನಾಗಿ ಪರಿಚಯ ಇರುವ ಕವಿ. ಶಂಕರದೇವನು, ಶತಕ, ರಗಳೆ, ದಂಡಕ, ಸ್ವರವಚನಗಳನ್ನು ಬರೆದ ಪ್ರತಿಭಾನ್ವಿತ ಕವಿ. ಗುಹೇಶ್ವರ ಎಂದರೆ ಅಲ್ಲಮಪ್ರಭುವಿನ ವಚನ, ಸ್ವರವಚನಗಳನ್ನು ಹಾಡುತ್ತಾ ಇದ್ದುದರಿಂದ ಕವಿ ಇಲ್ಲಿ ಅಂಕಿತವನ್ನೇ ಹೇಳಿದ್ದಾನೆ. ನಿಜಗುಣ ಶಿವಯೋಗಿಗಳ ಸಾಹಿತ್ಯ, ಕರಸ್ಥಲದ ವೀರಣ್ಣ, ಕರಸ್ಥಲದ ನಾಗಿದೇವರ ಸಾಹಿತ್ಯ, ಮಹಾದೇವನ ಪುರಾತನೋಕ್ತಿ ಯಾವುದು ಎಂಬುದನ್ನು ಸಂಶೋಧನೆ ಮಾಡಬೇಕಾಗಿದೆ.

ಕಂ॥ ಅಷ್ಟಾವರಣಮಹತ್ವಂ
ನಿಷ್ಠಶಿವಾಚಾರ ಲಿಂಗಪೂಜಾವಿಧಿಯಂ ।
ಇಷ್ಟಲಿಂಗಾರ್ಪಿತಂಗಳ
ಶ್ರೇಷ್ಠ ಚನ್ನವೀರವರ್ಯ ತಿಳುಪುತ್ತಿರ್ದಂ ॥

ಚೆನ್ನವೀರಾಚಾರ್ಯ ಭಕ್ತಜನಕೆ ಅಷ್ಟಾವರಣ ಮಹತ್ವವನ್ನು, ಅತ್ಯಂತ ನಿಷ್ಠೆಯಿಂದ ಮಾಡುವ "ಶಿವಾಚಾರ ಲಿಂಗ ಪೂಜಾವಿಧಿ"ಯನ್ನು ಇಷ್ಟಲಿಂಗಾರ್ಪಿತಂಗಳು ಅಂದರೆ ಶಿವಪೂಜೆಯ ನಂತರ ನಡೆಯುವ ಕ್ರಿಯೆ "ಪಾದೋದಕ ಪ್ರಸಾದ" ಗುರುವಿನ ಪಾದಪೂಜೆಯಿಂದ ಪಡೆದು ಇಷ್ಟಲಿಂಗಾರ್ಪಿತ ಮಾಡಿದ ಮೇಲೆಯೇ ಭಕ್ತಜನರು ಸೇವಿಸುವುದು. ಈ ಎಲ್ಲಾ ಕ್ರಿಯೆಗಳನ್ನು ಕ್ರಮವಾಗಿ ತಿಳಿಸಿಕೊಡುತಿರ್ದನು.

ತಂದೆ ವೀರಣಾರ್ಯನು ಕೈಲಾಸವಾಸಿಯಾದನು. ಚನ್ನವೀರಣಾರ್ಯನು ಈಶ ಭಕ್ತರಲ್ಲಿ ಕಾಯಕವ ಮಾಡುತ್ತಿದ್ದನು. ಭಕ್ತರು ಗುರುವಿಗೆ ನಾನಾ ವಿಧವಾದ ಫಲ, ಪುಷ್ಪ, ದವಸ, ಧಾನ್ಯಗಳನ್ನು ಭಕ್ತಿಯಿಂದ ಕಾಣಿಕೆ ನೀಡಲು ಅದನ್ನು ತಂದು ಶಿವಾರ್ಪಣಂಗೈದು ಗುರುಲಿಂಗಜಂಗಮಕ್ಕೆ ದಾಸೋಹವೆಸಗುತ್ತಿದ್ದನು. ಮುಂದೆ ಚನ್ನವೀರಣಾರ್ಯನು ಬೆಂಗಳೂರು ಕೆಂಪೇಗೌಡನಿಂದ ಬೀಳ್ಕೊಂಡು ಮೈಸೂರನಾಳ್ವ ರಾಜಮಹೇಂದ್ರನ ಪುರವಂ ಪೊಕ್ಕು ಆ ದೇಶಮಧ್ಯದ ಹರಿಣಪುರ ಅಥವಾ ತೃಣಪುರ ಎಂದು ಉಭಯನಾಮದಿಂದ ಗುರುತಿಸಲ್ಪಡುವ ಹುಲ್ಲಹಳ್ಳಿ ಎಂಬ ಪೊಳಲ್ಗೆ ಆಗಮಿಸಿದನು.

ಶಾ॥ ಈಶಾಚಾರವಿಚಾರಣಂ ವಿಮಳಪಾದಾಂಬುಪ್ರಸಾದಾನ್ವಿತಂ
ಆಶಾಪಾಶವಿನಾಶಪುಣ್ಯಚರಿತಂ ಚಾತುರ್ಯವಿದ್ಯಾಧಿಕಂ
ದೋಷಾಂಧಾರ್ಯಮಕಾಮಕಾಲರಹಿತಂ ಕಾರುಣ್ಯರತ್ನಾಕರಂ
ಭಾಷಾಭೂಷಣ ಭಾಪು ಪಾಹಿ ಸತತಂ ಶ್ರೀಚನ್ನವೀರಾರ್ಯಕಂ ॥ 1 ॥

ಶಿವಾಚಾರವನ್ನು ವಿಚಾರ ಮಾಡುವಂತಹವನು, ಪ್ರತಿನಿತ್ಯವೂ ಗುರುಪಾದೋದಕ ಪ್ರಸಾದ ಸೇವನೆ ಮಾಡುವಂತಹವನು, ಆಶೆಯನ್ನು ನಾಶ ಮಾಡಿದವನು, ಪುಣ್ಯಚರಿತನು ಚಾತುರ್ಯವಿದ್ಯಾಧಿಕಂ, ಕಾರುಣ್ಯರತ್ನಾಕರಂ, ಭಾಷಾಭೂಷಣ ಭಾಪು ಪಾಹಿ ಎಂದು ಚನ್ನವೀರಣಾರ್ಯ ಗುರುವನ್ನು ಸ್ತೋತ್ರ ಮಾಡಿದ್ದಾನೆ.

ಹುಲ್ಲಹಳ್ಳಿ ಅರ್ಥಾತ್ ತೃಣಪುರದ ಅಧೀಶ್ವರ ಬಸವೇಂದ್ರನ ಸುಕುಮಾರ 'ವೀರಮಹೇಂದ್ರ' ಅರಸನು ಚನ್ನವೀರಣಾರ್ಯರನ್ನು ಭಕ್ತಿಯಿಂದ ಸ್ವಾಗತಿಸಿದನು. ಅರಸನ ಬಿನ್ನಪಮಂ ಕೈಗೊಂಡು ಸಮೀಪದಲ್ಲಿ ಮಂಡಿಸಿ ಚನ್ನವೀರಣಾರ್ಯನು ಮನೋನುರಾಗದಿಂದ ಹಾಡುತ್ತಿದ್ದನು. ದಂಡಿಗೆಯಂ ನುಡಿಸುತ್ತಾ ಇಂತು ಪುರಾತರ ಕೀರ್ತನ ಮಾಡಲು ಅದ ಕೇಳಿ ವೀರಮಹೇಂದ್ರನು ಸಂತೋಷಪಟ್ಟನು. ಚನ್ನವೀರಾರ್ಯನ ಪೂರ್ವವೃತ್ತಾಂತಗಳನ್ನೆಲ್ಲ ಕೇಳಿ ಹೀಗೆಂದನು: ಸ್ವಾಮಿ, ತಾವು ನಮ್ಮ ಬಳಿ ಬರಲು ಕಾರಣವೇನು? ವೀರಮಹೇಂದ್ರನಿಗೆ ಗುರು ಹೇಳಿದನು "ನಾವು ನಿಮ್ಮಲ್ಲಿಯೆ ಇರಬೇಕೆಂದಿರುವೆವು." ಅರಸನಿಗೆ ಸಂತೋಷವಾಯಿತು. ಚೆನ್ನವೀರಣಾರ್ಯನಿಗೆ ಲಿಂಗಾಂಕ ಭೂಭಾಗವನ್ನು ದಾನ ಮಾಡಿದನು. ಆ ಭುಮಿಯಲ್ಲಿ ಮಠ ಕಟ್ಟಬೇಕೆಂದು ಚನ್ನವೀರಣಾರ್ಯನು ಯೋಚಿಸಿದನು. ಒಂದು ದಿನ ಗುರುಪುರದ ಶಂಭುಲಿಂಗೇಗೌಡನು ಆಳುತ್ತಿದ್ದ ಕೊಡನಾಲತ್ತೂರಿಗೆ ಆಗಮಿಸಿದನು. ಅಲ್ಲಿನ ಗುರುಪುರದ ವನದ ವರ್ಣನೆ ಮಾಡಿದ್ದಾನೆ. ಆ ವನದಲ್ಲಿ ಇರುವ ಕದಿರ, ಹೊಂಗೆ, ಹುಣಸೆ, ಹರೀತಕಿ ಅರ್ಥಾತ್ ಅಳಲೆಕಾಯಿ, ಕಕ್ಕೆ, ಬಿಕ್ಕೆ, ತೂಬರಂ, ಬಿದಿರು, ದಾಳ, ಹಾಲೆ, ಹಲಸು, ಅರ್ಜುನ ಅರ್ಥಾತ್ ಮತ್ತಿ, ಬಾಗೆ, ಬಿಲ್ವ, ಬದರ, ಕಪಿತ್ಥ, ಹತ್ತಿ, ತಿಲಕೋನ್ನ, ತಂಡ, ಸುಗಂಧನೆಲ್ಲಿ, ತನಿಕಿರಲು, ತಾರೆ ಮುಂತಾದ ಮರಗಳು ಇದ್ದವು ಎಂದು ಮರಗಳ ಒಂದು ಪಟ್ಟಿಯನ್ನೇ ಕೊಟ್ಟಿದ್ದಾನೆ. ಆ ವನದಲ್ಲಿ ಇದ್ದ ಪ್ರಾಣಿಗಳ ಒಂದು ಪಟ್ಟಿಯನ್ನೂ ನೀಡಿದ್ದಾನೆ. ದಟ್ಟಡವಿಯನ್ನು ದಾಟಿ ಗುರು ಪ್ರಣವ ಸಹಿತ ಪಂಚಾಕ್ಷರಿಯನ್ನು ಜಪಿಸುತ್ತ ಕೊಡನಾಲತ್ತೂರಿಗೆ ಬಂದನು. ಗೌಡನಿಂದ ನಮಸ್ಕಾರಮಂ ಕೈಗೊಂಡು ಅವರ ಮನೆಯಲ್ಲಿ ಲಿಂಗಾರ್ಚನೆ ಮಾಡಿ ಚರಪಾದಾಂಬು ಅರ್ಥಾತ್ ಜಂಗಮ ಪಾದೋದಕ ಪ್ರಸಾದಮಂ ಸ್ವೀಕರಿಸಿ "ಸಮಸ್ತಪುರಾತನ ವಚನಂಗಳ ರಚನೆಯಂ ಪಾಡುತ್ತಿರಲು" ಶಂಭುಲಿಂಗೇಗೌಡ ಅದನ್ನು ಕೇಳಿ ಮೆಚ್ಚಿಕೊಂಡನು. "ನಮಗೆ ಬುದ್ಧಿ ಕಲಿಸಬೇಕು, ತಮ್ಮ ಅಭೀಷ್ಟವನ್ನು ಹೇಳಬೇಕು" ಎಂದು ಶಂಭುಲಿಂಗೇಗೌಡನು ಪ್ರಾರ್ಥಿಸಿದನು. ದಾನವಾಗಿ ಪಡೆದ ಭೂಮಿಗೆ "ರುದ್ರಭೂಮಿ" ಎಂದು ಕವಿ ಕರೆದಿದ್ದಾನೆ. ನಮಗೆ ರುದ್ರಭೂಮಿ ದೊರೆತಿದೆ, ಅಲ್ಲಿ ಮಠವಾಗಬೇಕು ಎಂದು ಹೇಳಿದಕ್ಕೆ, ಗೌಡನು ಮಠ ಕಟ್ಟಲು ಬೇಕಾಗುವ

ಮರಮುಟ್ಟುಗಳನ್ನೆಲ್ಲ ಒದಗಿಸಿಕೊಟ್ಟನು. ಆತನಿಗೆ ಭಸ್ಮವನ್ನು ಆಶೀರ್ವದಿಸಿ ಎಲ್ಲವಂ ಕೈಗೊಂಡು ಹುಲ್ಲಳ್ಳಿಯಲ್ಲಿ ಮಠ ನಿರ್ಮಿಸಿದನು.

ವ॥ ಇಂತು ಮಠವಂ ನಿರ್ಮಿತಂಗೆಯ್ದು
ಸಂತಸದಿಂದಿರುತ್ತೊಂದಾನೊಂದುದಿನಂ
ಚೆನ್ನವೀರಾಚಾರ್ಯಕಂ ಹುಣಿಸನಹಾಳೆಂಬ ಪುರವನಾಳ್ವ
ನಂಜರಾಜೇಂದ್ರವರ ಮನೆಗೈತರಲವಂ ಕಂಡು ನಮಸ್ಕರಿಸಿ
ಗದ್ದುಗೆಯನಿತ್ತು ಸತ್ಕರಿಸಲಾ ನೃಪನಂ ನೋಡಿ
ಕ್ಷೇಮಕುಶಲಂಗಳಂ ಕೇಳ್ದು ವಚನಂಗಳನೋದುತಿರ್ದನದೆಂತೆನೆಃ

ಚನ್ನವೀರಾಚಾರ್ಯನು ಹುಣಸನಾಳವೆಂಬ ಪುರವನ್ನು ಆಳುವ ನಂಜರಾಜೇಂದ್ರನ ಅರಮನೆಗೆ ಬಂದನು. ರಾಜನು ವಂದಿಸಿ ಸ್ವಾಗತಿಸಿದನು. ಕುಶಲಪ್ರಶ್ನೆಯ ಬಳಿಕ ವಚನಗಳನ್ನು ಗುರು ಓದತೊಡಗಿದನು.

ಕ॥ ಓದಿದ ವಚನಂಗಳ ಬಳಿ
ಕೋದದೆ ಮತ್ತೋದಲೊಂದು ಮಾಸಾಂತವರಂ ।
ಮೇದಿನೀಶ್ವರನು ಹರ್ಷಂ
ಬೋಧಿಯೊಳಾಳುತ್ತ ಕೇಳ್ದನಾ ಗುರುವರನಂ ॥ (3–12)

ಒಂದು ತಿಂಗಳ ಕಾಲ ಒಮ್ಮೆ ಓದಿದ ವಚನಗಳನ್ನು ಮತ್ತೆ ಓದದೆ ಹೊಸ ಹೊಸ ವಚನಗಳನ್ನು ಹಾಡುತ್ತಿರಲು ಅರಸನಿಗೆ ಅಚ್ಚರಿಯಾಯಿತು.

ಅಂದಿನ ದಿನಕ್ಕೆ ಆಗಲೇ ಸಂಗ್ರಹಗೊಂಡಿದ್ದ ಸಾವಿರಕಟ್ಟು, ಒಂದೂವರೆ ಸಾವಿರ ಕಟ್ಟು, ಮೂರು ಸಾವಿರ ಕಟ್ಟು, ಆರು ಸಾವಿರ ಕಟ್ಟುಗಳಿಂದ ಪಾರಾಯಣ ಮಾಡುತ್ತಿದ್ದ ವಿಷಯ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಉ॥ ನೆಟ್ಟನೆವೋದಿಪಟ್ಟ ವಚನಂಗಳ ಹೇಳದೆ ದೇವ ನೀವು ಮ
ತ್ತೆಷ್ಟನೆ ವಾಸರಂ ಪಠಣೆಗೈವಿರೆನುತ್ತ ಮಹೀಪ ಕೇಳೆ ಚ ।
ಲ್ವಟ್ಟುರೆಯೇಕಮಾಸಬರಲನ್ನೆಗ ಹಾಡುವನೆಂದು ಪೇಳೆ ತ
ದ್ವಿಷ್ಟಪನಾಥ ನಂಜಧರಣೀಶ್ವರ ಮೆಚ್ಚಿದನೇನ ಬಣ್ಣಿಪೆಂ ॥ (3–13)

"ಸ್ವಾಮಿ, ನೀವು ಹೀಗೆ ಓದಿದ ವಚನಗಳನ್ನು ಓದದೆ ಹೊಸಹೊಸದಾಗಿ ಎಷ್ಟು ದಿನಗಳವರೆಗೆ ಪಠನಗೈಯುವಿರಿ?" ಎಂದು ಕೇಳಲು "ಮತ್ತೆ ಒಂದು ತಿಂಗಳು ಹಾಡುವೆನೆಂದು ಗುರು ಹೇಳಿದನು. ನಂಜಮಹೀಪತಿ ಚನ್ನವೀರಣಾರ್ಯನನ್ನು ಪ್ರಶಂಸೆ ಮಾಡಿದನು.

ಚಂ॥ ಬಹುವಚನಾರ್ಥ ಪಾಠ ಬಹುಕೋವಿದ ವಿದ್ಯಸಮರ್ಥ ಬಲ್ಲಿದಂ
ಬಹುಮತಿಯುಕ್ತ ನೀನಹುದು ಭಾಪುರೆ ಭಾಪುರೆಯೆಂದು ಭೂಮಿಪಂ
ಬಹುದಯಚಿತ್ತವಾಗಿ ಪರಿಣಾಮಿಸುತಂ ಚನ್ನವೀರದೇವನಂ
ಬಹುಭಯಭಕ್ತಿಯಿಂದ ಕರವಂ ಮುಗಿದಂ ಕಡು ಚೋದ್ಯನಾಗೆ ತಾಂ ॥ (3–14)

"ಬಹುವಚನಾರ್ಥ ಪಾಠ ಬಹುಕೋವಿದ ವಿದ್ಯಸಮರ್ಥ ಬಲ್ಲಿದಂ" ಎಂತಹ ಉಪಮೆಗಳನ್ನು ಕವಿ ಬಳಸಿದ್ದಾನೆ! ಚೆನ್ನವೀರಣಾರ್ಯರನ್ನು ಬಹುಮತಿಯುಕ್ತ ನೀನಹುದು ಭಾಪುರೆ ಭಾಪುರೆಯೆಂದು ಕೊಂಡಾಡಿದ್ದಾನೆ. ಹುಣಸಿನಾಳ ದೊರೆ ನಂಜರಾಜೇಂದ್ರ ಬಹುಭಯ ಭಕ್ತಿಯಿಂದ ಕರವಂ ಮುಗಿದಂ ಕಂಡು ಚೋದ್ಯವಾಗಿ ಇಂತೆಂದನು.

"ಸ್ವಾಮಿ ತಮಗೆ ಸಾಲೋಳ್ ಖಂಡುಗ ಬತ್ತ ಬಿತ್ತುವ ಶ್ರೇಷ್ಠವಾದ ಗದ್ದೆಯನ್ನು ಕೊಟ್ಟು ಮಠ ಕಟ್ಟಿಸಿ ಕೊಡುವೆನು" ಎಂದು ಬಿನ್ನೈಸಿದನು. "ಎಲ್ಲ ಮನ್ನಣೆಯೂ ಇದೆ. ನಿಮ್ಮಲ್ಲಿಗೆ ಕಾಲಕಾಲಕ್ಕೆ ಬರುವೆವು. ಆಗ್ಗೆ ಭಕ್ತಿ ಸಲ್ಲಿಸಬಹುದು" ಎಂದು ಹೇಳಲು ಭೂವರನು ಮೆಚ್ಚಿದನು.

ಒಳ್ಳೇ ಬಾಳೆಗೊನೆಗಳು ನಾರಿಕೇಳ ಮೊದಲಾದ ಫಲಗಳನ್ನು ಪ್ರತಿ ಗೌರೀಹಬ್ಬಕ್ಕೂ ಕಳುಹಿಸುವುದಾಗಿ ರಾಜನು ವಚನವಿತ್ತನು. ಗುರುವು ರಾಜನಿಗೆ ಭಸ್ಮವಿತ್ತು ಆಶೀರ್ವದಿಸಿದನು. ಒಂದು ದಿನ ವೀರಮಾಹೇಶ್ವರರಿಗೆ ಸಂವಾದವೇರ್ಪಟ್ಟಿತು. ಜ್ಞಾನ ಮತ್ತು ಕ್ರಿಯೆಗಳಲ್ಲಿ ಯಾವುದು ಮೊದಲು ಎಂಬಂತೆ ಜ್ಞಾನ ಕ್ರಿಯೆಗಳಲ್ಲಿ ಯಾವುದು ಮೊದಲು ಎಂದು ಹೇಳಲಾಗದು. ಮುಕ್ತಿಗೆ ಎರಡು ಸೇರು [ಸಮಸಮುಚ್ಚಯ] ಸಾಧನ ಎಂದು ಹೇಳಿದನು.

"ಶಿವಲಿಂಗ ಚಾರಿತ್ರ" ಸಂಪಾದಕರಾದ ಲಿಂ. ಎಂ.ಜಿ. ನಂಜುಂಡಾರಾಧ್ಯರು 'ಹುಣಸಿನಾಳು' 'ಹುಣಸೂರು' ಇರಬೇಕು ಎಂದು ಊಹಿಸಿದ್ದಾರೆ. ಹುಣಸಿನಾಳು ನಂಜನಗೂಡಿನ ಬಳಿ ಇದೆ. ಈ ಮನೆತನದ ವಿವರ ಇರುವಂತಹ ಹಸ್ತಪ್ರತಿ ಪುಷ್ಪಿಕೆ ಬಗ್ಗೆ ಮೈಸೂರಿನ ಹಿರಿಯ ವಿದ್ವಾಂಸರಾದ ಶ್ರೀ ಜಿ.ವಿ. ಶಿವಲಿಂಗಯ್ಯನವರು ಸಂಶೋಧನಾತ್ಮಕ ಲೇಖನ ಬರೆದಿದ್ದಾರೆ. ಈ ಮನೆತನಕ್ಕೆ ಸಂಬಂಧಪಟ್ಟ ಎರಡು ಶಾಸನಗಳು ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕಿನ ಹೆಬ್ಬೂರು ಗ್ರಾಮದಲ್ಲಿ ಇದೆ.

ಹೆಬ್ಬೂರು ಗ್ರಾಮದ ಚಿಕ್ಕಕೆರೆಯ ಕಟ್ಟೆಮೇಲೆ ನೆಟ್ಟ ಕಲ್ಲು ಪ್ರಮಾಣ 3'6" x 3'.6"

1. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖವರುಷ 1641 ನೆಯ
2. ವಿಳಂಬಿನಾಮ ಸಂವತ್ಸರದ ಫಾಲ್ಗುಣ ಶುಭ 15 ಯು ಸೋಮವಾ
3. ರಸೂರ್ಯೋದಯವಾದಯಿಪ್ಪತ್ತೆರಡನೇ ಘಳಿಗೆಯಲ್ಲಿ ಹೆಬ್ಬೂರಿಗೆ
4. ಪಶ್ಚಿಮದಿಕ್ಕಿನಲು ಕಟ್ಟದದ್ಯೇವಾಂಬುಧಿಕೆರೆಯಂನ್ನು ಹುಣಸಿನಾಳ
5. ಘುನಂಜರಾಜವಡೆಯರ । ಮಗ। ದೊಡ್ಡಯ್ಯನವರ ಕುಟುಂಬದ್ಯೇವಾಜಂ
6. ಮನವರ । ಕೊಮರ ದೊಡ್ಡಯ್ಯ ಅರಸು । ಕಟ್ಟಿಸಿದದ್ಯೇವಾಂಬುಧಿಯಂಬಕೆರೆ।
7. ಕೆಲಸಮಾಡಿದವರು । ಗಂಟೀಮದನಬಸವನಕಂಬ ಮಾಡಿದವ । ಕಾಸಿಕೆಲಸದಕೊಮಾ
8. ರೈಯು । ಯೇರಿಕಲ್ಲಕಟ್ಟಿದವ ಕಲ್ಲುವಡರ ಚಿಂನೇಬೋಯಿ । ಮಂಣುವಡರಸಿದೇ ಬೋಯಿ

9. ದಾಸೇಬಯಿ । ಯಾಕೆರೆಕೆಲಸು । ವಿಕಾರಿಸಂವತ್ಸರದಮಾಘಶುದ್ಧ
10. 15 ವರಿಗೆ ಪೂರ್ವವಾಗಿ । ಯಿದಿವಸತಟಾಕ ಪ್ರತಿಷ್ಟೆಯು । ಆಇ
11. ತು ॥ ಶ್ರೀ ॥ಯಿಕೆರೆ ನೀರಿಗೆ ಆಸೆಮಾಡಿತೂಬಿಗೆ ಅವರೋ
12. ಧನೆಮಾಡಿದವಹೊಲೇರಮಾದಿಗರ ಬೀಜಕ್ಕೆ ಹುಟ್ಟಿದವನೂ ॥
13. ಕಲಿಯುಗ ಹುಟ್ಟಿ 4641 ನೇವಿಳಂಬಿಸಂವತ್ಸರಾ ॥ ಶ್ರೀ ॥

ಈ ಶಾಸನದ ಕಾಲ ಕ್ರಿ.ಶ. 1719. ಇದರ ಅಧ್ಯಯನದಿಂದ ಹುಣಸಿನಾಳು ಪರಂಪರೆಯ ಮೂರು ತಲೆಮಾರಿನ ವಿವರ ತಿಳಿದುಬರುತ್ತದೆ. ಒಂದು ತಲೆಮಾರಿಗೆ ಮೂವತ್ತು ವರ್ಷ ಅಂತ ಇಟ್ಟುಕೊಂಡರೂ ನಂಜರಾಜ ಒಡೆಯರ ಕಾಲ ಸುಮಾರು ಕ್ರಿ.ಶ. 1660 ಆಗುತ್ತದೆ. ಕಾವ್ಯದಲ್ಲಿ ಉಕ್ತನಾಗಿರುವ ಹುಣಸಿನಾಳ ನಂಜರಾಜೇಂದ್ರ ಶಾಸನದಲ್ಲಿ ಉಕ್ತವಾಗಿರುವ ಹುಣಸಿನಾಳ ನಂಜರಾಜ ಇಬ್ಬರೂ ಒಬ್ಬರೇ. ಕವಿಚರಿತೆಕಾರರು ತರ್ಕಿಸಿರುವ ಕಾಲ ಈ ಶಾಸನಕ್ಕೆ ಹೊಂದುತ್ತದೆ. ಇಂದು ನಾವು ಈ ಶಾಸನವನ್ನು ಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ರಸ್ತೆ ಅಗಲೀಕರಣಕ್ಕೋಸ್ಕರ ಶಾಸನವಿದ್ದ ಮಂಟಪವೇ ಹೂತು ಹೋಗಿದೆ.

ಹುಣಸಿನಾಳು ನಂಜರಾಜವಡೆಯನ ಮಗ ದೊಡ್ಡಯ್ಯ, ಸೊಸೆ ದ್ಯೇವಾಂಜಮ್ಮ, ಮಗ ದೊಡ್ಡಯ್ಯ ಅರಸು.

26 ಹೆಬ್ಬೂರು ಗ್ರಾಮದ ಹೊನ್ನಾದೇವಿ ಮಂಟಪದ ಮೇಲಿನ ಕಲ್ಲುದೂಲದಲ್ಲಿ

1. ಶೋಭಕೃತ ಸಂ ॥ ಕಾರ್ತಿಕಶು 5ಲು ಹುಣಸಿನಾಳ ನಂಜರಾಜ ವಡೆಯರ ಸೊಸೆ । ದೇವಾಂಜಮ್ಮ
2. ನವರ । ಕೊಮಾರ ದೊಡ್ಡೈಯ ಅರಸಿನವರು ಮಾಡಿಸ್ತ ಹೊಂನಾದೇವೀ ಮಂಟಪದ ಸೇವೆ.

ಈ ಶಾಸನವು ಮೇಲಿನ ಶಾಸನದ ನಾಲ್ಕು ವರ್ಷದ ಬಳಿಕ ಕೆತ್ತಲ್ಪಟ್ಟಿದೆ. ಶಿವಗಂಗೆ ಹೊನ್ನಾದೇವಿ ಜಾತ್ರೆಯ ಆಚರಣೆಯಲ್ಲಿ ಇಂದೂ ಸಹ ವಿಶೇಷವಾದ ಕಂಬ ಸ್ಥಾಪನೆಯನ್ನು ಒಂದು ಪುರಾತನ ಕಲ್ಲಿನ ಮಂಟಪದ ಮಧ್ಯೆ ಮಾಡುತ್ತಾರೆ. ಬಸರಿಮರದ ಕಂಬಸ್ಥಾಪನೆ ಎಂದು, ಈ ಮಂಟಪದ ಮಧ್ಯದಲ್ಲಿ ಅಂತಹ ಕಂಬವನ್ನೇ ಕೆತ್ತಿದ್ದಾರೆ. ಐತಿಹಾಸಿಕ ಮಹತ್ವವುಳ್ಳ ಈ ಮಂಟಪಕ್ಕೆ ಸಂಬಂಧಪಟ್ಟ ದೇವಸ್ಥಾನ ಕಾಲಗರ್ಭದಲ್ಲಿ ಅಡಗಿಹೋಗಿದೆ. ಹುಣಸಿನಾಳ ದೊರೆಗಳು ನಂಜನಗೂಡು ಸಮೀಪದಿಂದ ತುಮಕೂರು ಜಿಲ್ಲೆ ಹೆಬ್ಬೂರಿಗೆ ಬರಲು ಏನು ಕಾರಣ? ಮೈಸೂರು ದೊರೆಗಳ ಆಶ್ರಯ ಪಡೆದು ಅವರೇ ಇವರನ್ನು ಹೆಬ್ಬೂರಿಗೆ ಕಳುಹಿಸಿರಬಹುದೇ? ಈ ಬಗ್ಗೆ ವಿವರವಾದ ಅಧ್ಯಯನ ನಡೆಯಬೇಕಾಗಿದೆ. ಹುಣಸಿನಾಳ ಅರಸರು ವೀರಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ಕುರಿತು ವಿಶೇಷವಾದ ಸಂಶೋಧನೆಯಾಗಬೇಕು.

ನಂಜರಾಜನಿಂದ ಬೀಳ್ಕೊಂಡು ಚನ್ನವೀರಾರ್ಯನು ಹುಲ್ಲಳ್ಳಿಗೆ ಹಿಂದಿರುಗಿದನು. ಮುಂದೆ ಆತನಿಗೆ ಶಾಂತವೀರಾಚಾರ್ಯನೆಂಬ ಮಗ ಹುಟ್ಟಿದನು. ಆತನಿಗೆ ಸಮಸ್ತ ವಿದ್ಯೆಯನ್ನು ಕಲಿಸಿ, ನಿತ್ಯಲೀಲಾವಿನೋದದಿಂದ ಇರುತ್ತಿದ್ದನು.

ಚೆನ್ನವೀರಣಾರ್ಯನು ಪ್ರತಿನಿತ್ಯವೂ ಶಿವಪೂಜೆಯನ್ನು ಮಾಡುತ್ತಾ ಶಿವನನ್ನು ಕುರಿತು ನಾನಾ ವಿಧವಾದ ಸ್ವರವಚನಗಳು, ವಚನಗಳು, ರಗಳೆ, ಷಟ್ಪದಿ, ಕಂದಪದ್ಯಗಳಿಂದ ಸ್ತೋತ್ರ ಮಾಡುತ್ತಾ ಇದ್ದನು. ಪ್ರತಿನಿತ್ಯ ಪಾದೋದಕ ಪ್ರಸಾದಗಳನ್ನು ವೀರಶೈವ ಧರ್ಮದಂತೆ ಸೇವನೆ ಮಾಡುತ್ತಾ ಇದ್ದನು. ಇಲ್ಲಿ ಕವಿ “ಸದಾಶೇಷಪ್ರಸಾದಂಗಳಂ” ಎಂದಿದ್ದಾನೆ. ಇಷ್ಟಲಿಂಗಕ್ಕೆ ಪ್ರತಿಯೊಂದು ತುತ್ತೂ ಅರ್ಪಣೆಯಾಗಿ ಅದು ಶಿವಪ್ರಸಾದವಾದ್ದರಿಂದ ಶಿವನ ನಂತರ ಭಕ್ತ ಸ್ವೀಕರಿಸುವುದರಿಂದ ‘ಸದಾಶೇಷಪ್ರಸಾದ’ ಎಂದು ಕರೆದಿರಬಹುದು. ಇಂತಹ ಶ್ರೇಷ್ಠವಾದ ಭಕ್ತ ಶಿರೋಮಣಿಯನ್ನು ಕರೆತರಲು ಶಿವನು ಕೈಲಾಸದಿಂದ ನಂದಿ ಮೊದಲಾದ ಗಣವರರನ್ನು ಕಳುಹಿಸಿದನು.

ಮಡಿವಾಳ, ಮಾಳಿಗಯ್ಯ, ಘನ ಕಿನ್ನರ, ಸುಂಕದ ಬಂಕಿದೇವ, ಮಾರುಡಿಗೆಯ ನಾಚಿತಂದೆ, ನಮಿನಂದಿ, ನಂಬ್ಯಣ, ಚೇರಮಾಹ್ವಯಂ, ಕಡವಲ, ನಂಬಿದೇವ, ಮುಖ್ಯ ಗಣಾರ್ಯರೆಲ್ಲರೂ ಭೂತಳಕ್ಕೆ ಬಂದರು. ಪ್ರಮಥರು ಚನ್ನವೀರದೇವನನ್ನು ಕರೆದರು. ಚನ್ನವೀರದೇವನು ‘ಇದೋ ಬಂದೆನು, ಭಾಪು’ ಎಂದು ಹೃದಯ ನಲಿದು ಈಶನನ್ನು ಕೀರ್ತಿಸುತ್ತಾ ಗಣಸಂತತಿಗೆ ವಂದಿಸುತ್ತಾ ಪುಷ್ಪಕವನ್ನೇರಿದನು. ಜಯಕಾರ ಮೊಳಗುತ್ತಿರಲು ಪುಷ್ಪಕವನ್ನು ಶಂಕರನೂರಿನ ಮುಂದಿಳಿಸಿದರು.

ಮಲುಹಣಿ, ಮಾದಲಾಂಬೆ, ಶಿವದೇವಿ, ನಾಗತಿ, ನಂಬಿಯಕ್ಕ, ಚೆಂಗಳೆ, ತಿಲಕವ್ವೆ, ಚನ್ನೆ, ಕಮಲಾಂಬಿಕೆ, ಕಾಚಲಿದೇವಿ, ತಾಯಿ ದುಗ್ಗಳೆ ಮೊದಲಾದ ದೇವಗಣಕಾಂತೆಯರು ಎದುರುಗೊಂಡರು. ಚೆನ್ನವೀರದೇವರು ಪುಷ್ಪಕದಿಂದಿಳಿದು ನಡೆತಂದು ಈಶನಿಗೆ ವಂದಿಸಿದನು. ಶಿವನು ಪ್ರಮಥರಿಗೆ ಚನ್ನವೀರನನ್ನು ಪರಿಚಯ ಮಾಡಿಸಿ, ಆತನಿಗೆ ಸಾಯುಜ್ಯಪದವಿಯನ್ನಿತ್ತನು.

ಪುತ್ರವರ್ಗ ಪರಂಪರೆಯ ಶಿವಲಿಂಗದೇವ, ವೀರಣಾರ್ಯ, ಚೆನ್ನವೀರಾರಾಧ್ಯ, ಇವನ ಮಗ ಶಾಂತವೀರಾಚಾರ್ಯ ಹೀಗೆ ನಾಲ್ಕು ತಲೆಮಾರಿನ ಇತಿಹಾಸ ಈ ಪುಟ್ಟ ಕೃತಿಯಲ್ಲಿ ಅಡಗಿದೆ. ವೀರಶೈವ ಸಾಹಿತ್ಯಪ್ರಚಾರಕ್ಕೆ ಎಷ್ಟೆಲ್ಲಾ ಜನರು ದುಡಿದಿದ್ದಾರೆ ಎಂಬ ವಿಷಯ ಸಹ ಇದರಿಂದ ಗೊತ್ತಾಗುತ್ತದೆ. ಹದಿನಾರು ಮತ್ತು ಹದಿನೇಳನೇ ಶತಮಾನದ ಸಣ್ಣ ಪುಟ್ಟ ರಾಜ ಮನೆತನಗಳು ವೀರಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹ ಸಹ ತಿಳಿದುಬರುತ್ತದೆ. ಅಂದಿನ ದಿನಮಾನದಲ್ಲಿ ನಡೆಯುತ್ತಿದ್ದ ವೀರಶೈವ ಸಾಹಿತ್ಯದ ಅಧ್ಯಯನದ ಸ್ವರೂಪ ಸಹ ತಿಳಿದುಬರುತ್ತದೆ. ವಿಶೇಷವಾಗಿ ವಚನ ಸಾಹಿತ್ಯದ ಅಧ್ಯಯನ ಪ್ರತಿನಿತ್ಯ ನೂರಾರು ವಚನಗಳನ್ನು ಓದುವುದು ಅಥವಾ ಹಾಡುವುದು; ನಿತ್ಯ ಹೊಸ ವಚನ ಅಧ್ಯಯನ ಮಾಡಬೇಕಾದರೆ ಎಷ್ಟು ವಚನಗಳ ಸಂಗ್ರಹ ಅವರ ಹತ್ತಿರ ಇತ್ತು, ಹೀಗೆ ಬಹಳ ಅಪರೂಪದ ಮಾಹಿತಿಯನ್ನು ಈ ಕಿರುಕಾವ್ಯ ನೀಡುತ್ತದೆ.

**ಚನ್ನವೀರದೇಶಿಕ ವಿರಚಿತ**

ಶತಾಯುಷಿಗಳಾದ ಪ್ರೊ. ಸಿ. ಮಹಾದೇವಪ್ಪನವರು ಸಂಪಾದಿಸಿ ಪ್ರಕಟಿಸಿದ ಚಂದ್ರಕವಿ ವಿರಚಿತ "ಶಂಕರ ಶತಕ" (1965) ಪೀಠಿಕೆಯಲ್ಲಿ ಕರ್ಣಾಟಕ ಕವಿಚರಿತೆಯಲ್ಲಿ ನಿರೂಪಿತವಾಗದೆ ನಮಗೆ ದೊರೆತ ಚೆನ್ನಾರ್ಯ ಅಥವಾ ಚನ್ನವೀರದೇಶಿಕ ವಿರಚಿತ 'ಅಷ್ಟಾವರ್ಣ ಮಣಿದರ್ಪಣ ಶತಕ' ಮತ್ತು 'ಈಶ್ವರ ಓಲಗಶತಕ' ಅಥವಾ 'ಮಲ್ಲಿಕಾರ್ಜುನಕ್ಷೇತ್ರಮಹಾತ್ಮ್ಯೆ' ಎಂಬ ಎರಡು ಸ್ವತಂತ್ರ ಶತಕಗಳನ್ನು ರಚಿಸಿರುವುದನ್ನು ಸಂಶೋಧಿಸಿದ್ದಾರೆ. ಅದೇ ಪೀಠಿಕೆಯಲ್ಲಿ ಅಷ್ಟಾವರಣಮಣಿದರ್ಪಣಶತಕದ (ಸು. 1650) ಆರು ವೃತ್ತಗಳನ್ನೂ 'ಈಶ್ವರವೋಲಗ ಶತಕದ ಏಳು ವೃತ್ತ' ಒಂದು ಕಂದಪದ್ಯವನ್ನೂ ಸಂಪಾದಿಸಿಕೊಟ್ಟಿದ್ದಾರೆ. ಅವನ್ನು ಈ ಕೆಳಗೆ ಯಥಾವತ್ತಾಗಿ ಕೊಡಲಾಗಿದೆ.

**ಅಷ್ಟಾವರಣಮಣಿದರ್ಪಣ ಶತಕ (ಸು. 1650)**

ಹರಿಹರದೇವ ಪದ್ಮರಸದೇವ ಹಲಾಯುಧದೇವ ದೇವ ಪಾ
ಲ್ಕುರಿಕೆಯ ಸೋಮದೇವ ಗಣಮಲ್ಲಣ ಬಿಲ್ಲಣ ವೀರಣಾರ್ಯ ಸ ।
ದ್ಗುರುವರದೇವಮುಖ್ಯ ನಿಜಶುದ್ಧ ಶಿವಾರ್ಚಕರೊಲ್ದು ಪೇಳ್ದ ಶಂ
ಕರಕವಿತಾರಸಾಸ್ವಾದಮಿರಲ್ಕೆನ್ನೊಳಗನಿಶ ಮಲ್ಲಿಕಾರ್ಜುನಾ ॥

ಗುರು ಸಿದ್ಧೇಶ್ವರವಂಶವರ್ಧನಕರ ಶ್ರೀವೀರಣಾರಾಧ್ಯದೇ
ವರ ಪುಣ್ಯೋದರಸಂಭವಾಭವಪದಾಂಭೋಜಾತಸೌಗಂಧ ಷ ।
ಟ್ಚರಣಾಭಂ ಚೆನವೀರದೇಶಿಕನುಸುರ್ದಂ ವೀರಶಯವರ್ಗೆಯಾ
ಚರಣಾಚಾರ ಮಹಾಪ್ರಬಂಧಮಿದ ಕೇಳಾ ಶಾಂತಮಲ್ಲೇಶ್ವರಾ ॥

ಗುರುಪಾದಪೂಜೆ ಲಿಂಗಪಾದಪೂಜೆ ಚರಾರ್ಚನೆ ಪಾದಪೂಜೆ ತ
ಚ್ಚರಣಜಲಪ್ರಸಾದವನು ಸೇವನೆ ಭಸ್ಮ ಸದಾಕ್ಷಮಾಲಿಕೋ ।
ಚ್ಚರಣಸುಮಂತ್ರಪುಷ್ಪಮೆನಿಪಾವರಣಂಗಳ ಷಟ್ಸ್ಥಲಾನ್ವಿತಾ
ಚರಣಮಹಾಪ್ರಬಂಧಮಿದನಾಲಿಸು ಪಾಲಿಸು ಮಲ್ಲಿಕಾರ್ಜುನಾ ॥

ಪಂಚಾಂಗೋದ್ಭವಭೂತಿ ಪಾವನಕರಂ ರುದ್ರಾಕ್ಷ ರುದ್ರೇಕ್ಷಣಂ
ಕಿಂಚಿತ್ತೀರ್ಥ ವಿಶೇಷಮೋಕ್ಷಫಲದಂ ಶೇಷಂ ರುಜಾಭೇಷಜಂ ।
ಪಂಚಪ್ರೋಕ್ಷ ಸುವರ್ಣಮುಕ್ತಿಪದಮೆಂದೊಲ್ದೀಶಭಕ್ತಿವ್ರಜಂ
ಪಂಚಾಚಾರದೊಳಿರ್ಪುದೇ ಸುಚರಿತಂ ಶ್ರೀಶಾಂತಮಲ್ಲೇಶ್ವರಾ ॥

ಶರಣಪ್ರೇಮಿ ಮಹೇಶ್ವರಂ ಸಕಲರಕ್ಷಾಮೂರ್ತಿ ಮಾಹೇಶ್ವರಂ
ಗುರುಲಿಂಗಾಸ್ಯ ಮಹೇಶ್ವರ ಭಸಿತರುದ್ರಾಕ್ಷಾಂಗಿ ಮಾಹೇಶ್ವರಂ ।
ಹರಪೂಜಾರ್ಥಿ ಮಹೇಶ್ವರಂ ಜನನಜಾಡ್ಯಚ್ಛೇದ ಮಾಹೇಶ್ವರಂ
ಗುರುಲಿಂಗಾಂಗಿ ಮಹೇಶ್ವರಂ ಗುರುವಲಾ ಶ್ರೀ ಶಾಂತಮಲ್ಲೇಶ್ವರಾ ॥

ಕಾಮನ ಮೆಟ್ಟು ಕಾಲನಿಗಳಂಗಳ ಕಿತ್ತಿಡುತಲ್ದು ಗರ್ವದು
ರ್ಭಾವ ದುರಾಸೆಯೆಂಬ ಕುಜರಾಜಿಯ ನೆಗ್ಗಿಡುತೊಲ್ದು ಷಟ್ಸ್ಥಲೋ ।

ದ್ಭಾವಿಗಳೆಂಬ ಪಟ್ಟರಣಗಳ್ಗೆ ನಿಜೋನ್ಮದಗಂಧವೀವುತ
ಷ್ಭಾವರಣೇಭ ಬಂದು ವೃಷಭಾಕೃತಿಯಾದುದೋ ಮಲ್ಲಿಕಾರ್ಜುನಾ ॥

**22. ಈಶ್ವರವೋಲಗ ಶತಕ (ಸು. 1650)**

ಗುರು ಸಿದ್ಧೇಶ್ವರವಂಶವರ್ಧನಕರ ಶ್ರೀವೀರಣಾರಾಧ್ಯ ದೇ
ವರ ಗರ್ಭೋದ್ಭವ ಚೆನ್ನಣಾರ್ಯರೊಲವಿಂದೀಕ್ಷೇತ್ರ ಹಾತ್ಮೆಯಂ ।
ಪುರಮಧ್ಯಸ್ಥಿತ ಮಲ್ಲಿಕಾರ್ಜುನಸಭಾವಿಸ್ತಾರಮಂ ಪೇಳ್ವುದೆಂ
ದೊರೆದಂ ತತ್ತೃಣಬಿಂದುಪಟ್ಟಣವರ ಶ್ರೀವೀರಭೂಪಾಲಕಂ ॥

ವೃದ್ಧಾನುಕ್ರಮದಿಂ ವದಂತಿಯಿತಿಹಾಸಸ್ಕಂದವಾತೂಲನಿಂ
ಸಿದ್ಧಾಂತರ್ಜುನಗೀತೆ ತೀರ್ಥಮಹಿಮಾಬ್ರಹ್ಮೋತ್ತರಾಖಂಡದಿಂ ।
ನದ್ಯೋದೀಚ್ಯವಹಂಗಳಿಂ ತೃಣಪುರಕ್ಷೇತ್ರಂ ಮಹಾಕ್ಷೇತ್ರಮೆಂ
ದುದ್ಧಾರಂ ಮಿಗೆ ಮಾಡಿದೀ ಮಹಜನಂ ಕೈಕೊಂಬುದೀ ಕಾವ್ಯಮಂ ॥

ಬಾರದರಿಲ್ಲವೀ ನಗರಿಗ್ರಜರಾಗಮಶಾಸ್ತ್ರ ಮೋವಿದರ್
ಸಾರಿ ಮಹಾಪುರಾಸ್ತುಮೆನುತಾಡುವರಲ್ಲದೆ ಪೇಳ್ದರಿಲ್ಲವೀ ।
ಧಾರಿಣಿಗತ್ಯಧಿಕ್ಯ ಸುಮಹಸ್ಥಲಪೂರ್ವಕಮಂ ನಿಮಿರ್ಚಿದೆಂ
ಶೂರರುದಾರರೊಲ್ದು ಸಲೆ ಕೇಳ್ವುದು ಪೇಳ್ವುದು ಬಾಳ್ವುದಳ್ಕಱೆಂ ॥

ಶ್ರಿಮದ್ರಾಜಾಧಿರಾಜಂ ರಜತಗಿರಿವರಂ ರಾಜರಾಜಪ್ರಸೇವ್ಯಂ
ಸೋಮಾರ್ಕಶ್ರೇಯಸಾಕ್ಷಂ ಸುರನರಭುಜಗಾಧೀಶ ಭೂಭೃದ್ಧರಂ ಸು ।
ತ್ರಾಮಂ ಬ್ರಹ್ಮಾಸುರಾದ್ಯರ್ಭಕುತಿರತಿಯೊಳೋಲೈಸಲೊಪ್ಪಿರ್ದನಾರ್ಯಾ
ವಾಮಂ ವಂದ್ಯಪ್ರಸನ್ನಂ ಹರಿಣಪುರವರಂ ಶಾಂತಮಲ್ಲೇಶಲಿಂಗಂ ॥

ವೀರವೃಷೇಶ ಭೃಂಗಿ ಗಜವಕ್ತ್ರಷಡಾನನ ಗಂಗೆವಾಳುಕ
ರ್ದಾರುಕರೇಣುಕಾರ್ಯಾಮರಭಕ್ತಮಹೇಶ್ವರರುದ್ರ ಷೋಡಶ ।
ರ್ತೇರಸರಾದಿಯಾದ ಪ್ರಮಥರ್ಬಳಸೊಪ್ಪಿರಲದ್ರಿಜಾಮನೋ
ಹಾರನುದಾರ ಶಂಭು ಶಶಿಶೇಖರನೊಪ್ಪಿದನಾ ಸಭಾಂತದೊಳ್ ॥

ಸರ್ಪಾಧೀಶರ್ವರಕಂಕಣಂ ಸಕಲಲೋಕಾಧೀಶ ಸರ್ವೇಶ ಕಂ
ದರ್ಪತ್ರೈಪುರದಕ್ಷಕಾಲಮಥನಂ ತ್ರೈಲೋಕಮಂ ಪಾಲಿಸಲ್ ।
ಯೆಪ್ಪತ್ತೇಳ್ವಿನಿಯೋಗದಿಂದರಸುಗೈವುತ್ತೋಲಗಂಗೊಟ್ಟು ತಾ
ನೊಪ್ಪುತ್ತಿರ್ದನದೇನುಘೇವುಘೇಯೆನಲ್ ಶ್ರೀಶಾಂತಮಲ್ಲೇಶ್ವರಂ ॥

ಕಂ॥ ದೇವಾತ್ರಿಗೋತ್ರಮಾಣಿಕ
ದೇವಂ ಪೊಮ್ಮೇಂದ್ರದೇವ ಬಂದುಗೆದೇವಂ ।
ಭೂವರ ಪಿರುಮಾಳ್ದೇವ ಸು
ಭಾವ ಪಿರಿಯೊಡೆಯರಾಳ್ದರಾ ಪುರವರಮಂ ॥

ಪಿರಿಯಂ ರಾಜಮಹೀಶ ಗೋವಣಧರಾಧೀಶೋನ್ನತಸೋಃಮ ಭೂ
ವರ ರಾಜೇಂದ್ರನುದಾರಗೋವಣನರೇಶಂ ಕೆಂರಾಜೇಂದ್ರಸಂ ।
ಗರಧೀರಂ ಬಸವೇಂದ್ರಭೂಪತನುಜಂ ಶ್ರೀವೀರರಾಜೇಂದ್ರ ಸೌಂ
ದರಹಾರಂ ಕ್ರಮದಿಂ ತತ್ಪುರಮನಾಳುತ್ತಿರ್ದರುತ್ಸಾಹದಿಂ ॥

ಹುಲ್ಲಹಳ್ಳಿ ಅಥವಾ ತೃಣಪುರಿಯಲ್ಲಿ ನೆಲೆಸಿದ ಚೆನ್ನವೀರದೇಶಿಕ ವಿರಚಿತ "ಅಷ್ಟಾವರಣ ಮಣಿದರ್ಪಣ ಶತಕ" "ಈಶ್ವರ ಓಲಗಶತಕ ಅಥವಾ ಮಲ್ಲಿಕಾರ್ಜುನಕ್ಷೇತ್ರ ಮಹಾತ್ಮ್ಯ ಶತಕ" ಸಂಪೂರ್ಣವಾಗಿ ಮುದ್ರಣವಾದರೆ ನಮಗೆ ಇನ್ನಷ್ಟು ಐತಿಹಾಸಿಕ ವಿಷಯ ಲಭ್ಯವಾಗುತ್ತದೆ.

"ಈಶ್ವರ ಓಲಗಶತಕ"ದ ಒಂದು ವೃತ್ತದಲ್ಲಿ ತೃಣಪುರಿ ಅಥವಾ ಹುಲ್ಲಹಳ್ಳಿಯನ್ನು ಆಳಿದ ರಾಜೇಂದ್ರ ಕೆಂಪರಾಜೇಂದ್ರ, ಬಸವೇಂದ್ರ, ವೀರರಾಜೇಂದ್ರ ದೊರೆಗಳ ಮಾಹಿತಿ ಸಿಗುತ್ತದೆ. ಹುಲ್ಲಹಳ್ಳಿಯ ಪರಿಸರದಲ್ಲಿ ಈ ಅರಸು ಮನೆತನದ ಶಾಸನಗಳನ್ನು ಲಭ್ಯವಾಗುತ್ತವೆಯೇ ಎಂಬ ಆ ಬಗ್ಗೆ ಸಂಶೋಧನೆ ಮಾಡಬೇಕು.

;
;

;
!
**- ಅಕ್ಕಮಹಾದೇವಿ**

# ಸರ್ವಜ್ಞ ವಚನ ವ್ಯಾಖ್ಯಾನ

**ಪ್ರೊ. ಮೊರಬದ ಮಲ್ಲಿಕಾರ್ಜುನ**

**ಕಾಯವಿಂದ್ರಿಯದಿಂದೆ ಜೀವ ವಾಯುವಿನಿಂದೆ**
**ಕಾಯವನು ಬ್ರಹ್ಮಸೃಷ್ಟಿಯೆಂದೆಂಬವನ**
**ಬಾಯ ನೋಡೆಂದ ಸರ್ವಜ್ಞ**

ಸರ್ವಜ್ಞ ಮನುಷ್ಯಸೃಷ್ಟಿಯನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಿದ್ದಾನೆ. ನಮ್ಮ ದೇಹಕ್ಕೆ ಒಂದು ಆಕಾರ, ರೂಪ ಬಂದಿರುವುದು ಯಾವುದರಿಂದ? ಎಂಬ ಪ್ರಶ್ನೆಗೆ ಶರೀರಶಾಸ್ತ್ರದ ತಿಳುವಳಿಕೆಯಿಂದ ಉತ್ತರಿಸುವ ಪ್ರಯತ್ನ ಆತನ ವಚನದಲ್ಲಿದೆ. ನಮ್ಮ ದೇಹ ರೂಪುಗೊಂಡಿರುವುದು ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಈ ಐದು ಇಂದ್ರಿಯಗಳಿಂದ. ನಮ್ಮ ಈ ದೇಹಕ್ಕೆ ಪ್ರಾಣ ಬಂದಿರುವುದು ನಾವು ಉಸಿರಾಡುವ ಗಾಳಿಯಿಂದ. ಹೌದಲ್ಲವೆ? ಇದು ದೇಹಸೃಷ್ಟಿಯನ್ನು ಸಹಜವಾಗಿ ವಿವರಿಸಬಹುದಾದ ಸರ್ವಸಮ್ಮತ ತರ್ಕ. ಇದನ್ನು ಬಿಟ್ಟು ಲೋಕದ ಎಲ್ಲ ಜೀವ ಸೃಷ್ಟಿಗೂ ಬ್ರಹ್ಮನೇ ಕಾರಣ ಎಂಬ ಕಪೋಲಕಲ್ಪಿತ ಪುರಾಣವರ್ಣನೆಯನ್ನು ಸರ್ವಜ್ಞ ಅಲ್ಲಗಳೆಯುತ್ತಾನೆ.

**ತತ್ವಮಸಿಯೆಂದೆಂಬ ಅರ್ಥವನರಿಯದೆ**
**ತುತ್ತು ಸವಿಯೆಂದು ಉಣಕಲಿತ ಯೋಗಿಗಿ**
**ನ್ನೆತ್ತಣ ಅರಿವು ಸರ್ವಜ್ಞ**

ತತ್ವಮಸಿ ಎಂದರೆ ತತ್ ತ್ವಂ ಅಸಿ, ಅದು ನೀನು ಆಗಿದ್ದೀಯ. ಇದು ಉಪನಿಷತ್ತಿನ ಒಂದು ಮುಖ್ಯವಾದ ಮಾತು. ಅದು ಎಂದರೆ ಪರಮಾತ್ಮ, ನೀನು ಎಂದರೆ ಜೀವಾತ್ಮ, ಪರಮಾತ್ಮ ಮತ್ತು ಜೀವಾತ್ಮ ಬೇರೆಬೇರೆಯಲ್ಲ, ಒಂದೇ ಎನ್ನುವ ತಿಳುವಳಿಕೆ ಸಾಧಕನಾದವನಿಗೆ ಅತ್ಯಗತ್ಯ. ಶಿವ–ಜೀವರ ಸಂಯೋಗವೇ 'ಯೋಗ' ಎನಿಸಿಕೊಳ್ಳುತ್ತದೆ. ಆದ್ದರಿಂದ ಯೋಗಿಯಾದವನು ಈ ಅರಿವನ್ನು ಪಡೆದುಕೊಂಡು ಸಾಧನೆಯ ದಾರಿಯಲ್ಲಿ ಸಾಗಬೇಕು. ತತ್ವಮಸಿ ಎಂಬುದನ್ನು ಬಿಟ್ಟು ತುತ್ತು ಸವಿಯಾಗಿದೆ ಎಂದು ಬಾಯಿ ಚಪ್ಪರಿಸಿ ಊಟ ಮಾಡುತ್ತಾ ದೇಹಪೋಷಣೆ ಮಾಡುವ ಯೋಗಿಯ ದೇಹ ಬೆಳೆಯುತ್ತದೆಯೇ ಹೊರತು ಅರಿವು ಜಾಗರಗೊಳ್ಳುವುದಿಲ್ಲ.

**ತನ್ನ ತಾನರಿವುದು ತನ್ನ ಬಿಟ್ಟರಿವುದು**
**ತನ್ನನರಿಯದನ ತೊರೆವುದು ಜ್ಞಾನ ತಾ**
**ಬಿನ್ನಾಣವಲ್ಲ ಸರ್ವಜ್ಞ**

ಜ್ಞಾನವೆಂದರೆ ನನ್ನನ್ನು ನಾನು ಅರಿತುಕೊಳ್ಳುವುದು, ನನ್ನನ್ನು ಬಿಟ್ಟು ಈ ಜಗತ್ತಿನಲ್ಲಿ ಏನಿದೆ ಎನ್ನುವುದನ್ನು ಅರಿತುಕೊಳ್ಳುವುದು. ಅಂತಿಮವಾಗಿ ಈ ಅರಿವು ಜೀವಾತ್ಮ, ಪರಮಾತ್ಮ ಬೇರೆಯಲ್ಲ, ಒಂದೇ ಎಂಬ ಅದ್ವೈತ ಸತ್ಯದ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಬಸವಣ್ಣನವರು 'ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನವಯ್ಯಾ' ಎಂದಿದ್ದಾರೆ. ಇಲ್ಲಿ ನಿಮ್ಮನ್ನು ಎಂದರೆ ಪರಮಾತ್ಮನನ್ನು, ಪರಮಾತ್ಮನೆಂದರೆ ಜೀವಾತ್ಮನಾದ ನನ್ನನ್ನು ಎಂದೇ ಅರ್ಥ. ನನ್ನ ಅಸ್ತಿತ್ವದಿಂದಲೇ ಈ ಜಗತ್ತಿನ ಅಸ್ತಿತ್ವದ ಅರಿವು ನನಗೆ ಉಂಟಾಗಿದೆ ಎಂಬ ಸತ್ಯವನ್ನೂ ನಾವು ಮನಗಾಣಬೇಕು. ಆದ್ದರಿಂದ ಯಾರು ತಮ್ಮನ್ನು ತಾವು ಅರ್ಥ ಮಾಡಿಕೊಳ್ಳುವುದಿಲ್ಲವೋ ಅವರಿಂದ ಜ್ಞಾನ ದೂರವಾಗುತ್ತದೆ. ಅದು ಬಿನ್ನಾಣದ ವಸ್ತುವಲ್ಲ, ಆತ್ಮಜ್ಞಾನದ ಸ್ವತ್ತು.

**ಆತ್ಮಗಂಗೆಯ ಮಿಂದು ಜ್ಯೋತಿಲಿಂಗವ ಕಾಣೆ**
**ಪಾತಕ ಕೋಟಿ ಹರಿವುದು ಶುದ್ಧ ಪರ**
**ಮಾತ್ಮನೆಯಕ್ಕು ಸರ್ವಜ್ಞ**

ಮನುಷ್ಯರಾದ ನಾವು ತೀರ್ಥಕ್ಷೇತ್ರವೆಂದು ಹೆಸರಿಸಿ ಯಾವುಯಾವುದೋ ನೀರಿನಲ್ಲಿ ಮುಳುಗಿ ಏಳುತ್ತಿದ್ದೇವೆ. ಪವಿತ್ರ ಎಂದುಕೊಂಡು ಈಗಲೂ ಕಲುಷಿತವಾದ ಗಂಗಾನದಿಯಲ್ಲಿ ಕಣ್ಣು ಮೂಗುಗಳನ್ನು ಮುಚ್ಚಿಕೊಂಡು ಮುಳುಗುತ್ತಿದ್ದೇವೆ. ಏನು ಪ್ರಯೋಜನ? ಸರ್ವಜ್ಞ ಹೇಳುತ್ತಾನೆ: ನಾವು ಆತ್ಮಗಂಗೆಯಲ್ಲಿ ಮೀಯಬೇಕು, ಜ್ಯೋತಿರ್ಲಿಂಗವ ಕಾಣಬೇಕು. ಆತ್ಮಗಂಗೆಯಲ್ಲಿ ಮೀಯುವುದೆಂದರೆ ನಮ್ಮನ್ನು ನಾವು ಕಂಡುಕೊಳ್ಳುವುದು. ನಮ್ಮನ್ನು ನಾವು ಕಂಡುಕೊಂಡಾಗ ನಮ್ಮೊಳಗೇ ಇರುವ ಜ್ಯೋತಿರ್ಲಿಂಗಸ್ವರೂಪಿ ಪರಮಾತ್ಮನ ದರ್ಶನವಾಗುತ್ತದೆ. ನಮ್ಮ ಎಲ್ಲ ಪಾತಕಗಳೂ ಇಲ್ಲವಾಗುತ್ತವೆ. ನಾವೇ ಪರಿಶುದ್ಧ ಪರಮಾತ್ಮರಾಗುತ್ತೇವೆ.

**ತತ್ವವೆಂಬುದು ತನ್ನ ಹಿತ್ತಲ ಗಿಡ ನೋಡ**
**ಮತ್ತೆಲ್ಲಿ ನೋಡಿ ಅರಸಾದೆ ತಾನಿರ್ದ**
**ಅತ್ತಲೆ ನೋಡ ಸರ್ವಜ್ಞ**

ತತ್ವ ಎಂಬುದು ತತ್ ಮತ್ತು ತ್ವ ಎಂಬ ಎರಡು ಪದಗಳನ್ನು ಒಳಗೊಂಡಿದೆ. ತತ್ ಎಂದರೆ ಅದು, ಪರಮಾತ್ಮ; ತ್ವ ಎಂದರೆ ಅದರ ಗುಣ, ಪರಮಾತ್ಮತನ; ಸರ್ವಜ್ಞನ ದೃಷ್ಟಿಯಲ್ಲಿ ತತ್ವವೆಂಬುದು ನಮ್ಮ ಹಿತ್ತಲ ಗಿಡವಂತೆ. ಹೌದಲ್ಲವೆ? ಜೀವಾತ್ಮರಾದ ನಮ್ಮಲ್ಲಿಯೇ ಪರಮಾತ್ಮನಿದ್ದಾನೆ ಎಂದಾದರೆ ಅವನು ನಮ್ಮ ದೇಹವೆಂಬ ಮನೆಯ

ಹಿತ್ತಲಿನ ಔಷಧಿಯ ಗಿಡವೇ ಸರಿ. ನಮ್ಮೊಳಗೆ, ನಮ್ಮೊಂದಿಗೆ ಇರುವ ನಿಜತತ್ವವೆ ಆ ಪರಶಿವ, ಪರಮಾತ್ಮ, ಅವನನ್ನು ನಮ್ಮಲ್ಲಿ ಅಲ್ಲದೆ ಇನ್ನೆಲ್ಲಿ ಹುಡುಕುವುದು? ನಮ್ಮತ್ತಲೆ ನಾವು ನೋಡಬೇಕು, ಅವನನ್ನು ಪಡೆಯಬೇಕು. ಎಷ್ಟು ಸರಳ ತತ್ವ! ಎಂತಹ ಉದಾತ್ತ ಚಿಂತನೆ!

**ಆ ದೇವ ಈ ದೇವ ಮೂದೇವನಬೇಡ**
**ದೇವರ ದೇವ ಜಗದೇವ ಪ್ರಾಣಿಗಳ**
**ಕಾವವನೆ ದೇವ ಸರ್ವಜ್ಞ**

ಬಸವಣ್ಣನವರು 'ದೇವನೊಬ್ಬ, ನಾಮ ಹಲವು' ಎಂದಿದ್ದಾರೆ. ಇದನ್ನು ಒಪ್ಪಿಕೊಂಡು ನಾವು ನೂರಾರು ದೇವರುಗಳ ಪಟ್ಟಿಯನ್ನು ಮಾಡುತ್ತೇವೆ. ವಿದ್ಯೆಗೆ ಸರಸ್ವತಿ, ಸಂಪತ್ತಿಗೆ ಲಕ್ಷ್ಮಿ, ಸಂಕಷ್ಟಕ್ಕೆ ಗಣಪತಿ, ಸೃಷ್ಟಿಗೆ ಬ್ರಹ್ಮ, ಪಾಲನೆಗೆ ವಿಷ್ಣು, ನಾಶಕ್ಕೆ ರುದ್ರ – ಹೀಗೆ ಬೇರೆ ಬೇರೆ ಕಾರಣಕ್ಕಾಗಿ ಬೇರೆ ಬೇರೆ ದೇವರುಗಳನ್ನು ಪ್ರಾರ್ಥಿಸುತ್ತೇವೆ, ಪೂಜಿಸುತ್ತೇವೆ. ಇಲ್ಲಿ ದೇವರ ಬಗೆಗಿನ ನಿಷ್ಠೆಗಿಂತ, ನಮ್ಮ ವೈಯಕ್ತಿಕ ತುರ್ತೇ ಮುಖ್ಯವಾಗುತ್ತದೆ.

ಸರ್ವಜ್ಞ ಹೇಳುತ್ತಾನೆ : ಆ ದೇವರು, ಈ ದೇವರು, ಮೂರು ದೇವರು ಎಂದು ದೇವರಲ್ಲಿ ವಿಭಜನೆ ಮಾಡಬೇಡ, ಇಡೀ ಜಗತ್ತಿಗೆ ಒಬ್ಬನೇ ದೇವರ ದೇವನಿದ್ದಾನೆ. ಜಗತ್ತಿನಲ್ಲಿರುವ ಸಕಲ ಪ್ರಾಣಿಗಳನ್ನೂ ರಕ್ಷಿಸುವವನೇ ನಿಜವಾದ ದೇವ, ಜಗದೇವ,

**ತೆಂಗಿಗು ಹಿರಿಯರಿಗು ಹಂಗು ಮಾಡಲು ಬೇಕು**
**ತೆಂಗಿನ ಮೊದಲ್ಗೆ ನೀರೆರೆಯೆ ಕಡೆಯಲ್ಲಿ**
**ಹಿಂಗದೀವಂತೆ ಸರ್ವಜ್ಞ**

ಸರ್ವಜ್ಞ ಬದುಕನ್ನು ತುಂಬ ಸೂಕ್ಷ್ಮವಾಗಿ ಗಮನಿಸಿ ತನ್ನ ತ್ರಿಪದಿಗಳಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾನೆ. ತೆಂಗು ಮತ್ತು ಹಿರಿಯರಿಗೆ ನಾವು ಋಣಿಯಾಗಿರಲೇಬೇಕು ಎಂದು ಅವನು ಹೇಳುತ್ತಾನೆ. ಯಾಕಿರಬೇಕು?

ತೀರಾ ವಯಸ್ಸಾದ ವ್ಯಕ್ತಿಯೊಬ್ಬರು ಸಸಿಯನ್ನು ನೆಡುವಾಗ ಒಬ್ಬರು ಕೇಳುತ್ತಾರೆ. "ನಿಮ್ಮ ಬದುಕೇ ಮುಗಿಯುವ ಹಂತದಲ್ಲಿದೆ, ಈಗ ಈ ಸಸಿ ನೆಡುವುದು ಯಾವ ಲಾಭಕ್ಕಾಗಿ?" ಆ ಹಿರಿಯರು ಹೇಳುತ್ತಾರೆ: "ಇದುವರೆಗೆ ನಾನು ನಮ್ಮ ಹಿರಿಯರು ನೆಟ್ಟ ಮರದ ಹಣ್ಣುಗಳು ತಿಂದಿದ್ದೇನೆ. ನನ್ನ ಮೊಮ್ಮಕ್ಕಳು ಹಣ್ಣು ತಿನ್ನುವುದಕ್ಕಾಗಿ ನಾನು ಸಸಿಯನ್ನು ನೆಡಬೇಡವೆ?" ಎಂತಹ ಋಣಪ್ರಜ್ಞೆ! ಎಂತಹ ಭವಿಷತ್ತಿನ ಚಿಂತನೆ!

ತೆಂಗಿನಮರವೂ ಹೀಗೆಯೇ ಅಲ್ಲವೆ? ಬುಡಕ್ಕೆ ಸಾಧಾರಣವಾದ ನೀರನ್ನೆರೆಯುತ್ತೇವೆ. ತುದಿಯಲ್ಲಿ ಸಿಹಿಯಾದ ಎಳನೀರನ್ನು ಅದು ಕೊಡುತ್ತದೆ. ಬದುಕಿಗೆ ಅಗತ್ಯವಾದ ಎಲ್ಲವನ್ನೂ ಕೊಡುವ ಕಲ್ಪವೃಕ್ಷವದು. (ಮುಂದುವರಿಯುತ್ತದೆ)

# ವಚನ ಪಿತಾಮಹ ಡಾ. ಹಳಕಟ್ಟಿಯವರ ಬದುಕು–ಬರಹ

**ನಗರ್ಲೆ ಶಿವಕುಮಾರ**

ಲೋಕದಂತೆ ಬಾರರರು, ಲೋಕದಂತೆ ಇರರು,
ಲೋಕದಂತೆ ಹೋಗರು, ನೋಡಯ್ಯ !
ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು, ನೋಡಯ್ಯ !
ಉರಿಲಿಂಗದೇವಾ, ನಿಮ್ಮ ಶರಣರು
ಉಪಮಾತೀತರಾಗಿ ಉಪಮಿಸಬಾರದು

**– ಉರಿಲಿಂಗದೇವರು**

**ಪೀಠಿಕೆ :** ಕನ್ನಡ ಭಾಷೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಪ್ರಾಚೀನತೆಯನ್ನು ಹೊಂದಿದೆ. ಕ್ರಿ.ಶ. ಒಂದನೆಯ ಶತಮಾನದಲ್ಲಿ ದೊರೆತ ಗ್ರೀಕ್ ಪ್ರಹಸನದಲ್ಲಿ ಕನ್ನಡ ಪದಗಳು ದೊರೆತಿವೆ. ಕ್ರಿ.ಶ. ಏಳನೆಯ ಶತಮಾನದಲ್ಲಿ 'ಚೂಡಾಮಣಿ' ಗ್ರಂಥದ ಬಗ್ಗೆ ಉಲ್ಲೇಖವಿದೆ. ನಮಗೆ ದೊರೆತಿರುವ ಲಿಖಿತ ದಾಖಲೆಯೆಂದರೆ ಕ್ರಿ.ಶ. 450ರಲ್ಲಿ ಹಾಸನ ಜಿಲ್ಲೆ ಹಲ್ಮಿಡಿ ಎಂಬ ಗ್ರಾಮದಲ್ಲಿ ಬರೆಯಲಾಗಿರುವ ಶಾಸನ. ಇಲ್ಲಿಯ ಬರವಣಿಗೆ ಸಾಹಿತ್ಯಿಕವಾಗಿರುವುದು ಗಮನಾರ್ಹ. ಗ್ರಂಥರೂಪದಲ್ಲಿ ಲಭ್ಯವಾಗಿರುವುದು ಶ್ರೀವಿಜಯ ವಿರಚಿತ 'ಕವಿರಾಜಮಾರ್ಗ'. ಇದೊಂದು ಅಲಂಕಾರ ಗ್ರಂಥ. ಕವಿರಾಜಮಾರ್ಗದ ಕಾಲ ಕ್ರಿ.ಶ. ಒಂಬತ್ತನೆಯ ಶತಮಾನ. ದೊರೆತಿರುವ ಮೊದಲನೆಯ ಗ್ರಂಥವಾದ 'ಕವಿರಾಜಮಾರ್ಗ' ಅಲಂಕಾರ ಗ್ರಂಥವೆಂದ ಮೇಲೆ ಅದಕ್ಕಿಂತ ಹಿಂದೆ ವಿಫುಲವಾಗಿ ಕನ್ನಡದಲ್ಲಿ ಸಾಹಿತ್ಯ ರಚನೆಯಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಕನ್ನಡ ಸಾಹಿತ್ಯದ ಆದಿಕವಿಯಾದ ಪಂಪನಿಂದ ಹಿಡಿದು ಪೊನ್ನ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಬಸವಾದಿ ಶರಣರು, ಪುರಂದರದಾಸರು, ಕನಕದಾಸರು ಹೀಗೆ ಆಧುನಿಕ ಸಾಹಿತ್ಯದ ಕವಿಗಳವರೆಗೆ ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸಿದ್ದಾರೆ. ಅವರಲ್ಲಿ ಹನ್ನೆರಡನೆಯ ಶತಮಾನದ ಬಸವಾದಿ ಶರಣರು ಪ್ರಮುಖರಾಗಿದ್ದಾರೆ.

ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ ವಚನ ಸಾಹಿತ್ಯವು ಕ್ರಿ.ಶ. 1168ರ ಕಲ್ಯಾಣಕ್ರಾಂತಿಯ ನಂತರ ಶರಣ–ಶರಣೆಯರು ವಚನಗಳ ಕಟ್ಟನ್ನು ಹೊತ್ತುಕೊಂಡು ಊರು ಊರಿಗೆ ಸಂಚರಿಸಿ, ಅಲ್ಲಲ್ಲಿ ಮನೆ–ಮಠಗಳನ್ನು ಸೇರಿ ಸಾರ್ವಜನಿಕ ಪ್ರಚಾರಕ್ಕೆ ಬರದೆ ಗುಪ್ತವಾಗಿ ಉಳಿಯಿತು. ಇದಾದ 300 ವರ್ಷಗಳ ನಂತರ ವಿಜಯನಗರ

ಸಾಮ್ರಾಜ್ಯದ ಪ್ರೌಢದೇವರಾಯನ ಕಾಲಕ್ಕೆ (1420–1448) ನೂರೊಂದು ವಿರಕ್ತರು ಮನೆ–ಮಠಗಳಲ್ಲಿ ಗುಪ್ತವಾಗಿದ್ದ ವಚನಗಳನ್ನು ಹೊರತೆಗೆದು ಲೋಕಾರ್ಪಣೆ ಮಾಡಿದರು. ಮುಂದೆ ಹದಿನಾರನೆಯ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಮತ್ತು ಅವರ ಶಿಷ್ಯ–ಪ್ರಶಿಷ್ಯರು ಸ್ವತಂತ್ರ ವಚನಕಾರರಾಗಿ ಹಾಗೂ ವಚನ ಸಾಹಿತ್ಯದ ಪ್ರಚಾರ ಮಾಡಿದರು. ನಂತರ ಸುಮಾರು 300 ವರ್ಷಗಳವರೆಗೆ ವಚನ ಸಾಹಿತ್ಯ ಬೆಳಕಿಗೆ ಬರಲಿಲ್ಲ. ಸುದೈವದಿಂದ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ (1915) ವಚನ ಸಂಶೋಧನ ಪಿತಾಮಹರೆಂದು ಖ್ಯಾತರಾದ ಡಾ. ಫ.ಗು. ಹಳಕಟ್ಟಿಯವರು ಕರುನಾಡಿನ ಮನೆ ಮಠಗಳಲ್ಲಿ ಗುಪ್ತವಾಗಿದ್ದ ತಾಳೆಗ್ರಂಥಗಳನ್ನು ಸಂಗ್ರಹಿಸಿ ತಮ್ಮ 'ಶಿವಾನುಭವ' ಎಂಬ ಪತ್ರಿಕೆಯ ಮೂಲಕ ಪ್ರಕಟಿಸಿದರು. ಅನಂತರ ವಚನಸಾಹಿತ್ಯ ಇಂದಿನವರೆಗೂ ಪ್ರಕಟಣೆ, ಪ್ರಸಾರವಾಗುತ್ತ ಬಂದಿದೆ.

ಕನ್ನಡ ಸಾಹಿತ್ಯ ಭಂಡಾರಕ್ಕೆ ಹನ್ನೆರಡನೆಯ ಶತಮಾನದಲ್ಲಿ ಸೇರಿದ ಬೃಹತ್ ಪ್ರಮಾಣದ ಸಂಪತ್ತು ವಚನಸಾಹಿತ್ಯ. ಇಂದು ನಮಗೆ ದೊರೆತಿರುವ ವಚನ ಸಾಹಿತ್ಯದ ಬಹುಪಾಲನ್ನು ಮೊದಲಿಗೆ ಬೆಳಕಿಗೆ ತಂದ ಕೀರ್ತಿ ಡಾ. ಫ.ಗು. ಹಳಕಟ್ಟಿಯವರಿಗೆ ಸಲ್ಲುತ್ತದೆ. ವಚನ ಸಂಗ್ರಹಕ್ಕಾಗಿ ಹಳಕಟ್ಟಿಯವರು ಎದುರಿಸಿದ ಕಷ್ಟನಷ್ಟಗಳು ಅಪಾರ. ನಾಡಿಗಾಗಿ, ಸಮಾಜಕ್ಕಾಗಿ ಬಾಳಿನುದ್ದಕ್ಕೂ ಅನೇಕ ರೀತಿಯ ನೋವುಗಳನ್ನು ಸಹಿಸಿಕೊಂಡು ಕರ್ತವ್ಯಪ್ರಜ್ಞೆಯನ್ನು ಮೆರೆದ ಅನುಭಾವಿ ಡಾ. ಹಳಕಟ್ಟಿಯವರು. ತಮ್ಮ ತ್ಯಾಗ, ಅಭಿಮಾನ, ಪರಿಶ್ರಮದಿಂದ ಹೊಸ ಇತಿಹಾಸ ಬರೆದರು ಹಾಗೂ ಮನುಕುಲದ ಏಳ್ಗೆಗಾಗಿ ಸಂಕಲ್ಪ ತೊಟ್ಟು ಬದುಕಿದವರು ಫ.ಗು. ಹಳಕಟ್ಟಿಯವರು. ಇಂತಹ ಮಹನೀಯರನ್ನು ಪರಿಚಯಿಸುವುದು ಪುಣ್ಯದ ಕೆಲಸವೆಂದು ಭಾವಿಸಿದ್ದೇನೆ.

**ಬಾಲ್ಯ :** 2 ಜುಲೈ 1880ರಂದು ಧಾರವಾಡದಲ್ಲಿ ಶ್ರೀ ಗುರುಬಸಪ್ಪ ಮತ್ತು ಶ್ರೀಮತಿ ದಾನಮ್ಮನವರ ಮಗನಾಗಿ ಹಳಕಟ್ಟಿಯವರು ಜನಿಸಿದರು. ಹುಟ್ಟಿದ ಮೂರು ವರ್ಷದಲ್ಲೇ ತಾಯಿಯವರನ್ನು ಕಳೆದುಕೊಂಡು ಮಾತೃವಾತ್ಸಲ್ಯದಿಂದ ವಂಚಿತರಾದರು. ತಂದೆ ಶ್ರೀ ಗುರುಬಸಪ್ಪನವರು ಪ್ರಾಥಮಿಕ ಶಾಲಾ ಶಿಕ್ಷಕರಾದರೂ, ಸಾಹಿತ್ಯದಲ್ಲಿ ಹಾಗೂ ಶಿಕ್ಷಣದಲ್ಲಿ ಆಸಕ್ತರಾಗಿದ್ದರು. ಇಂಗ್ಲೆಂಡಿನ ಇತಿಹಾಸ, ಏಕನಾಥ ಸಾಧುಗಳ ಚರಿತ್ರೆ ಮೊದಲಾದ ಗ್ರಂಥಗಳನ್ನು ರಚಿಸಿದ್ದರು. ಆಗಿನ ಪ್ರಮುಖ ಪತ್ರಿಕೆಯಾದ 'ವಾಗ್ಭೂಷಣ'ದಲ್ಲಿ ಹಲವಾರು ಲೇಖನಗಳನ್ನು ಬರೆದು ನಾಡಿನ ಗಮನಸೆಳೆದಿದ್ದರು. ಹೀಗಾಗಿ ಹಳಕಟ್ಟಿಯವರಿಗೆ ಸಾಹಿತ್ಯವೆಂಬುದು ರಕ್ತಗತವಾಗಿ ಒಲಿದುಬಂದಿತ್ತು.

**ವಿದ್ಯಾಭ್ಯಾಸ :** ಹಳಕಟ್ಟಿಯವರು ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿ, 1896ರಲ್ಲಿ ಮೆಟ್ರಿಕ್ ಮುಗಿಸಿದರು. 1901ರಲ್ಲಿ ಮುಂಬಯಿಯಲ್ಲಿ ಬಿ.ಎ. ಪದವಿಯನ್ನು ಪಡೆದರು. ಕಾನೂನುಶಾಸ್ತ್ರವನ್ನು ಅಧ್ಯಯನ ಮಾಡಿ, 1904ರಲ್ಲಿ ಕಾನೂನು ಪದವಿಯನ್ನು

ಪಡೆದರು. ಕನ್ನಡ ಸ್ನಾತಕೋತ್ತರ ಪರೀಕ್ಷೆಗೆ ಐಚ್ಛಿಕವಾಗಿ ಅಧ್ಯಯನ ಮಾಡಿದರೂ, ಅನಿವಾರ್ಯ ಕಾರಣಗಳಿಂದಾಗಿ ಪರೀಕ್ಷೆಯನ್ನು ತೆಗೆದುಕೊಳ್ಳಲಾಗಲಿಲ್ಲ. ಆದರೂ ಓದುವ ಬರೆಯುವ ಉತ್ಸಾಹ ಹಾಗೆ ಮುಂದುವರೆಯಿತು.

**ಕಾರ್ಯಕ್ಷೇತ್ರ :** ಬೆಳಗಾವಿಯಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರೂ ಕೆಲವು ತಿಂಗಳುಗಳಲ್ಲೇ ಕಾರಣಾಂತರಗಳಿಂದ ಬೆಳಗಾವಿಯಿಂದ ವಿಜಯಪುರಕ್ಕೆ ವಾಸ್ತವ್ಯ ಬದಲಾಯಿಸಿದರು. ಅಲ್ಲಿಂದೀಚೆಗೆ ವಿಜಯಪುರವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಹಳಕಟ್ಟಿಯವರ ದಕ್ಷ ವಕೀಲಿ ವೃತ್ತಿಯನ್ನು ಗಮನಿಸಿದ ಸರ್ಕಾರ ಅವರನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಸರ್ಕಾರಿ ಪ್ಲೀಡರ್‌ರೆಂದು ನೇಮಿಸಿತು. ವಿಜಯಪುರದಲ್ಲಿ ಬಹುಬೇಗ ಜನಾನುರಾಗಿಗಳೂ, ಜನದಭಿಮಾನಕ್ಕೆ ಪಾತ್ರರಾದವರು ಹಳಕಟ್ಟಿಯವರು.

**ಸಮಾಜಸೇವೆ :** ವಕೀಲಿ ವೃತ್ತಿಯನ್ನು ಕೈಗೊಂಡ ಮೇಲೆ ಅದಕ್ಕಾಗಿ ಊರೂರುಗಳನ್ನು ಅಲೆಯಬೇಕಾಗುತ್ತಿತ್ತು. ಆ ಸಂದರ್ಭದಲ್ಲಿ ಅವರು ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಮಠಮಾನ್ಯಗಳು, ಧಾರ್ಮಿಕ ಸ್ಥಳಗಳಿಗೆ ಹೋಗಿಬರುತ್ತಿದ್ದರು. ಕೆಲವೊಮ್ಮೆ ಮಹತ್ವದ ಓಲೆಗರಿಗಳ ಕಟ್ಟುಗಳನ್ನು ಹಣ ಕೊಟ್ಟು ಕೊಳ್ಳುತ್ತಿದ್ದರು. ತಂದ ಹಸ್ತಪ್ರತಿಗಳನ್ನು ವರ್ಗೀಕರಿಸುವುದು, ಪ್ರತಿ ಮಾಡುವುದನ್ನು ಹಳಕಟ್ಟಿಯವರು ತಮ್ಮ ವಕೀಲ ವೃತ್ತಿಯ ಜೊತೆಗೆ ರೂಢಿಸಿಕೊಂಡು ಬಂದರು.

ಪ್ರಸಿದ್ಧ ವಕೀಲರಾಗಿ ರೂಪುಗೊಂಡ ಇವರು ತಮ್ಮ ಜನಪ್ರಿಯತೆಯಿಂದಲೇ 1905ರಲ್ಲಿ ವಿಜಾಪುರ ನಗರಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು. 1910ರಲ್ಲಿ ನಾಡಿನ ಪ್ರಸಿದ್ಧ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಬಿ.ಎಲ್.ಡಿ.ಇ. ಸಂಸ್ಥೆಯನ್ನು ಪ್ರಾರಂಭಿಸುವುದರ ಮೂಲಕ ಶಿಕ್ಷಣ ಕ್ರಾಂತಿಗೆ ಬೀಜಾಂಕುರ ಹಾಕಿದರು. ಇಂದು ಅದು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಶಿಕ್ಷಣ ಕೇಂದ್ರವಾಗಿ, ನೂರಾರು ಕುಟುಂಬಗಳಿಗೆ ಆಶ್ರಯ ನೀಡಿದಂತಾಗಿದೆ. 1912ರಲ್ಲಿ ಸಿದ್ಧೇಶ್ವರ ಸಂಸ್ಥೆ, 1913ರಲ್ಲಿ ಸಹಕಾರಿ ಸಂಘ, 1914ರಲ್ಲಿ ಸಿದ್ಧೇಶ್ವರ ಪ್ರೌಢಶಾಲೆಯನ್ನು ಸ್ಥಾಪಿಸಿದರು.

ಜಿಲ್ಲಾ ಲೋಕಲ್ ಬೋರ್ಡ್ ಸದಸ್ಯರಾಗಿ ಸೇವೆ ಸಲ್ಲಿಸಿದರು. 1917ರಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು. 1920ರಲ್ಲಿ ಮುಂಬೈ ವಿಧಾನಪರಿಷತ್ತಿನ ಸದಸ್ಯರಾದ ಇವರು ತಮ್ಮ ಶಾಸನಬದ್ಧ ಅಧಿಕಾರದಿಂದ ಕನ್ನಡವನ್ನು ಗಟ್ಟಿಗೊಳಿಸಲು, ಪುಷ್ಟಿಗೊಳಿಸಲು, ಒಟ್ಟಾರೆ ಸಮೃದ್ಧವಾಗಿ ಕನ್ನಡ ಕಟ್ಟಲು ಪ್ರಾಮಾಣಿಕವಾಗಿ ದುಡಿದು ಅಜರಾಮರ ಕೆಲಸ ಮಾಡಿದ್ದಾರೆ.

ಡಾ. ಫ.ಗು. ಹಳಕಟ್ಟಿಯವರು ವಕೀಲಿ ವೃತ್ತಿಯಲ್ಲಿ ಮುಂದುವರಿದಿದ್ದರೆ ಜನಪ್ರಿಯ ವಕೀಲರಾಗಿ ಸಾಕಷ್ಟು ಹಣ ಗಳಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಆವಾಗಲೇ ವಚನ ಸಾಹಿತ್ಯ ಅವರ ಮನಸ್ಸನ್ನು ಆಕರ್ಷಿಸಿತ್ತು. ಸಮಾಜಸೇವಾ ಕಾರ್ಯಗಳಿಗೆ

ತೊಡಗಿಸಿಕೊಳ್ಳಲೆಂದು 1926ರಲ್ಲಿ ವಕೀಲಿ ವೃತ್ತಿಗೆ ವಿದಾಯ ಹೇಳಿದರು. ಇಡೀ ಬದುಕನ್ನು ಸೇವಾಕಾರ್ಯಗಳಿಗೆ ಮೀಸಲಿಟ್ಟರು.

**ವೈವಾಹಿಕ ಜೀವನ :** ಹಳಕಟ್ಟಿಯವರು ವಿದ್ಯಾರ್ಥಿಯಾಗಿದ್ದಾಗಲೇ ಬನಹಟ್ಟಿಯ ಚಿಕ್ಕೋಡಿ ತಮ್ಮಣ್ಣಪ್ಪನವರ ಮಗಳಾದ ಭಾಗೀರಥಿದೇವಿಯವರೊಂದಿಗೆ 1897ರಲ್ಲಿ ವಿವಾಹವಾದರು. ಮಾವನವರಾದ ತಮ್ಮಣ್ಣಪ್ಪನವರು ಸಾಹಿತಿಗಳಾಗಿ, ಸಮಾಜದ ಗಣ್ಯವ್ಯಕ್ತಿಗಳಾಗಿದ್ದರು. ಸುಸಂಸ್ಕೃತ ಮನೆತನದ ಭಾಗೀರಥಿದೇವಿ ದಂಪತಿಗಳಿಗೆ ಚಂದ್ರಶೇಖರ, ಸರಸ್ವತಿ, ಗುರುಪುತ್ರಪ್ಪ, ಪಾರ್ವತಿ ಮತ್ತು ಶಿವಶಂಕರ ಎಂಬ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರು. ಹಳಕಟ್ಟಿಯವರು ತಮ್ಮ ಮಕ್ಕಳಲ್ಲಿ ಕ್ರೀಡಾಸಕ್ತಿಯನ್ನು ಬೆಳೆಸಿದ್ದರು. ಟೆನಿಸ್‌ಪಟುವಾಗಿದ್ದ ಚಂದ್ರಶೇಖರರವರು ದೆಹಲಿಯಲ್ಲಿ 1200 ರೂ.ಗಳ ವೇತನದೊಂದಿಗೆ ಉದ್ಯೋಗದಲ್ಲಿದ್ದಾಗ ಅಕಾಲ ಮರಣಕ್ಕೆ ತುತ್ತಾದರು. ಮಗನ ಶವಸಂಸ್ಕಾರಕ್ಕೆ ಹೋಗಿ ಬರಲು ಹಣವಿಲ್ಲದೆ, ಮತ್ತೊಬ್ಬರ ಸಹಾಯದಿಂದ ದಿಲ್ಲಿಗೆ ಹೋಗಿ ಬರುತ್ತಾರೆ. ಮತ್ತೆ ಪ್ರೀತಿಯ ಮಗಳೊಬ್ಬಳನ್ನು ಕಳೆದುಕೊಂಡಾಗ ಆ ದುಃಖವನ್ನು ಮರೆತು ತಮ್ಮ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.

ಬಸವಣ್ಣನವರು ಆಯ್ದಕ್ಕಿ ಮಾರಯ್ಯನನ್ನು ಕುರಿತು ಹೇಳಿದ ವಚನ ಹೀಗಿದೆ.

ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು
ಧನ ನೋಡಾ ಬಡವರು, ಘನಮನ ಸಂಪನ್ನರು
ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು
ಆರಿಗೂ ಉಪಮಿಸಬಾರದು

ಹಳಕಟ್ಟಿಯವರಿಗೆ ಹಳಕಟ್ಟಿಯವರೇ ಸಾಟಿ. ಇಷ್ಟೆಲ್ಲ ಪ್ರಸಿದ್ಧರಾಗಿದ್ದ ಅವರು ಕೊನೆಯವರೆಗೆ ಇದ್ದುದು ಬಾಡಿಗೆ ಮನೆಯಲ್ಲೇ. ಆ ಇಳಿವಯಸ್ಸಿನಲ್ಲೂ ಸಂಚಾರಕ್ಕೆ ಬಳಸುತ್ತಿದ್ದುದು ಅವರು ಸೈಕಲ್ಲನ್ನು. ಅವರಲ್ಲಿ ಹೆಚ್ಚಿಗೆ ಬಟ್ಟೆ ಇರಲಿಲ್ಲ. ಇರುವುದರಲ್ಲೇ ಸಂತೃಪ್ತ ಜೀವನ ಅವರದು.

ವಚನವಾಙ್ಮಯದ ವಿರಾಟ್‌ದರ್ಶನ ಮಾಡಿಸಿದ ಪ್ರಥಮ ಮಹನೀಯರು ಫ.ಗು. ಹಳಕಟ್ಟಿಯವರು. 250 ವಚನಕಾರರನ್ನು ಗುರುತಿಸಿದ್ದೇ ಅಲ್ಲದೆ, ಹರಿಹರನ 46 ರಗಳೆಗಳನ್ನು 7 ಸಂಪುಟಗಳಲ್ಲಿ ಹಾಗೂ ವಚನಶಾಸ್ತ್ರವನ್ನು 3 ಸಂಪುಟಗಳಲ್ಲಿ ಪ್ರಕಟಿಸಿದ ಅಂದಿನ ಕಾಲದ ಹೆಗ್ಗಳಿಕೆ ಇವರದು.

**ವಚನ ಸಾಹಿತ್ಯದ ಆಕರ್ಷಣೆ ಮತ್ತು ಸಂಪಾದನೆ :** ಹಳಕಟ್ಟಿಯವರು ತಮ್ಮ ಮಾವಂದಿರಾದ ತಮ್ಮಣ್ಣಪ್ಪ ಚಿಕ್ಕೋಡಿ ಇವರಿದ್ದ ಬನಹಟ್ಟಿಗೆ ಹೋಗಿ ಬರುತ್ತಿರುತ್ತಾರೆ. ಆ ಸಂದರ್ಭದಲ್ಲಿ (1903ರಲ್ಲಿ) ಶಿವಲಿಂಗಪ್ಪ ಪಂಚಾಳರವರ ಮನೆಗೆ ಹೋಗಿದ್ದಾಗ, ಅಲ್ಲಿ ಅವರಿಗೆ ಕೆಲವು ಪುರಾತನ ಗ್ರಂಥಗಳು ಮತ್ತು ವಚನ ತಾಡೋಲೆಗಳನ್ನು

ನೋಡಿ ಬಹಳ ಆಕರ್ಷಿತರಾಗುತ್ತಾರೆ. ಮಾವನವರಾದ ತಮ್ಮಣ್ಣಪ್ಪ ಚಿಕ್ಕೋಡಿಯವರು ತಾಡೋಲೆ ಮಹತ್ವದ ಬಗ್ಗೆ ತಿಳಿಸುತ್ತಾರೆ. ಹಳಕಟ್ಟಿಯವರು ರಬಕವಿ, ಬನಹಟ್ಟಿ, ಗೋಠೆ ಅನೇಕ ಊರುಗಳನ್ನು ಸುತ್ತಾಡಿ ತಾಡೋಲೆ ಗ್ರಂಥಗಳನ್ನು ಸಂಗ್ರಹಿಸುತ್ತಾರೆ. ವೀರಭದ್ರಪ್ಪನವರ ಪರಿಚಯದಿಂದ ಗೋಠೆ ಗ್ರಾಮಕ್ಕೆ ಹೋದಾಗ ಅಲ್ಲಿ ಹಳಕಟ್ಟಿಯವರಿಗೆ ಅತ್ಯಮೂಲ್ಯ ಗ್ರಂಥಭಾಷ್ಯರತ್ನಮಾಲೆ ನೋಡಲು ಸಿಕ್ಕಿದವು. ಅವು ಅವರ ಬದುಕಿನ ದಿಕ್ಕನ್ನೆ ಬದಲಿಸಿದ್ದವು. ಬಸವಾದಿ ಶರಣರ ವಚನ ಸಾಹಿತ್ಯ ಸಂಶೋಧನೆಗೆ ಮನಸ್ಸು ಆರಂಭಗೊಂಡಿತು.

ಫ.ಗು. ಹಳಕಟ್ಟಿಯವರು ಸಂಪಾದಿಸಿಕೊಟ್ಟ 'ವಚನಶಾಸ್ತ್ರಸಾರ' ಎಂಬ ಮೂರು ಬೃಹತ್ ಸಂಪುಟಗಳು ವಚನ ಸಾಹಿತ್ಯ ಇತಿಹಾಸದಲ್ಲಿ ಮೈಲುಗಲ್ಲುಗಳಾಗಿ ನಿಂತ ಮೇರುಕೃತಿಗಳಾಗಿವೆ. 'ಶೂನ್ಯ ಸಂಪಾದನೆ', 'ಏಕೋತ್ತರ ಶತಸ್ಥಲ' ಮುಂತಾದ ಹಲವಾರು ಮಹತ್ವದ ಮೌಲಿಕ ಗ್ರಂಥಗಳು ಹಳಕಟ್ಟಿಯವರ ಗಮನಾರ್ಹ ಕೊಡುಗೆಗಳಾಗಿವೆ. 'ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ', 'ಕೆಳದಿ ಸಂಸ್ಥಾನದ ರಾಯರ ವಂಶಾವಳಿ', 'ಹರಳಯ್ಯನ ತ್ರಿಪದಿ', 'ಅವಧೂತಗೀತೆ', 'ವರದಾನಿ ಗುಡ್ಡಮ್ಮೆಯ ಚರಿತ್ರೆ', 'ಶಿವಶರಣರ ಪದಗಳು', 'ಕೃಷಿಜ್ಞಾನ ಪ್ರದೀಪಿಕೆ', 'ಹರಿಹರನ ರಗಳೆಗಳು', 'ಶಿವಶರಣರ ಚರಿತ್ರೆಗಳು' – ಇವೇ ಮೊದಲಾದ ಅಪರೂಪದ ಗ್ರಂಥಗಳನ್ನು ಫ.ಗು. ಹಳಕಟ್ಟಿಯವರು ಪ್ರಕಟಿಸಿ ಹೊರತರುವ ಮೂಲಕ ತಮ್ಮ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಸಾಕ್ಷಿಗೊಳಿಸಿದ್ದಾರೆ.

ಹಳಕಟ್ಟಿಯವರ ಆರ್ಥಿಕ ಮುಗ್ಗಟ್ಟು, ಓದುಗರ ಅನಾಸಕ್ತಿ, ಕೌಟುಂಬಿಕ ಆಘಾತಗಳು, ನಿರಂತರ ಅನಾರೋಗ್ಯ ಮೊದಲಾದ ಅಡ್ಡಿ–ಆತಂಕಗಳ ನಡುವೆ ಇಷ್ಟೊಂದು ಸಾಹಿತ್ಯ ಕೃಷಿ ಮಾಡಿದ್ದು ಪವಾಡಸದೃಶವೆನಿಸುತ್ತದೆ.

**ಪತ್ರಿಕಾ ಕ್ಷೇತ್ರ :** ಹಳಕಟ್ಟಿಯವರ ಪತ್ರಿಕೋದ್ಯಮದ ಸೇವೆ ದಾಖಲಾರ್ಹವಾದದ್ದು. 'ಶಿವಾನುಭವ' ಮಾಸಪತ್ರಿಕೆಯನ್ನು 1926ರಲ್ಲಿ ಪ್ರಾರಂಭಿಸಿ 35 ವರ್ಷಗಳವರೆಗೆ ನಿರಂತರವಾಗಿ ನಡೆಸಿಕೊಂಡು ಬಂದರು. ಶಿವಾನುಭವ ಪತ್ರಿಕೆಯ ಸಂಚಿಕೆಗಳನ್ನು ವಿದ್ವಾಂಸರು ಲಿಂಗಾಯತ ಧರ್ಮದ ವಿಶ್ವಕೋಶ ಎಂದು ಬಣ್ಣಿಸಿದ್ದುಂಟು. 'ನವಕರ್ನಾಟಕ' ಎಂಬ ವಾರಪತ್ರಿಕೆಯನ್ನು 1927ರಲ್ಲಿ ಪ್ರಾರಂಭಿಸಿ 25 ವರ್ಷಗಳ ಕಾಲ ಹೊರತಂದರು. ಈ ಎರಡೂ ಪತ್ರಿಕೆಗಳ ಮೂಲಕ ಫ.ಗು. ಹಳಕಟ್ಟಿಯವರು ಜನಸಾಮಾನ್ಯರಲ್ಲಿ ಧಾರ್ಮಿಕ, ರಾಜಕೀಯ, ಔದ್ಯೋಗಿಕ, ಸಾಹಿತ್ಯ, ಸಾಂಸ್ಕೃತಿಕ ಪ್ರಜ್ಞೆ ಬೆಳೆಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದರು. ಏಕವ್ಯಕ್ತಿ ಸಂಪಾದಕತ್ವದಲ್ಲಿ ಇಷ್ಟೊಂದು ದೀರ್ಘಕಾಲ ಪತ್ರಿಕೆಗಳು ನಡೆದುಕೊಂಡು ಬಂದಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

**ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ :** ಬಿ.ಎಲ್.ಡಿ.ಇ. (Bijapur Lingayath Development Education) ಸಂಸ್ಥೆ ಯನ್ನು ವಿಜಯಪುರ (ಬಿಜಾಪುರ)ದಲ್ಲಿ ಸ್ಥಾಪಿಸಿದ ಕೀರ್ತಿ ಡಾ. ಹಳಕಟ್ಟಿಯವರಿಗೆ ಸಲ್ಲುತ್ತದೆ. ಬಿಜಾಪುರ ಲಿಂಗಾಯತ ಶಿಕ್ಷಣ ಸಂಸ್ಥೆ ಎಂಬ ಹೆಸರಿನೊಂದಿಗೆ ಸಂಸ್ಥೆಗೆ ಶ್ರೀಕಾರ ಹಾಕಿದರು. ಮುಂದೆ ಹೈಸ್ಕೂಲ್‌ಗಳು, ಕಲೆ, ವಾಣಿಜ್ಯ, ವಿಜ್ಞಾನ ಕಾಲೇಜುಗಳ ಸ್ಥಾಪನೆಗೆ ನಾಂದಿ ಹಾಡಿದವು. ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು, ಬಿ.ಎಡ್. ಕಾಲೇಜು ಮೊದಲಾದ ಉನ್ನತ ಶಿಕ್ಷಣ ಸಂಸ್ಥೆಗಳು ಹಳಕಟ್ಟಿಯವರು ಹಾಕಿದ ಉದಾತ್ತ ತಳಹದಿಯ ಮೇಲೆ ಪ್ರಾರಂಭವಾಗಿ ಹೆಮ್ಮರ ಸಂಸ್ಥೆಯಾಗಿ ಬೆಳೆದಿದೆ. ಬೆಳಗಾವಿಯ ಕೆ.ಎಲ್.ಇ. ಸೊಸೈಟಿ ಮತ್ತು ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದ ಸ್ಥಾಪನೆಗೂ ಫ.ಗು. ಹಳಕಟ್ಟಿಯವರು ಪರೋಕ್ಷವಾಗಿ ನೆರವಾಗಿದ್ದಾರೆ. 1931ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಮತ್ತು ವಿಶ್ವವಿದ್ಯಾಲಯದ 'ಕನ್ನಡ ಬೋರ್ಡ್‌ಆಫ್ ಸ್ಟಡೀಸ್' ಸದಸ್ಯರಾಗಿಯೂ ಮಹತ್ವದ ಕಾರ್ಯ ನಿರ್ವಹಿಸಿದ್ದಾರೆ. ಇಂದು ಫ.ಗು. ಹಳಕಟ್ಟಿಯವರ ಸ್ಮರಣಾರ್ಥವಾಗಿ ಬಿ.ಎಲ್.ಡಿ.ಇ. ಸಂಸ್ಥೆಯವರು ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಿದ್ದಾರೆ.

**ಪ್ರಶಸ್ತಿ–ಗೌರವಗಳು :** ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ 1926ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡುವುದರ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಅವರಿಗೆ ಗೌರವವನ್ನು ಸಲ್ಲಿಸಿದೆ. ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದ ಫ.ಗು. ಹಳಕಟ್ಟಿಯವರು 1933ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಅಧಿವೇಶನದ ಅಧ್ಯಕ್ಷರಾಗಿದ್ದರು. 1964ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಹಳಕಟ್ಟಿಯವರಿಗೆ ಗೌರವ ಡಾಕ್ಟರೇಟನ್ನು ನೀಡಿ ತನ್ನನ್ನು ತಾವೆ ಗೌರವಿಸಿಕೊಂಡಿತು ಎಂದರೆ ತಪ್ಪಾಗಲಾರದು.

ಅಂದಿನ ರಾಜ್ಯಪಾಲರಾದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರು ವಿಜಯಪುರಕ್ಕೆ ಭೇಟಿ ನೀಡಿದ್ದಾಗ ಅವರು, ಫ.ಗು. ಹಳಕಟ್ಟಿಯವರ ಮನೆಗೆ ಹೋಗಿ ಫಲಪುಷ್ಪ ತಾಂಬೂಲಗಳನ್ನರ್ಪಿಸಿ ತಮ್ಮ ಗೌರವ ಸಮರ್ಪಣೆ ಮಾಡಿ ಬಂದರು. ಅಂದಿನ ಸರ್ಕಾರ 'ರಾವ್ ಸಾಹೇಬ' ಹಾಗೂ 'ರಾವ್ ಬಹದ್ದೂರ್' ಬಿರುದುಗಳನ್ನಿತ್ತು ಸನ್ಮಾನಿಸಿದೆ. ಕನ್ನಡದ ಕಣ್ವರೆನಿಸಿದ ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಡಾ. ಹಳಕಟ್ಟಿಯವರನ್ನು 'ವಚನ ಗುಮ್ಮಟ' ಎಂದು ಕರೆದು ಅವರನ್ನು ಗೌರವಿಸಿದ್ದಾರೆ. ವಚನಸಾಹಿತ್ಯದ ಸೇವೆಗಾಗಿ ಇವರನ್ನು ಕರ್ನಾಟಕದ ಮ್ಯಾಕ್ಸ್ ಮುಲ್ಲರ್ ಎಂದವರೂ ಉಂಟು. ತಮಿಳಿನಲ್ಲಿ 63 ಪುರಾತನರಿದ್ದಾರೆ. ಹಳಕಟ್ಟಿಯವರನ್ನು 64ನೆಯ ಪುರಾತನರೆಂದೂ ಕರೆಯುತ್ತಾರೆ. 'ವಚನ ಪಿತಾಮಹ', 'ನವಕರ್ನಾಟಕ ಶಿಲ್ಪಿ', 'ಯುಗಪುರುಷ', '771ನೆಯ ಅಮರಗಣಾಧೀಶ್ವರ' – ಹೀಗೆ ವಿವಿಧ ಗೌರವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಶರಣರಾಗಿದ್ದ ಫ.ಗು. ಹಳಕಟ್ಟಿಯವರು ಕಾಯವಂಚನೆ ಮಾಡಲಿಲ್ಲ. ತನ್ನದೆನ್ನುವುದೆಲ್ಲವನ್ನು ಸಕಲ ಜೀವಾತ್ಮರ ಲೇಸಿಗಾಗಿ ಈಡಾಡಿದ ಮಹಾಶರಣರವರು. ಅವರು ಉಪಮಾತೀತರು, ಕಾಲಕರ್ಮರಹಿತರು, ಭವವಿರಹಿತರು. ಇಂತಹ ಉದಾತ್ತ ಗುಣಗಳನ್ನು ಅಳವಡಿಸಿಕೊಂಡಿದ್ದ ಶಿವಶರಣ ಫ.ಗು. ಹಳಕಟ್ಟಿಯವರು 29 ಜೂನ್ 1964ರಂದು ಲಿಂಗೈಕ್ಯರಾದರು. ನಂತರ ಅವರ ಸ್ಮರಣಾರ್ಥ ರಾಜ್ಯ ಸರ್ಕಾರ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ನಾಡಿನಾದ್ಯಂತ ಆಚರಿಸಿ ಅವರಿಗೆ ಗೌರವ ಸಲ್ಲಿಸಿದೆ.

ಶರಣುವೊಗು ಜೀವನ ರಹಸ್ಯದಲ್ಲಿ ಸತ್ತ್ವದಲಿ ।
ಶರಣು ಜೀವನವ ಸುಮವೆನಿಪ ಯತ್ನದಲಿ ॥
ಶರಣಂತರಾತ್ಮ ಗಂಭೀರ ಪ್ರಶಾಂತಿಯಲಿ ।
ಶರಣು ವಿಶ್ವಾತ್ಮದಲಿ – ಮಂಕುತಿಮ್ಮ ॥

ಎಂದು ಡಿ.ವಿ.ಜಿ.ಯವರು ಹೇಳಿದ್ದಾರೆ.

ಫ.ಗು. ಹಳಕಟ್ಟಿಯವರದು ಪರಿಶುದ್ಧ ಚಾರಿತ್ರ್ಯ. ಯಾರೇ ಸಹಾಯ ಮಾಡಿದರೂ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಹೃದಯ ಸಂಪನ್ನರಾಗಿದ್ದರು. ಕಾಯಕವನ್ನು ಪೂಜೆ ಎಂದು ದುಡಿದ ಅವರ ಶ್ರಮ ಸಂಸ್ಕೃತಿ ಇತರರಿಗೆ ಆದರ್ಶವಾಗಿದೆ. ಕನ್ನಡನಾಡು–ನುಡಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ ಪ್ರಾತಃಸ್ಮರಣೀಯರಲ್ಲಿ ಒಬ್ಬರಾಗಿದ್ದಾರೆ. □

?

!

- ಅಲ್ಲಮಪ್ರಭು

## ಗ್ರಂಥ ಪರಾಮರ್ಶೆ

ಡಾ. ಪ್ರದೀಪ್‌ಕುಮಾರ ಹೆಬ್ರಿಯವರ ನಡೆದಾಡಿದ ದೇವರು, ರಕ್ಷಿಸು ನಮ್ಮನನವರತ, ಕೃಷ್ಣ ಬಸವರ ಧ್ಯಾನ ಮತ್ತು ಕಾವೇರಿಪುತ್ರ – ನಾಲ್ಕು ಪುಸ್ತಕಗಳು ಅತ್ಯುತ್ತಮವಾಗಿ ಮೂಡಿಬಂದಿವೆ.

"ನಡೆದಾಡಿದ ದೇವರು" ಕೃತಿಯಲ್ಲಿ ಸಿದ್ಧಗಂಗೆಯ ಸಿದ್ಧಪುರುಷರ ಯಶೋಗಾಥೆಯನ್ನು ಗದ್ಯಗಾಥೆಯಾಗಿ ಪ್ರಚುರಪಡಿಸಿ ಆ ಶತಾಯುಷಿಗಳಿಗೆ ಕೃತಜ್ಞತೆಯ ಶ್ರದ್ಧಾಂಜಲಿ ಅರ್ಪಿಸಲಾಗಿದೆ. ಕನಕದಾಸರ ಸುಪ್ರಸಿದ್ಧ ಕೃತಿ 'ಹರಿಭಕ್ತಿಸಾರ'ದ 108 ಪದ್ಯಗಳಿಗೆ ಸರಳ ಕನ್ನಡದಲ್ಲಿ ನೀಡಿರುವ ವ್ಯಾಖ್ಯಾನವು ಮೂಲಕೃತಿಯನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವುದರಲ್ಲಿ ಸಾಫಲ್ಯ ಪಡೆದಿದೆ. ಶ್ರೀಕೃಷ್ಣನನ್ನು ಮರೆಯಲಾಗದೆ, ಬಸವಣ್ಣನನ್ನು ಬಿಡಲಾಗದೆ ತಲ್ಲಣಿಸುವ ಕವಿಚೇತನದ ಕಾವ್ಯಾತ್ಮಕ ಅಭಿವ್ಯಕ್ತಿಯಲ್ಲಿ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಒಂದು ಧೀರ ಪ್ರಯತ್ನ "ಕೃಷ್ಣ ಬಸವರ ಧ್ಯಾನ"ದಲ್ಲಿ ಪ್ರಸ್ತುತಿಗೊಂಡಿದೆ. ಮಂಡ್ಯ ಜಿಲ್ಲೆಯ ಭಗೀರಥರು, ಜನಾನುರಾಗಿ ಹೋರಾಟಗಾರರು ಆದ ಶ್ರೀ ಜಿ. ಮಾದೇಗೌಡರ ಜೀವನ ಸಾಧನೆಗಳನ್ನು ಷಟ್ಪದಿಯಲ್ಲಿ ರಚಿಸಿರುವುದು ಲೇಖಕರ ಗುಣಗ್ರಾಹಿತನಕ್ಕೆ ಸಾಕ್ಷಿ. ಸಮಕಾಲೀನ ಸಾಧಕರೊಬ್ಬರ ಬಗ್ಗೆ ಹೀಗೆ ಕಾವ್ಯಕೃತಿಯೊಂದು ರಚಿತವಾಗಿರುವುದು ತುಂಬ ಅಪರೂಪದ ಪ್ರಯತ್ನ.

* * *

ಡಾ. ಎಸ್.ಆರ್. ಗುಂಜಾಳರವರ "ಲಿಂಗಾಯತ ಧರ್ಮದ ಕೈಪಿಡಿ" ಮತ್ತು " ತಾಯಿಯ ನೆನಪಿನಲ್ಲಿ ದತ್ತಿ ಶಾಲೆ" ಇವೆರಡೂ ಸಾರತಃ ಶರಣಮೌಲ್ಯಗಳನ್ನು ಪ್ರತಿಬಿಂಬಿಸುವಂತಿವೆ. "ಲಿಂಗಾಯತ ಧರ್ಮದ ಕೈಪಿಡಿ"ಯಲ್ಲಿ ಉತ್ತಂಗಿ ಚನ್ನಪ್ಪನವರ ವಿಚಾರಧಾರೆ ತುಂಬ ಸಮರ್ಪಕವಾಗಿ ಮೂಡಿಬಂದಿದೆ. ಕ್ರೈಸ್ತ ಧರ್ಮಕ್ಕೆ ಸೇರಿದರೂ ಅವರ ಅಂತರಾಳದಲ್ಲಿ ಶರಣಧರ್ಮದ ಸೆಳೆತ ಇದ್ದುದು ಗಮನಾರ್ಹ. ಚಿಂತನಾಪ್ರಧಾನವಾದ ಈ ಕೃತಿ ಸರಳ ಶೈಲಿಯಲ್ಲಿದ್ದು ಓದಿಸಿಕೊಂಡು ಹೋಗುತ್ತದೆ.

"ತಾಯಿಯ ನೆನಪಿನಲ್ಲಿ ದತ್ತಿ ಶಾಲೆ" ಒಂದು ಅಪರೂಪದ ಕೃತಿ. ಹಳ್ಳಿಯನ್ನು ತೊರೆದು ಪಟ್ಟಣಗಳಲ್ಲಿ ಜೀವನ ರೂಪಿಸಿಕೊಳ್ಳುವವರು ಅವರವರ ಸ್ವಗ್ರಾಮಗಳಿಗೆ ಒಳಿತನ್ನು ಮಾಡುವ ಮೂಲಕ ಗ್ರಾಮಋಣವನ್ನು ತೀರಿಸುವ ಕರ್ತವ್ಯ ಮಾಡಬೇಕೆಂಬುದನ್ನು ಈ ಕೃತಿ ತಿಳಿಸುತ್ತದೆ. □

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಮೈಸೂರು ಶ್ರೀ ಸುತ್ತೂರು ಮಠಕ್ಕೆ ಆಸ್ಟ್ರೇಲಿಯದ ಸಂಸದೀಯ ನಿಯೋಗದ ಭೇಟಿ**

ಆಸ್ಟ್ರೇಲಿಯದ ಸಂಸದೀಯ ನಿಯೋಗವು ಭಾರತಕ್ಕೆ ವಿವಿಧ ಕ್ಷೇತ್ರಗಳ ಅಧ್ಯಯನ ನಡೆಸಲು ಆಗಮಿಸಿದ್ದರು. ಅಸೆಂಬ್ಲಿಯ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀಮತಿ ಮಿಚೆಲ್ ರಾಬರ್ಟ್ಸ್‌ರವರ ಅಧ್ಯಕ್ಷತೆಯಲ್ಲಿ ವಿರೋಧ ಪಕ್ಷದ ನಾಯಕರಾದ ಡಾ. ಡೇವಿಡ್ ಹನಿ, ಶಾಸಕರುಗಳಾದ ಡಾ. ಜಗದೀಶ್ ಕೃಷ್ಣನ್, ಶ್ರೀಮತಿ ಕ್ಯಾಸಂಡ್ರ ರೋ, ಶ್ರೀ ಡೇವಿಡ್ ಸ್ಕೈಫ್‌ರವರುಗಳು ತಂಡದೊಂದಿಗೆ ಆಗಮಿಸಿದ್ದರು.

ಈ ಭೇಟಿಯ ಅವಧಿಯಲ್ಲಿ ಜೂನ್ 1 ಗುರುವಾರದಂದು ಮೈಸೂರು ಶ್ರೀ ಸುತ್ತೂರು ಮಠಕ್ಕೆ ಆಗಮಿಸಿ ಪರಮಪೂಜ್ಯ ಜಗದ್ಗುರುಗಳವರನ್ನು ಭೇಟಿ ಮಾಡಿ ಸಮಾಲೋಚಿಸಿದರು. ಜೆಎಸ್‌ಎಸ್ ಸಂಸ್ಥೆಗಳು ಆಸ್ಟ್ರೇಲಿಯದ ವಿವಿಧ ವಿಶ್ವವಿದ್ಯಾನಿಲಯಗಳೊಂದಿಗೆ ಹೊಂದಿರುವ ಪರಸ್ಪರ ಒಡಂಬಡಿಕೆಗಳ ವಿವರಗಳನ್ನು ಅವರ ಗಮನಕ್ಕೆ ತರಲಾಯಿತು. ಅದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಜೆಎಸ್‌ಎಸ್ ಸಂಸ್ಥೆಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಗೂ ಬೋಧಕರು ಅಲ್ಲಿಯ ವಿವಿಧ ವಿಶ್ವವಿದ್ಯಾನಿಲಯಗಳೊಂದಿಗೆ ಶೈಕ್ಷಣಿಕ ವಿನಿಮಯಗಳ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು, ಭಾರತ ಮತ್ತು ಆಸ್ಟ್ರೇಲಿಯಗಳ ನಡುವಿನ ಸಂಬಂಧ ಮತ್ತಷ್ಟು ವೃದ್ಧಿಯಾಗಲು ಪ್ರಯತ್ನಿಸುವುದಾಗಿ ತಿಳಿಸಿದರು. ನಿಯೋಗದ ಪ್ರತಿನಿಧಿಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್, ಕೆಎಸ್‌ಓಯು ಕುಲಪತಿಗಳಾದ ಪ್ರೊ. ಶರಣಪ್ಪ ಹಲಸೆ, ಪಶ್ಚಿಮ ಬಂಗಾಳದ ಐಎಎಸ್ ಅಧಿಕಾರಿಗಳಾದ ಶ್ರೀ ಕೆಂಪಹೊನ್ನಯ್ಯ, ಕುಲಸಚಿವರಾದ ಡಾ. ಬಿ. ಮಂಜುನಾಥ್ ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಹಾಗೂ ವಿವಿಧ ನಿಕಾಯಗಳ ಮುಖ್ಯಸ್ಥರು ಭಾಗವಹಿಸಿದ್ದರು.

**ಸರಳತೆ ಮತ್ತು ಸೌಜನ್ಯತೆಯ ಸಾಕಾರವಾಗಿದ್ದ ಶ್ರೀ ಎಸ್.ಆರ್. ಬೊಮ್ಮಾಯಿ**

ಮಾಜಿ ಮುಖ್ಯಮಂತ್ರಿ ಶ್ರೀ ಎಸ್.ಆರ್. ಬೊಮ್ಮಾಯಿಯವರು ಸರಳತೆ ಮತ್ತು ಸೌಜನ್ಯತೆಯನ್ನು ಅವರ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡಿದ್ದರು ಎಂದು ಪರಮಪೂಜ್ಯ

ಜಗದ್ಗುರುಗಳವರು ಜೂನ್ 6ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ ಶ್ರೀ ಎಸ್.ಆರ್. ಬೊಮ್ಮಾಯಿಯವರ ಜನ್ಮಶತಮಾನೋತ್ಸವ ಉದ್ಘಾಟನೆ ಮತ್ತು ಪುಸ್ತಕ ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಎಸ್.ಆರ್. ಬೊಮ್ಮಾಯಿಯವರು ಡಾ. ಎಂ.ಎನ್. ರಾಯ್‌ರವರ ಚಿಂತನೆಗಳಿಂದ ಪ್ರೇರಿತರಾಗಿ ರಾಜಕೀಯಕ್ಕೆ ಬಂದವರು. ಸಂಘರ್ಷವನ್ನು ಸಮನ್ವಯತೆಯನ್ನಾಗಿ ಪರಿವರ್ತಿಸಿದವರು. ಇಂದು ಪ್ರಜಾಪ್ರಭುತ್ವ ಹಣದಿಂದಾಗಿ ದಾರಿ ತಪ್ಪುತ್ತಿದೆ ಎಂಬ ಚರ್ಚೆ ನಡೆಯುತ್ತಿದೆ. ಇದನ್ನು ಸರಿದಾರಿಗೆ ತರುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಶ್ರೀ ಎಸ್.ಎಂ. ಕೃಷ್ಣರವರು ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ ಎಂಬ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಶ್ರೀ ಎಸ್.ಆರ್. ಬೊಮ್ಮಾಯಿಯವರ ರಾಜಕಾರಣದ ಕಾಲಘಟ್ಟ ನೋಡಿದಾಗ ಅವರು ಹೋರಾಟದಲ್ಲಿ ಜಯ ಗಳಿಸಿದ್ದು ಒಂದು ವಿಸ್ಮಯ. ರಾಜಕಾರಣದಲ್ಲಿ ಅವರು ಕೆಲವು ಸಲ್ಲದ ವರ್ತನೆಗಳಿಗೆ ಕಡಿವಾಣ ಹಾಕಿದ್ದರು ಎಂದು ತಿಳಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕವನ್ನು ಪರ್ಯಾಯ ರಾಜಕಾರಣದ ಪ್ರಯೋಗಶಾಲೆಯನ್ನಾಗಿ ಮಾಡಿದ ಕೀರ್ತಿ ಶ್ರೀ ಎಸ್.ಆರ್. ಬೊಮ್ಮಾಯಿಯವರಿಗೆ ಸಲ್ಲುತ್ತದೆ. ವಿದ್ಯಾರ್ಥಿ ದೆಸೆಯಲ್ಲಿ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಏಕೀಕರಣದ ಪರ ಹೋರಾಡಿದರು. ಅವರ ಅಧಿಕಾರಾವಧಿ ಕಡಿಮೆಯಾಗಿದ್ದರೂ ಅವರು ತೆಗೆದುಕೊಂಡ ಜನಪರ ತೀರ್ಮಾನಗಳು ಐತಿಹಾಸಿಕವಾದವು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಪ್ರಕಟಿಸಿದ್ದ 'ದ ರ್‍ಯಾಡಿಕಲ್ ಹ್ಯೂಮನಿಸ್ಟ್' ಕೃತಿ ಬಿಡುಗಡೆಗೊಳಿಸಲಾಯಿತು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು, ಮಾತನಾಡಿದರು. ಶಾಸಕರು ಮತ್ತು ಮಾಜಿ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ.ಎಲ್. ಶಂಕರ್‌ರವರು ಅನುಭವಗಳನ್ನು ಮೆಲುಕು ಹಾಕಿದರು. ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಮಹೇಶ್ ಬೊಮ್ಮಾಯಿ ಉಪಸ್ಥಿತರಿದ್ದರು. ಡಾ. ಸಿ. ಸೋಮಶೇಖರ್ ಸ್ವಾಗತಿಸಿದರು.

**ಸಾಂಪ್ರದಾಯಿಕ ಚಿಕಿತ್ಸಾ ವಿಧಾನಗಳನ್ನು ಎಂದಿಗೂ ಮರೆಯಬಾರದು**

ಸಾಂಪ್ರದಾಯಿಕ ಚಿಕಿತ್ಸಾ ವಿಧಾನಗಳನ್ನು ಎಂದಿಗೂ ಮರೆಯಬಾರದು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 8ರಂದು ಮೈಸೂರು ಜೆಎಸ್‌ಎಸ್ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ 'ಉನ್ನತಿ – 2023' ನರರೋಗಗಳ ರಾಷ್ಟ್ರೀಯ ವಿಚಾರಸಂಕಿರಣದ ದಿವ್ಯ ಸಾನ್ನಿಧ್ಯ ವಹಿಸಿ

ತಿಳಿಸಿದರು. ಕಲಿಕೆ ಚಲನಶೀಲತೆಯನ್ನು ಪ್ರತಿನಿಧಿಸುತ್ತದೆ. ಇಂದು ಆರೋಗ್ಯ ಸೇವೆಯಲ್ಲಿ ನಾನಾ ಪ್ರಯೋಗಗಳು ಆಗುತ್ತಿವೆ. ಆಧುನಿಕ ತಂತ್ರಗಳು ಸದಾ ವ್ಯಕ್ತಿಯನ್ನು ಕಾಯುತ್ತವೆ. ಆದರೆ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳು ಜೀವನದ ಅಂಗವಾಗಿವೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಕೇಂದ್ರದ ನಿರ್ದೇಶಕರಾದ ಡಾ. ಈಶ್ವರ್ ವಿ. ಬಸವರೆಡ್ಡಿಯವರು ಮೈಸೂರು ಭಾಗದಲ್ಲಿ ಅನೇಕ ಪಂಡಿತರು ಯೋಗದ ಮೂಲಕ ವಿಶ್ವಕ್ಕೆ ಪರಿಚಿತರಾಗಿದ್ದರು. ಮೈಸೂರನ್ನು ಯೋಗದ ತವರು ಎನ್ನಲಾಗುತ್ತದೆ. ಯೋಗದಲ್ಲಿ ವೈಜ್ಞಾನಿಕ ಚಿಕಿತ್ಸಾ ಪದ್ಧತಿ ಅಡಗಿದೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಯೋಗ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ಯೋಗ ಮತ್ತು ಆಯುರ್ವೇದಕ್ಕೆ ಪ್ರಾಚೀನ ಇತಿಹಾಸವಿದೆ. ಪ್ರಾಚೀನ ವೈದ್ಯ ಪದ್ಧತಿಗಳನ್ನು ಅಭ್ಯಾಸ ಮಾಡಬೇಕು. ಅದರ ವಿಧಾನಗಳನ್ನು ತಿಳಿದುಕೊಳ್ಳಬೇಕು, ಆಗ ಮಾತ್ರ ಯಶಸ್ವಿ ವೈದ್ಯರಾಗಲು ಸಾಧ್ಯ ಎಂದು ತಿಳಿಸಿದರು.

ಡಾ. ಸಿ.ಜಿ. ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಸರ್ಬೇಶ್ವರ್‌ಕರ್ ಸ್ವಾಗತಿಸಿದರು. ಡಾ. ವೀಣಾ ಜಿ. ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಆರ್. ಮಹೇಶ್ ಮಾತನಾಡಿದರು. ಡಾ. ಕಾವ್ಯ ಮತ್ತು ಡಾ. ರಚನಾ ಪ್ರಾರ್ಥಿಸಿದರು. ಡಾ. ಆರ್. ಸುಮಾ ವಂದಿಸಿದರು. ಡಾ. ಬಿ.ಜಿ. ಮಧುಸೂದನ್ ಕಾರ್ಯಕ್ರಮ ನಿರೂಪಿಸಿದರು.

### ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅಗತ್ಯ

ಪ್ರತಿಯೊಂದು ಶಾಲೆಯಲ್ಲಿಯೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 12ರಂದು ಮೈಸೂರು ತಾಲ್ಲೂಕು ಕೀಳನಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಯಲ್ಲಿ ಕಲಿಸು ಫೌಂಡೇಷನ್ ಮತ್ತು ವೆಟೆಸ್ಕೋ ಟೆಕ್ನಾಲಜಿಯವರು ನೀಡಿರುವ 90ನೇ ಗ್ರಂಥಾಲಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಎಲ್ಲರೂ ಆಧುನಿಕ ಸೌಲಭ್ಯ ಉದ್ಯೋಗ ಮತ್ತು ಸವಲತ್ತುಗಳನ್ನು ಬಯಸುತ್ತಾರೆ. ಸಂಪನ್ಮೂಲಗಳ ಕೊರತೆಯ ಕಾರಣಕ್ಕಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಹಿಂದೇಟು ಹಾಕುತ್ತಾರೆ. ಪ್ರತಿಯೊಬ್ಬರೂ ಸಹಾಯಹಸ್ತ ನೀಡಿದಾಗ ಸರ್ಕಾರಿ ಶಾಲೆಗಳೂ ಪ್ರಗತಿ ಸಾಧಿಸಲಿವೆ ಎಂದು ಹೇಳಿದರು.

ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಸರ್ಕಾರಿ ಶಾಲೆಗಳೊಂದಿಗೆ ಕಲಿಸು ಫೌಂಡೇಷನ್ ಕೈಜೋಡಿಸಿ ಅಭಿವೃದ್ಧಿ ಮಾಡುತ್ತಿದೆ. ಅವರ ಈ ಕಾರ್ಯ ಶ್ಲಾಘನೀಯವಾದುದು. ವಿದ್ಯಾರ್ಥಿಗಳು ಒದಗಿಸಿರುವ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜೆಎಸ್ಎಸ್ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣ ಶಿಬಿರ ಆಯೋಜಿಸಲಾಗಿತ್ತು. ಜೆಎಸ್ಎಸ್ ಸಂಚಾರ ಚಿಕಿತ್ಸಾ ವಾಹನಕ್ಕೂ ಚಾಲನೆ ನೀಡಲಾಯಿತು.

ಶಾಸಕರುಗಳಾದ ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಸಿ.ಕೆ. ರಾಮಮೂರ್ತಿ, ಮಾಜಿ ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಹೆಚ್ಚುವರಿ ಪ್ರಾದೇಶಿಕ ಆಯುಕ್ತರಾದ ಶ್ರೀ ಪಿ. ಶಿವರಾಜು, ಉಪನಿರ್ದೇಶಕರಾದ ಶ್ರೀ ರಾಮಚಂದ್ರರಾಜೇ ಅರಸ್, ಶ್ರೀ ಗಿರೀಶ್ ರಾಮಸ್ವಾಮಿಯವರುಗಳು ಮಾತನಾಡಿದರು. ಕಲಿಸು ಫೌಂಡೇಷನ್‌ನ ಶ್ರೀ ಎಂ.ಎಂ. ನಿಖಿಲೇಶ್ ಸ್ವಾಗತಿಸಿದರು. ಶ್ರೀ ಮಾಲಂಗಿ ಸುರೇಶ್ ವಂದಿಸಿದರು. ಶ್ರೀಮತಿ ಎನ್. ಜಯಂತಿ ಕಾರ್ಯಕ್ರಮ ನಿರೂಪಿಸಿದರು.

**ಇಂದಿನ ಎಲ್ಲ ಸಮಸ್ಯೆಗಳಿಗೆ ವಚನಗಳಲ್ಲಿ ಪರಿಹಾರವಿದೆ**

ಇಂದಿನ ಎಲ್ಲ ಸಮಸ್ಯೆಗಳಿಗೆ ವಚನಗಳಲ್ಲಿ ಪರಿಹಾರವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 17ರಂದು ವಿಜಯಪುರದಲ್ಲಿ ಆಯೋಜಿಸಿದ್ದ 11ನೇ ರಾಜ್ಯಮಟ್ಟದ ಕದಳಿ ಸಮಾವೇಶದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಬಸವಾದಿ ಶರಣರು ಪ್ರತಿಪಾದಿಸಿದ ವಚನಗಳಲ್ಲಿ ಇಂದಿನ ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ಉತ್ತರವಿದೆ. ಶರಣರ ವಚನಗಳಲ್ಲಿ ಅದ್ಭುತವಾದ ಅಂತಹ ಶಕ್ತಿ ಅಡಗಿದೆ. ವಿಜಯಪುರ ಬಸವಣ್ಣನವರು, ಬಂಥನಾಳ ಶಿವಯೋಗಿಗಳು, ಡಾ. ಫ.ಗು. ಹಳಕಟ್ಟಿ, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಸಿದ್ಧೇಶ್ವರ ಸ್ವಾಮಿಗಳು ಹೀಗೆ ಇಂಥ ಅನೇಕ ಮಹಾನ್ ಶಕ್ತಿಗಳನ್ನು ನಾಡಿಗೆ ಕೊಡುಗೆಯಾಗಿ ನೀಡಿರುವ ಜಿಲ್ಲೆ ಎಂದು ಹೇಳಿದರು.

ಸಮ್ಮೇಳನಾಧ್ಯಕ್ಷರಾದ ಶ್ರೀಮತಿ ಶಶಿಕಲಾ ವಸ್ತ್ರದರವರು ಕಾಯಕ, ದಾಸೋಹ ತತ್ವದ ಮೇಲೆ ರೂಪಿತವಾಗಿರುವ ಶರಣ ಧರ್ಮವೇ ಜಾಗತಿಕ ಸಮಸ್ಯೆಗಳಿಗೆ ಸಂಪೂರ್ಣ ಪರಿಹಾರ ಒದಗಿಸಬಲ್ಲದು. ಅವುಗಳನ್ನು ಅನುಸರಿಸಬೇಕಾದ ಅವಶ್ಯಕತೆ ಇಂದಿನ ಸಮಾಜಕ್ಕಿದೆ. ಆದರೆ ಇಂದು ಶರಣರ ವಿಚಾರಗಳಿಂದ ವಿಮುಖವಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಶರಣರು ಜನರನ್ನು ತಲುಪಲು ಕನ್ನಡ ಭಾಷೆಯನ್ನು ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡರು. ಅತ್ಯಂತ ಸರಳ ಕನ್ನಡದಲ್ಲಿ ವಚನ ರಚನೆ ಮಾಡಿ, ಅವುಗಳ ಸಾರವನ್ನು ಸರ್ವರಿಗೂ ಸಾರಿದವರು ಎಂದರು.

ಸಮಾವೇಶದಲ್ಲಿ ಕದಳಿ ವಿಜಯ, ವಚನೋದ್ಯಾನ, ಶಿವದಾಸಿಮಯ್ಯ, ಶರಣಾಮೃತ, ಬಯಲು ಬೆಳಕು, ವಚನ ಒರತೆ ಕೃತಿಗಳು ಹಾಗೂ ಪ್ರೊ. ವಿಜಯಾದೇವಿರವರ 'ಒಲವು ಕವಿತೆಯಾದ ಅಲ್ಲಮ' ಸಿಡಿ ಲೋಕಾರ್ಪಣೆಗೊಂಡವು.

ಗದಗ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಇಳಕಲ್ ಶ್ರೀ ವಿಜಯ ಮಹಾಂತೇಶ ಮಠದ ಶ್ರೀ ಗುರು

ಮಹಾಂತ ಸ್ವಾಮಿಗಳು ಪರಿಷತ್ತಿನ ಗೌರವ ಸಲಹೆಗಾರರಾದ ಶ್ರೀ ಗೊ.ರು. ಚನ್ನಬಸಪ್ಪ, ಹಾಗೂ ಅಧ್ಯಕ್ಷರಾದ ಶ್ರೀ ಅಪ್ಪಾರಾವ್ ಅಕ್ಕೋಣಿ, ಶ್ರೀ ಜಂಬುನಾಥ ಕಂಚ್ಯಾಣಿ, ಡಾ. ವಿ.ಡಿ. ಐಹೊಳ್ಳಿರವರು ಉಪಸ್ಥಿತರಿದ್ದರು. ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು, ಮಾಜಿ ಸಚಿವರಾದ ಡಾ. ಲೀಲಾದೇವಿ ಆರ್. ಪ್ರಸಾದ್ ಮಾತನಾಡಿದರು. ಶ್ರೀಮತಿ ಸುಶೀಲಾ ಸೋಮಶೇಖರ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ. ಉಷಾದೇವಿ ಹಿರೇಮಠ ಸ್ವಾಗತಿಸಿದರು. ಶ್ರೀ ವಿ.ಸಿ. ನಾಗಠಾಣ ವಂದಿಸಿದರು.

**ಪ್ರತಿಯೊಬ್ಬರೂ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು**

ಪ್ರತಿಯೊಬ್ಬರೂ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 19ರಂದು ಮೈಸೂರಿನಲ್ಲಿ ಹೆಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಹಸಿರು ಮೈಸೂರು – ಲಕ್ಷ ವೃಕ್ಷ ಆಂದೋಲನದ ಸಸಿ ವಿತರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯ ಕೃತಕವಾಗಿ ಏನನ್ನೂ ಸೃಷ್ಟಿಸಲಾರ. ಪ್ರಕೃತಿ ನೀಡಿರುವ ಗಾಳಿ, ಬೆಳಕು, ನೀರು ಎಲ್ಲವನ್ನೂ ಶುದ್ಧವಾಗಿಟ್ಟುಕೊಳ್ಳಬೇಕು. ಎಲ್ಲರಿಗೂ ಆಧಾರವಾಗಿರುವ ಪರಿಸರವನ್ನು ನಾಶ ಮಾಡಬಾರದು. ಅನಿವಾರ್ಯವಾಗಿ ಮರ ಕಡಿದರೆ ಪರ್ಯಾಯವಾಗಿ ಗಿಡ ನೆಟ್ಟು ಬೆಳೆಸಬೇಕು ಎಂದು ಹೇಳಿದರು.

ವಿಸ್ತಾರ ನ್ಯೂಸ್‌ನ ಪ್ರಧಾನ ಸಂಪಾದಕರಾದ ಶ್ರೀ ಹರಿಪ್ರಕಾಶ್ ಕೋಣೆಮನೆಯವರು ಪರಿಸರ ದಿನಾಚರಣೆ ವೇಳೆ ಮಾತ್ರ ಪರಿಸರ ಸಂರಕ್ಷಣೆ ಬಗ್ಗೆ ಮಾತನಾಡುತ್ತೇವೆ. ಪರಿಸರ ಕಾಳಜಿ ನಿತ್ಯೋತ್ಸವವಾಗಬೇಕು. ನದಿ, ಜಲಮೂಲಗಳು ಇಲ್ಲದಿದ್ದರೆ ಕುಡಿಯಲು ನೀರು ಸಹ ಸಿಗುವುದಿಲ್ಲ ಎಂದರು.

ಶ್ರೀ ಹೆಚ್.ವಿ. ರಾಜೀವ್‌ರವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ವಿಕ್ರಂ ಮುತ್ತಣ್ಣ, ಶ್ರೀಮತಿ ಮಾಲತಿಪ್ರಿಯ, ಶ್ರೀ ವಿವೇಕ್ ಪಿ. ಪೈಸ್‌ರವರು ಮಾತನಾಡಿದರು. ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಶ್ರೀ ಬಿ.ಎಲ್. ಭೈರಪ್ಪ, ಶ್ರೀ ಗೋಕುಲ್ ಗೋವರ್ಧನ್, ಶ್ರೀ ಕುಮಾರ್, ಶ್ರೀ ಅಶೋಕ್ ಮತ್ತು ಶ್ರೀ ಲೀಲಾ ಶಿವಕುಮಾರ್‌ರವರುಗಳನ್ನು ಸನ್ಮಾನಿಸಲಾಯಿತು. ಶ್ರೀ ಬಸವರಾಜಸ್ವಾಮಿ ವಂದಿಸಿದರು. ಶ್ರೀ ಎಸ್. ನಂದೀಶ್ ಕಾರ್ಯಕ್ರಮ ನಿರೂಪಿಸಿದರು.

**ಸಂಘರ್ಷ ತೊಡೆದು ಸಾಮರಸ್ಯ ಬೆಸೆಯಬೇಕು**

ನೆರೆ ರಾಜ್ಯಗಳೊಂದಿಗಿನ ಸಂಘರ್ಷವನ್ನು ತೊಡೆದು ಹಾಕಿ ಸಾಮರಸ್ಯವನ್ನು ಬೆಸೆಯಬೇಕು ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಜೂನ್ 21ರಂದು ತಾಳವಾಡಿಯಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಗಡಿ

ಪ್ರದೇಶಗಳ ಅಭಿವೃದ್ಧಿಗಾಗಿಯೇ ಪ್ರಾಧಿಕಾರದ ರಚನೆಯಾಗಿದೆ. ಸಾಕಷ್ಟು ಉತ್ತಮ ಕಾರ್ಯಗಳು ಪ್ರಾಧಿಕಾರದಿಂದ ನಡೆಯುತ್ತಿವೆ. ಕರ್ನಾಟಕಕ್ಕೆ ಹೊಂದಿಕೊಂಡಿರುವ ಆರು ರಾಜ್ಯಗಳ ಗಡಿ ಪ್ರದೇಶಗಳು ವಿಭಿನ್ನ ಸಂಸ್ಕೃತಿ, ಭಾಷೆ, ಜೀವನಶೈಲಿಯನ್ನು ಹೊಂದಿವೆ. ಅಲ್ಲೆಲ್ಲ ಸಾಂಸ್ಕೃತಿಕ ಅಸ್ಮಿತೆಯನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ತಾಳವಾಡಿಯಲ್ಲೂ ಸಹ ಅಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರೇರಣೆ ನೀಡಿದವರು ಸುತ್ತೂರು ಶ್ರೀಗಳು. ಶ್ರೀಮಠ ಇಂತಹ ಮಾನವೀಯ ಮೌಲ್ಯಗಳಿಗೆ ಜಾಗತಿಕ ಸ್ಪರ್ಶವನ್ನು ನೀಡುತ್ತಾ ಬರುತ್ತಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ತಾಳವಾಡಿ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಸೇತುವೆ ಇದ್ದಂತೆ. ಸಾಂಸ್ಕೃತಿಕವಾಗಿ ಇಡೀ ದೇಶದಲ್ಲಿ ಹೆಚ್ಚು ಶ್ರೀಮಂತವಾಗಿರುವುದು ಕನ್ನಡನಾಡು. ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ನೆಲೆ ಬಯಸಿಬಂದ ಎಲ್ಲರಿಗೂ ಆಶ್ರಯವನ್ನು ಕಲ್ಪಿಸಿದೆ. ಕಾರಣಾಂತರಗಳಿಂದ ಕನ್ನಡ ಭಾಷೆಯನ್ನು ಮಾತನಾಡುವವರು ಒಂದೇ ಕಡೆ ನೆಲೆಸಲು ಸಾಧ್ಯವಾಗಿಲ್ಲದಿರಬಹುದು. ಆದರೆ ಭಾಷೆ, ಕಲಾಪ್ರಕಾರಗಳು, ಸಂಸ್ಕೃತಿಯನ್ನು ಮರೆತಿಲ್ಲ. ಅದನ್ನು ಉಳಿಸಿಕೊಳ್ಳ ಬೇಕಾದುದು ಎಲ್ಲರ ಕರ್ತವ್ಯ. ತಾಳವಾಡಿಯಲ್ಲಿ ಮಾತೃಭಾಷೆ ಕನ್ನಡ, ವ್ಯಾವಹಾರಿಕ ಭಾಷೆ ತಮಿಳು. ನೆರೆ ರಾಜ್ಯಗಳ ಭಾಷೆಗಳು ಕನ್ನಡದ ಸೋದರ ಭಾಷೆಗಳು. ಪ್ರಾಚೀನ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಬೇಕು. ಪೋಷಕರಿಗೆ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದಲ್ಲೇ ಓದಿಸಬೇಕು ಎನ್ನುವ ಮನೋಭಾವವಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವವರೆಲ್ಲರೂ ಕನ್ನಡ ಮಾಧ್ಯಮದಲ್ಲೇ ಓದಿದವರು ಎಂಬುದನ್ನು ನೆನೆಪಿಟ್ಟುಕೊಳ್ಳಬೇಕು. ಮಾತೃಭಾಷೆಯಲ್ಲಿ ಕಲಿಯಲು ಒತ್ತು ನೀಡಬೇಕು ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ವಿಶ್ವನಾಥ್ ಪಿ. ಹಿರೇಮಠರವರು ಗಡಿ ಪ್ರದೇಶಗಳ ಏಳ್ಗೆಗಾಗಿ ಪ್ರಾಧಿಕಾರ ಸಾಕಷ್ಟು ಶ್ರಮಿಸುತ್ತಿದೆ. ನಾಡು–ನುಡಿ ಸಂರಕ್ಷಣೆಗೆ ಸದಾ ಬದ್ಧವಾಗಿರಬೇಕು. ಸರ್ಕಾರ ಮಾಡುವ ಹಲವಾರು ಕಾರ್ಯಗಳನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಮಾಡುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಎಂ. ಭಾಗೀರಥಿಯವರು ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೇ ಸೇರಿಸಬೇಕು ಎನ್ನುವ ಭಾವನೆಯಿದೆ. ಆದರೆ ತಾಳವಾಡಿ ಪ್ರದೇಶದಲ್ಲಿ ಸಾಕಷ್ಟು ಕನ್ನಡ ಶಾಲೆಗಳೂ ಇವೆ, ಅಲ್ಲಿಯೂ ಸಹ ಮಕ್ಕಳನ್ನು ಸೇರಿಸಬೇಕು ಎಂದು ಹೇಳಿದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಮತ್ತೀಹಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ


ಶ್ರೀ ಮಲ್ಲಿಕಾರ್ಜುನಸ್ವಾಮಿ, ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಚನ್ನಂಜಪ್ಪನವರುಗಳು ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ವಿ. ಗೋಪಾಲ್, ಶ್ರೀ ಜೈಪುಲ್ ಜಯಶೇಖರ್, ಶ್ರೀ ಎಸ್. ಶಂಭುಲಿಂಗಪ್ಪ ಮತ್ತು ಶ್ರೀ ಸಿ. ಜಡೇಸ್ವಾಮಿ ಯವರುಗಳನ್ನು ಸನ್ಮಾನಿಸಲಾಯಿತು. ಬೆಂಗಳೂರಿನ ಮಾಜಿ ಉಪಮೇಯರ್‌ರಾದ ಶ್ರೀ ಬಿ.ಎಸ್. ಪುಟ್ಟರಾಜು, ತಾಳವಾಡಿ ಪಂಚಾಯತ್ ಯೂನಿಯನ್‌ನ ಚೇರಮನ್‌ರಾದ ಶ್ರೀಮತಿ ರತ್ನಮ್ಮ ಕಾಳನಾಯ್ಕ, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ದಾಕ್ಷಾಯಣಿ ಕುಮಾರ್, ಶ್ರೀಮತಿ ಸರ್ವಮಂಗಳ ಸೋಮಶೇಖರ್ ಉಪಸ್ಥಿತರಿದ್ದರು. ಶ್ರೀ ಜಿ. ಶಿವಣ್ಣ ಸ್ವಾಗತಿಸಿದರು. ಶ್ರೀ ಎಂ. ಬಸವಣ್ಣ ಪ್ರಾರ್ಥಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಕಾರ್ಯಕ್ರಮ ನಿರೂಪಿಸಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಕಾರ್ಯಕ್ರಮಕ್ಕೂ ಮೊದಲು ವೀರಗಾಸೆ, ನಂದಿಕಂಬ, ಮಂಗಳವಾದ್ಯ, ಕಂಸಾಳೆ, ಬ್ಯಾಂಡ್‌ಸೆಟ್ ತಂಡಗಳ ಕಲಾ ಉತ್ಸವ ಜರುಗಿತು.

**ಗಡಿಪ್ರದೇಶಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸುವ ಅಗತ್ಯವಿದೆ**

ಗಡಿಪ್ರದೇಶಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸುವ ಅಗತ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 22ರಂದು ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಆಯೋಜಿಸಿದ್ದ ಗಡಿನಾಡು ಸಾಂಸ್ಕೃತಿಕ ಉತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಗಡಿ ಭಾಗಗಳ ಜನರಿಗೆ ಮೂಲ ಸೌಲಭ್ಯಗಳನ್ನು ನೀಡುವ ಜತೆಗೆ ಶಿಕ್ಷಣ, ಆರೋಗ್ಯ, ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕು. ಮಹದೇಶ್ವರರು ನೆಲೆಸಿರುವ ಈ ನಾಡು ಜಾನಪದ ಕಲೆಗಳ ಬೀಡಾಗಿದೆ. ಕಲೆ ಮತ್ತು ಸಂಸ್ಕೃತಿ ಎರಡೂ ಅವಿನಾಭಾವ ಸಂಬಂಧವನ್ನು ಹೊಂದಿವೆ. ಗ್ರಾಮೀಣ ಪ್ರದೇಶದಲ್ಲಿ ಜಾನಪದ ಕಲೆಗೆ ಹೆಚ್ಚಿನ ಮಹತ್ವವಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಎಂ.ಆರ್. ಮಂಜುನಾಥ್‌ರವರು ಇಲ್ಲಿನ ಜನಪದ ಕಲೆ, ಸಂಸ್ಕೃತಿ ಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಗಡಿನಾಡು ಉತ್ಸವ ಆಯಾ ಪ್ರದೇಶದ ಅಭಿವೃದ್ಧಿ ಹಾಗೂ ಸಾಮರಸ್ಯ ಮೂಡಿಸಲು ಸಹಕಾರಿಯಾಗಲಿದೆ ಎಂದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಕಾತ್ಯಾಯಿನಿದೇವಿ, ಶ್ರೀ ಕೆ.ಬಿ. ಷಣ್ಮುಖಪ್ಪ ಮಾತನಾಡಿದರು. ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಮಳವಳ್ಳಿ ಮಹದೇವಸ್ವಾಮಿ ಗಾಯನ ಪ್ರಸ್ತುತ ಪಡಿಸಿದರು. ಕದಳಿ ಮಹಿಳಾ ವೇದಿಕೆಯವರು ಪ್ರಾರ್ಥಿಸಿದರು. □



-

**ವಚನಾಮೃತ–1**
ಶ್ರೀ ಎ.ಎಸ್. ಪಾವಟೆ
ಪ್ರ.: ಪೂಜ್ಯ ಶ್ರೀ ಗುರುಬಸವ ಪ್ರಕಾಶನ
ಅಮರಶೆಟ್ಟಿ ಗಲ್ಲಿ, ಬಾಗಲಕೋಟೆ
ಪು: 116, ಬೆಲೆ: 50/–

**ಇವಳ ಭಾರತ**
**(ಹೆಣ್ಣೋಡಲ ಹಾಡು ಪಾಡಿನ ಬರಹಗುಚ್ಛ)**
ಶ್ರೀಮತಿ ರೂಪ ಹಾಸನ
ಪ್ರ. ಪಲ್ಲವ ಪ್ರಕಾಶನ
ಎಮ್ಮಿಗೆನೂರು, ಬಳ್ಳಾರಿ
ಪು: 464, ಬೆಲೆ: 400/–

**Insipiring Youth**
M. Balachandra
Prof. M.B. Sadashivaiah
Pavadasree Prakashana
Pavada Sri Basavannadevara
Math, Nelamangala
Bengaluru Rural Dist.
P. 168, Price: 220/-

**Pearls of Wisdom**
**(Proren lines for useful life)**
Sri M. Balachandra
Pavadasree Prakashana
Pavada Sri Basavannadevara
Math, Nelamangala
Bengaluru Rural Dist.
P. 128, Price: 200/-

**ಹಸ್ತಪ್ರತಿತಜ್ಞ ಎಸ್. ಶಿವಣ್ಣ**
ಡಾ. ಬಿ. ನಂಜುಂಡಸ್ವಾಮಿ
ಪ್ರ. ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು: 108. ಬೆಲೆ: 50/–

**ಶಿವಶರಣೆಯರ ಸಾಹಿತ್ಯ ಚರಿತ್ರೆ**
ಡಾ. ವಿಜಯಶ್ರೀ ಸಬರದ
ಪ್ರ. ಕ್ರಿಯಾ ಮಾಧ್ಯಮ ಪ್ರೈ. ಲಿ.,
ಮಹಾಲಕ್ಷ್ಮಿ ಲೇಔಟ್, ಬೆಂಗಳೂರು
ಪು: 260. ಬೆಲೆ: 200/–

**ರಾಜಕಣಜ (ಡಾ. ವೀರಣ್ಣ ರಾಜೂರ ಅವರ ಸಮಗ್ರ ಕೃತಿಗಳ ಅಧ್ಯಯನ)**
ಡಾ. ವಿ.ಬಿ. ಸಣ್ಣಸಕ್ಕರಗೌಡರ
ಪ್ರ. ಎಸ್.ಎಲ್.ಎನ್. ಪಬ್ಲಿಕೇಷನ್
ಶಾಸ್ತ್ರೀನಗರ, ಬನಶಂಕರಿ 2ನೇ ಹಂತ
ಬೆಂಗಳೂರು
ಪು: 780, ಬೆಲೆ: 800/–

**ಹರಡಿದ ಹವಳ**
**(ಡಾ. ಬಿ.ವ್ಹಿ. ಶಿರೂರ ಅವರ ಕೃತಿ ವಿಮರ್ಶೆ)**
ಡಾ. ವಿ.ಬಿ. ಸಣ್ಣಸಕ್ಕರಗೌಡರ
ಪ್ರ. ಎಸ್.ಎಲ್.ಎನ್. ಪಬ್ಲಿಕೇಷನ್
ಶಾಸ್ತ್ರೀನಗರ, ಬನಶಂಕರಿ 2ನೇ ಹಂತ
ಬೆಂಗಳೂರು
ಪು: 208, ಬೆಲೆ: 250/–

**ಸಮನ್ವಿತ**
**(ವೈವಿಧ್ಯಮಯ ಕವನ ಸಂಕಲನ)**
ಶ್ರೀ ಸಿ. ಚನ್ನಶೆಟ್ಟಿ
ಪ್ರ. ಅನನ್ಯ ಪುಸ್ತಕಗಳು
ದೇವರಾಜ ಮೊಹಲ್ಲ
ಮೈಸೂರು
ಪು: 152, ಬೆಲೆ: 160/–

# ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
# 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ವೈ.ಸಿ. ಭಾನುಮತಿ**
# 1123, ಕೇಶವದೀಪ
ಲಲಿತಾದ್ರಿ 1ನೇ ಕ್ರಾಸ್
ಕುವೆಂಪುನಗರ, ಮೈಸೂರು 570023
ಮೊ: 9449828366

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಪ್ರಾಧ್ಯಾಪಕರು, ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು 570023
ಮೊ: 9845309081

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್ ಆಯುರ್ವೇದ
ಚಿಕಿತ್ಸಾಲಯ, ಬಿ.ಹೆಚ್. ರಸ್ತೆ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ತುಮಕೂರು 572102
ಮೊ : 9880996196

**ಪ್ರೊ. ಮೊರಬದ ಮಲ್ಲಿಕಾರ್ಜುನ**
#3/1288, 12ನೇ ಮೇನ್
ವಿಜಯನಗರ 4ನೇ ಹಂತ
ಮೈಸೂರು 570017
ಮೊ : 9986137389

**ಶ್ರೀ ನಗರ್ಲೆ ಶಿವಕುಮಾರ**
ಬಿನ್ ಲೇಟ್ ಪಟೇಲ್ ರಾಜಶೇಖರ
ನಗರ್ಲೆ ಅಂಚೆ
ನಂಜನಗೂಡು ತಾ.
ಮೊ: 9845609652

ಹಿಂಬದಿ ಪುಟದ ಚಿತ್ರ

ಆಸ್ಟ್ರೇಲಿಯದ ಲೆಜಿಸ್ಲೇಟಿವ್ ಅಸೆಂಬ್ಲಿಯ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀಮತಿ ಮಿಚೆಲ್ ರಾಬರ್ಟ್ಸ್‌ರವರ ಅಧ್ಯಕ್ಷತೆಯಲ್ಲಿ ವಿರೋಧ ಪಕ್ಷದ ನಾಯಕರಾದ ಡಾ. ಡೇವಿಡ್ ಹನಿ, ಶಾಸಕರುಗಳಾದ ಡಾ. ಜಗದೀಶ್ ಕೃಷ್ಣನ್, ಶ್ರೀಮತಿ ಕ್ಯಾಸಂಡ್ರ ರೋ, ಶ್ರೀ ಡೇವಿಡ್ ಸ್ಕೈಫ್ ಮೊದಲಾದವರುಗಳು ಭಾರತಕ್ಕೆ ವಿವಿಧ ಕ್ಷೇತ್ರಗಳ ಅಧ್ಯಯನ ನಡೆಸಲು ಆಗಮಿಸಿದ್ದ ಸಂದರ್ಭದಲ್ಲಿ ಮೈಸೂರು ಶ್ರೀ ಸುತ್ತೂರು ಮಠಕ್ಕೆ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಸಮಾಲೋಚಿಸಿದ ಸಂದರ್ಭದಲ್ಲಿ ಶ್ರೀಮಠದ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು (1 ಜೂನ್ 2023)



ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಮೈಸೂರು ಶ್ರೀ ಸುತ್ತೂರು ಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (22 ಮೇ 2023)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಪುದುಚೇರಿಯ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರಾದ ಶ್ರೀ ಎ.ಕೆ. ಸಾಯಿ ಸರವಣ್ ಕುಮಾರ್‌ರವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು (25 ಜೂನ್ 2023)




ವಿಜಯಪುರದಲ್ಲಿ ಆಯೋಜಿಸಿದ್ದ 11ನೇ ರಾಜ್ಯಮಟ್ಟದ ಕದಳಿ ಸಮಾವೇಶವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮ.ಗು. ಯಾದವಾಡ, ಶ್ರೀಮತಿ ಸುಶೀಲಾ ಸೋಮಶೇಖರ್, ಶ್ರೀ ಗೊ.ರು. ಚನ್ನಬಸಪ್ಪ, ಡಾ. ಉಷಾದೇವಿ ಹಿರೇಮಠ, ಶ್ರೀಮತಿ ಶಶಿಕಲಾ ವಸ್ತ್ರದ, ಶ್ರೀ ವಿ.ಸಿ. ನಾಗಠಾಣ ಹಾಗೂ ಶ್ರೀ ಜಂಬುನಾಥ ಕಂಚ್ಯಾಣಿ ಮೊದಲಾದವರುಗಳಿದ್ದಾರೆ (17 ಜೂನ್ 2023)



ಮೈಸೂರು ತಾಲ್ಲೂಕು ಕೀಳನಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಂಥಾಲಯ ಹಾಗೂ ಆಟದ ಮೈದಾನದ ಉದ್ಘಾಟನೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಎಂ.ಎಂ. ನಿಖಿಲೇಶ್, ಶಾಸಕರುಗಳಾದ ಶ್ರೀ ಸಿ.ಕೆ. ರಾಮಮೂರ್ತಿ, ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಕೀಳನಪುರ ಮಹದೇವಪ್ಪ, ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು, ಶ್ರೀ ರಾಮಚಂದ್ರರಾಜೇ ಅರಸ್, ಶ್ರೀ ಪಿ. ಶಿವರಾಜು, ಶ್ರೀ ಮಾಲಂಗಿ ಸುರೇಶ್ ಹಾಗು ಶಾಲಾ ಶಿಕ್ಷಕರುಗಳು ಮೊದಲಾದವರುಗಳಿದ್ದಾರೆ (12 ಜೂನ್ 2023)



ಬೆಂಗಳೂರಿನಲ್ಲಿ ರಕ್ಷಾ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಉಚಿತ ನೋಟ್ ಪುಸ್ತಕಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರ, ಸಂಸದರಾದ ಶ್ರೀ ತೇಜಸ್ವಿ ಸೂರ್ಯ, ಡಾ. ಸಿ.ಎನ್. ಮಂಜುನಾಥ್, ಶ್ರೀ ನಾ. ತಿಪ್ಪೇಸ್ವಾಮಿ ಹಾಗೂ ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿಯವರುಗಳಿದ್ದಾರೆ (24 ಜೂನ್ 2023)



ಬೆಂಗಳೂರಿನಲ್ಲಿ ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಫೌಂಡೇಷನ್ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಶ್ರೀ ಎಸ್.ಆರ್. ಬೊಮ್ಮಾಯಿಯವರ ಜನ್ಮಶತಮಾನೋತ್ಸವ ಉದ್ಘಾಟನೆಯ ಕಾರ್ಯಕ್ರಮದಲ್ಲಿ 'ದ ರ್‍ಯಾಡಿಕಲ್ ಹ್ಯೂಮನಿಸ್ಟ್' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಬಸವರಾಜ ಹೊರಟ್ಟಿ, ಶ್ರೀಮತಿ ಸಾಂತ್ವಾನ ಭಟ್ಟಾಚಾರ್ಯ, ಶ್ರೀ ಬಿ.ಎಲ್. ಶಂಕರ್, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎಸ್.ಎಂ. ಕೃಷ್ಣ, ಶ್ರೀ ಆರ್.ವಿ. ದೇಶಪಾಂಡೆ ಹಾಗೂ ಶ್ರೀ ಪಿ.ಜಿ. ಆರ್. ಸಿಂಧ್ಯರವರುಗಳಿದ್ದಾರೆ (6 ಜೂನ್ 2023)



ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ ಗಡಿನಾಡು ಸಾಂಸ್ಕೃತಿಕ ಉತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ರವಿಕುಮಾರ್, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ, ಸಾಲೂರ ಮಠದ ಶ್ರೀಗಳು, ಶಾಸಕರಾದ ಶ್ರೀ ಎಂ.ಆರ್. ಮಂಜುನಾಥ್, ಡಾ. ಸಿ. ಸೋಮಶೇಖರ್ ಶ್ರೀಮತಿ ಎಸ್. ಕಾತ್ಯಾಯಿನಿದೇವಿ ಮೊದಲಾದವರುಗಳಿದ್ದಾರೆ (22 ಜೂನ್ 2023)

Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 6, June 2023



ISSN 2583-7648

ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org